

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 16 ಸೋಮವಾರ 2026

ಮೈಸೂರು ಮಿತ್ರ 46 ಅತ್ಯುತ್ತಮ ಪತ್ರಿಕೋದ್ಯಮ

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 325 | ಪುಟಗಳು: 10
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಪಂಚ ರಾಜ್ಯಗಳ ಚುನಾವಣೆ ಫಿಕ್ಸ್

- ಅಸ್ಸಾಂ, ಕೇರಳ, ಪುದುಚೇರಿಯಲ್ಲಿ ಏ.9, ತಮಿಳುನಾಡಿನಲ್ಲಿ ಏ.23ರಂದು ಮತದಾನ
- ಏ.23, 29 ಪಶ್ಚಿಮ ಬಂಗಾಳದಲ್ಲಿ ಚುನಾವಣೆ; ಮೇ 4ರಂದು ಫಲಿತಾಂಶ

ನವದೆಹಲಿ: ಕೇಂದ್ರ ಚುನಾವಣಾ ಆಯೋಗವು ಬಹು ನಿರೀಕ್ಷಿತ ಪಂಚ ರಾಜ್ಯಗಳ ಚುನಾವಣಾ ದಿನಾಂಕವನ್ನು ಭಾನುವಾರ ಘೋಷಿಸಿದೆ.

ದೆಹಲಿಯಲ್ಲಿ ಚುನಾವಣಾ ಆಯೋಗದ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್, ಮೇ ತಿಂಗಳಲ್ಲಿ ವಿಧಾನ ಸಭೆಗಳ ಅವಧಿ ಕೊನೆಗೊಳ್ಳಲಿರುವ ಪಶ್ಚಿಮ ಬಂಗಾಳ, ಕೇರಳ, ತಮಿಳುನಾಡು, ಪುದುಚೇರಿ ಮತ್ತು ಅಸ್ಸಾಂ ಚುನಾವಣೆಗೆ ದಿನಾಂಕ ಘೋಷಿಸಿದ್ದಾರೆ. ಇದರೊಂದಿಗೆ ಈ ಎಲ್ಲಾ ರಾಜ್ಯಗಳಲ್ಲಿ ಮಾದರಿ ನೀತಿ ಸಂಹಿತೆ ಜಾರಿಗೆ ಬಂದಿದೆ.

ಅಸ್ಸಾಂ, ಕೇರಳ ಮತ್ತು ಪುದುಚೇರಿಯಲ್ಲಿ ಏಪ್ರಿಲ್ 9ರಂದು ಮತದಾನ ನಡೆಯಲಿದೆ. ತಮಿಳುನಾಡಿನಲ್ಲಿ ಏಪ್ರಿಲ್ 23ರಂದು ಮತದಾನ ನಡೆಯಲಿದೆ. ಪಶ್ಚಿಮ ಬಂಗಾಳದಲ್ಲಿ ಏಪ್ರಿಲ್ 23 ಮತ್ತು 29ರಂದು ಎರಡು ಹಂತಗಳಲ್ಲಿ ಮತದಾನ ನಡೆಯಲಿದೆ. ಈ ಎಲ್ಲಾ ರಾಜ್ಯಗಳ ಚುನಾವಣಾ ಫಲಿತಾಂಶ ಮೇ 4ರಂದು ಪ್ರಕಟವಾಗಲಿದೆ. ಏಪ್ರಿಲ್–ಮೇ ತಿಂಗಳಲ್ಲಿ ಚುನಾವಣಾ ಪ್ರಕ್ರಿಯೆಯು ಪೂರ್ಣಗೊಳ್ಳುತ್ತದೆ.

2021ರಲ್ಲಿ ಎಲ್ಲಾ ಐದು ರಾಜ್ಯಗಳ ಚುನಾವಣಾ ದಿನಾಂಕಗಳನ್ನು ಫೆಬ್ರವರಿ 26 ರಂದು ಘೋಷಿಸಲಾಗಿತ್ತು ಪಶ್ಚಿಮ ಬಂಗಾಳ ವಿಧಾನಸಭೆಗೆ ಹಿಂದಿನ ಚುನಾವಣೆ ಎಂಟು ಹಂತಗಳಲ್ಲಿ ನಡೆದಿತ್ತು. ಈ ಬಾರಿ ಎರಡು ಹಂತಗಳಲ್ಲೇ ಚುನಾವಣೆ ನಡೆಸಲಾಗುತ್ತಿದೆ. ನಮ್ಮ ಪ್ರಜಾ ಪ್ರಭುತ್ವ ಪ್ರಕ್ರಿಯೆಗಳನ್ನು ನೋಡಲು ಮತ್ತು ನಮ್ಮಿಂದ ಚುನಾವಣಾ ■ 6ನೇ ಪುಟಕ್ಕೆ


ಜ್ಞಾನೇಶ್ ಕುಮಾರ್

ಕರ್ನಾಟಕದಲ್ಲಿ ಏ.9ಕ್ಕೆ ಉಪಚುನಾವಣೆ

ನವದೆಹಲಿ: ರಾಜ್ಯದ ಎರಡು ವಿಧಾನಸಭಾ ಕ್ಷೇತ್ರಗಳಿಗೆ ಏ.9ರಂದು ಉಪಚುನಾವಣೆ ನಡೆಯಲಿದೆ. ಶಾಮನೂರು ಶಿವಶಂಕರಪ್ಪ ಅವರ ನಿಧನದಿಂದ ತೆರವಾಗಿರುವ ದಾವಣಗೆರೆ ದಕ್ಷಿಣ ಹಾಗೂ ಶಾಸಕ ಹೆಚ್.ವೈ.ಮೇಟಿ ಅವರ ನಿಧನದಿಂದ ತೆರವಾಗಿರುವ ಬಾಗಲಕೋಟೆ ವಿಧಾನಸಭೆ ಕ್ಷೇತ್ರಗಳಿಗೆ ಉಪ ಚುನಾಣೆ ನಡೆಯಲಿದೆ. ಮೇ 4ರಂದು ಫಲಿತಾಂಶ ಹೊರ ಬೀಳಲಿದೆ. ಮಾರ್ಚ್ 16ರಿಂದ ಉಪ ಚುನಾವಣೆ ಅಧಿಸೂಚನೆ ಪ್ರಕಟವಾಗಲಿದೆ. ನಾಮಪತ್ರ ಸಲ್ಲಿಸಲು ಮಾರ್ಚ್ 24 ಹಾಗೂ ಮಾರ್ಚ್ 26 ನಾಮಪತ್ರ ಹಿಂಪಡೆಯಲು ಕೊನೆ ದಿನ ಆಗಿರಲಿದೆ ಕೇಂದ್ರ ಚುನಾವಣಾ ಆಯೋಗದಿಂದ ನಡೆದ ಸುದ್ದಿಗೋಷ್ಠಿ ವೇಳೆ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ತಿಳಿಸಿದ್ದಾರೆ.

ಮಧ್ಯಪ್ರಾಚ್ಯ ಸಂಘರ್ಷ ಮತ್ತಷ್ಟು ಉಲ್ಬಣ

ಇಸ್ರೇಲ್ ಪ್ರಧಾನಿ ಜೀವಂತವಾಗಿದ್ದರೆ ಹುಡುಕಿ ಕೊಲ್ತೇವೆ: ಇರಾನ್ ಪ್ರತಿಜ್ಞೆ

ನವದೆಹಲಿ: ಮಧ್ಯಪ್ರಾಚ್ಯ ಸಂಘರ್ಷ ಮತ್ತಷ್ಟು ಉಲ್ಬಣಗೊಳ್ಳುತ್ತಿದ್ದು, ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಒಂದು ವೇಳೆ ಬದುಕಿದ್ದರೆ, ಹುಡುಕಿ ಕೊಲ್ಲುವುದಾಗಿ ಇರಾನ್ ಭಾನುವಾರ ಪ್ರತಿಜ್ಞೆ ಮಾಡಿದೆ.


ಇರಾನ್ ಮೇಲೆ ಅಮೆರಿಕ–ಇಸ್ರೇಲ್ ಜಂಟಿ ವೈಮಾನಿಕ ದಾಳಿಯೊಂದಿಗೆ ಆರಂಭವಾದ ಸಂಘರ್ಷ 16ನೇ ದಿನಕ್ಕೆ ಕಾಲಿಟ್ಟಿದ್ದು, ದಾಳಿ–ಪ್ರತಿದಾಳಿ ಮುಂದುವರೆದಿದೆ. ಈ ನಡುವೆ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಸಾವಿನ ಬಗ್ಗೆ ವದಂತಿಗಳು ಕೇಳಿಬರುತ್ತಿರುವಾಗಲೇ ■ 6ನೇ ಪುಟಕ್ಕೆ

16ನೇ ದಿನಕ್ಕೆ ಕಾಲಿಟ್ಟ ಸಂಘರ್ಷ



ರೆಸ್ಟೋರೆಂಟ್‌ನಲ್ಲಿ ಬೆಂಜಮಿನ್

ವದಂತಿ ವ್ಯಾಪಕವಾಗುತ್ತಿರುವುದರ ನಡುವೆ ಇಸ್ರೇಲ್ ಅಧ್ಯಕ್ಷ ನೆತನ್ಯಾಹು ರೆಸ್ಟೋರೆಂಟ್‌ನಲ್ಲಿ ಕಾಫಿ ಕುಡಿಯುತ್ತಿರುವ ವೀಡಿಯೊ ಹಂಚಿಕೊಂಡಿದ್ದಾರೆ. ವೀಡಿಯೋದಲ್ಲಿ ತಮ್ಮ ಎರಡೂ ಕೈಗಳನ್ನು ಪ್ರದರ್ಶಿಸಿ, ನನ್ನ ಯಾವ ಕೈಯಲ್ಲೂ ಆರು ಬೆರಳಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಈ ಮೂಲಕ ತಮ್ಮ ಸಾವಿನ ವದಂತಿ ಹಾಗೂ ಹಿಂದಿನ ವೀಡಿಯೋ ನಕಲಿ ಎಂಬ ಆರೋಪವನ್ನು ಸ್ವತಃ ತಳ್ಳಿ ಹಾಕಿದ್ದಾರೆ.





ಇಂಡಕ್ಷನ್ ಸ್ಟೌವ್ ಬಳಸಿ ಆಹಾರ ತಯಾರಿಸುವವರ ಸಂಖ್ಯೆ ಹೆಚ್ಚಳ

- ಮೈಸೂರು ಜಿಲ್ಲೆಯಲ್ಲಿ ವಿದ್ಯುತ್ ಬಳಕೆ ಪ್ರಮಾಣದಲ್ಲಿ ಭಾರೀ ಏರಿಕೆ
- ಚೆಸ್ಕಾಂ ಎಂಡಿ ಮುನಿಗೋಪಾಲ್‌ರಾಜು ಅವರಿಂದ ಮಾಹಿತಿ



ಮುನಿಗೋಪಾಲ್‌ರಾಜು



- 8 ದಿನದ ಅವಧಿಯಲ್ಲಿ ಶೇ.3.1ರಷ್ಟು ವಿದ್ಯುತ್ ಬಳಕೆ ಪ್ರಮಾಣ ಹೆಚ್ಚಳ
- 14.53 ದಶಲಕ್ಷ ಯೂನಿಟ್‌ನಿಂದ 15 ದಶಲಕ್ಷ ಯೂನಿಟ್‌ಗೆ ಏರಿಕೆ
- ವಿದ್ಯುತ್ ಬಳಕೆ ಪ್ರಮಾಣ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ

ಮೈಸೂರು, ಮಾ.15(ಬಿಎಲ್‌ಯು)– ಮಧ್ಯಪ್ರಾಚ್ಯ ಯುದ್ಧದ ಪರಿಣಾಮ ಎಲ್‌ಪಿಜಿ ಸಿಲಿಂಡರ್ ವ್ಯತ್ಯಯ ವಾಗಬಹುದೆಂದು ಜನರು ಹೆಚ್ಚಾಗಿ ಇಂಡಕ್ಷನ್ ಸ್ಟೌವ್ ಬಳಸಿ ಆಹಾರ ತಯಾರಿಸುತ್ತಿರುವ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲೆಯಲ್ಲಿ ವಿದ್ಯುತ್ ಬಳಕೆಯ ಪ್ರಮಾಣ ಶೇಕಡ 3.1ರಷ್ಟು ಹೆಚ್ಚಳವಾಗಿದೆ.

ಹಾರ್ಮುಜ್ ಜಲಸಂಧಿಯಿಂದ ಕಚ್ಚಾ ತೈಲ ಹಾಗೂ ನೈಸರ್ಗಿಕ ಅನಿಲದ ಟ್ಯಾಂಕರ್‌ಗಳು ಹಾದು ಹೋಗುವುದನ್ನು ಇರಾನ್ ತಡೆಯುತ್ತಿದೆ. ಇದರಿಂದ ಪೆಟ್ರೋಲ್ ಮತ್ತು ಡೀಸೆಲ್‌ಗೆ ಸದ್ಯಕ್ಕೆ ಯಾವುದೇ ತೊಂದರೆ ಆಗದಿದ್ದರೂ ಅಡುಗೆ ಅನಿಲಕ್ಕೆ ಅಭಾವ ಎದುರಾಗಿದೆ.

ವಾಣಿಜ್ಯ ಸಿಲಿಂಡರ್‌ಗಳ ಪೂರೈಕೆ ಸಂಪೂರ್ಣವಾಗಿ ಸ್ಥಗಿತವಾಗಿದೆ. ಅಷ್ಟೆ ಅಲ್ಲದೆ ಗೃಹ ಬಳಕೆಯ ಸಿಲಿಂಡರ್‌ಗಳನ್ನು ಆನ್ ಲೈನ್ ಮೂಲಕ ಬುಕ್ ಮಾಡಿದರೆ ವಾರವಾದರೂ ಸಿಗದ ಪರಿಸ್ಥಿತಿ ಎದುರಾಗಿದೆ. ಇದರಿಂದ ಜನರು ಆತಂಕಗೊಂಡು ಹೆಚ್ಚಾಗಿ ಇಂಡಕ್ಷನ್ ಸ್ಟೌವ್ ಖರೀದಿಸುತ್ತಿದ್ದಾರೆ. ಸಿಲಿಂಡರ್ ಇನ್ನು ಸಿಗದ ಕಾರಣ ಬಹಳಷ್ಟು ಜನರು ಈಗ ಇಂಡಕ್ಷನ್ ಸ್ಟೌವ್ ನಿಂದ ಆಹಾರ ತಯಾರಿಸುತ್ತಿದ್ದಾರೆ. ಮನೆಯಲ್ಲಿ ಸಿಲಿಂಡರ್ ಇದ್ದರೂ ಕೆಲವರು ಅದನ್ನು ಬಳಕೆ ಮಾಡದೆ ಮನೆಯಲ್ಲಿ ಸ್ಟಾಕ್ ಮಾಡಿಕೊಂಡಿದ್ದಾರೆ. ಮುಂಜಾಗ್ರತಾ ಕ್ರಮದಿಂದ ಇಂಡಕ್ಷನ್ ಸ್ಟೌವ್‌ನಿಂದ ಆಹಾರ ತಯಾರಿಸುತ್ತಿದ್ದಾರೆ. ಮನೆಗಳಲ್ಲಿ ಮಾತ್ರವಲ್ಲದೆ ಹೋಟೆಲ್‌ಗಳಲ್ಲಿ ಕೂಡ ಇಂಡಕ್ಷನ್ ಸ್ಟೌವ್ ಬಳಕೆ ಹೆಚ್ಚಾಗಿದೆ. ಕಾಫಿ, ಟೀ, ಬಿಸಿ ನೀರು ಕಾಯಿಸಲು ಹೋಟೆಲ್‌ನವರು ಇಂಡಕ್ಷನ್ ಸ್ಟೌವ್ ಬಳಸುತ್ತಿದ್ದಾರೆ. ಈ ಎಲ್ಲಾ ಕಾರಣಗಳಿಂದ ವಿದ್ಯುತ್ ಬಳಕೆಯ ಪ್ರಮಾಣ ಹೆಚ್ಚಾಗಿದೆ.

ಮೈಸೂರು ಜಿಲ್ಲೆಯಲ್ಲಿ ಮಾರ್ಚ್ 5ರಿಂದ 12ರವರೆಗೆ ವಿದ್ಯುತ್ ಬಳಕೆ ಪ್ರಮಾಣ ಹೆಚ್ಚಾಗಿರುವ ಬಗ್ಗೆ ಚೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ.ಮುನಿಗೋಪಾಲ್ ರಾಜ್ ಅವರು 'ಮೈಸೂರು ಮಿತ್ರ'ಗೆ ಅಂಕಿ–ಅಂಶ ಸಹಿತ ಮಾಹಿತಿ ನೀಡಿದ್ದಾರೆ.

ಮಾರ್ಚ್ 5ರಿಂದ 12 ರವರೆಗೆ 14.53 ದಶಲಕ್ಷ ಯೂನಿಟ್‌ನಿಂದ 15 ದಶಲಕ್ಷ ಯೂನಿಟ್ ವಿದ್ಯುತ್ ಬಳಕೆ ಏರಿಕೆಯಾಗಿದೆ. ಈ ಮೂಲಕ 0.47 ದಶಲಕ್ಷ ಯೂನಿಟ್ ಬಳಕೆ ಪ್ರಮಾಣ ಹೆಚ್ಚಾಗಿದೆ. ಮೊದಲಿಗಿಂತ ಈಗ ಶೇಕಡ 3.1ರಷ್ಟು ಹೆಚ್ಚು ವಿದ್ಯುತ್ ಬಳಕೆಯಾಗುತ್ತಿದೆ ಎಂದು ವಿವರಣೆ ನೀಡಿದ್ದಾರೆ. ಇಂಡಕ್ಷನ್ ಸ್ಟೌವ್ ಖರೀದಿ ಮಾಡುವರ ಸಂಖ್ಯೆ ದಿನ ಕಳೆದಂತೆ ಹೆಚ್ಚಾಗುತ್ತಿದೆ. ಇದರಿಂದ ಬಹುತೇಕ ಮಂದಿ ಇಂಡಕ್ಷನ್ ಸ್ಟೌವ್ ಬಳಕೆ ಮಾಡುತ್ತಿದ್ದು, ವಿದ್ಯುತ್ ಬಳಕೆಯ ಪ್ರಮಾಣ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ.

ಶ್ರೀಮತಿ ಪ್ರತಿಮಾ ಪ್ರಸಾದ್‌ರ ಹುಟ್ಟುಹಬ್ಬ ಆಚರಣೆ...



ವಿ.ಶ್ರೀನಿವಾಸಪ್ರಸಾದ್ ಅವರ ಜ್ಯೇಷ್ಠ ಪುತ್ರಿ ಶ್ರೀಮತಿ ಪ್ರತಿಮಾ ಪ್ರಸಾದ್ ಅವರ ಹುಟ್ಟುಹಬ್ಬವನ್ನು ಪೌರಕಾರ್ಮಿಕ ಸಿಬ್ಬಂದಿಗೆ ಸೀರೆ ಮತ್ತು ಸಿಹಿಯನ್ನು ಹಂಚುವ ಮೂಲಕ ಶ್ರೀನಿವಾಸಪ್ರಸಾದ್ ಅವರ ಅಭಿಮಾನಿ ಬಳಗದಿಂದ ಆಚರಿಸಲಾಯಿತು. ಈ ವೇಳೆ ಪ್ರತಿಮಾ ಪ್ರಸಾದ್ ಅವರ ಪತಿ ಹಿರಿಯ ಐ.ಆರ್.ಎಸ್ ಅಧಿಕಾರಿ ಪಿ.ದೇವರಾಜ್, ಪ್ರಕಾಶಕ ಭರತ್ ರಾಮಾಸ್ವಾಮಿ, ಪ್ರಸಾದ್ ಅವರ ಹಿರಿಯ ಆಪ್ತ ಸಹಾಯಕ ಹೆಚ್.ಜಿ.ರಮೇಶ್, ಪ್ರಸಾದ್ ಅಭಿಮಾನಿ ಬಳಗದ ಕಾರ್ಯದರ್ಶಿ ಡಿ.ವೆಂಕಟರಾಜು, ಮುಡಾ ಮಾಜಿ ಸದಸ್ಯ ಸಿ.ಜಿ.ಶಿವಕುಮಾರ್, ಶಾಂತಾರಾಮ್ ಶೆಟ್ಟಿ, ಗಿರೀಶ್ ಮತ್ತಿತರರು ಹಾಜರಿದ್ದರು.

ವಿಜ್ಞಾನ, ಗಣಿತ ಕಲಿತವರು ಬುದ್ಧಿವಂತರೆಂಬ ಪರಿಗಣನೆ ಬೇಡ: ಶಿಕ್ಷಣ ತಜ್ಞ ಡಾ.ಗುರುರಾಜ್ ಕರ್ಜಗಿ ಸಲಹೆ

ಬಿಎಸ್‌ಎಸ್ ವಿದ್ಯೋದಯದಲ್ಲಿ 'ಗುರುವಿನಿಂದ ಗುರುವಿಗೆ' ವಿಶೇಷ ಉಪನ್ಯಾಸ

- ಇತರೆ ವಿಷಯ ವ್ಯಾಸಂಗ ಮಾಡಿದವರು ಸಾಧನೆ ಮಾಡಿದ್ದಾರೆ
- ಪಾಠ ಮಾಡಲು ಶಿಕ್ಷಕರು ಪಕ್ಕಾ ತಯಾರಿರಬೇಕು
- ಬುದ್ಧಿವಂತ, ದಡ್ಡ ಎಂದು ವಿದ್ಯಾರ್ಥಿಗಳಲ್ಲಿ ತಾರತಮ್ಯ ಮಾಡಬಾರದು
- ಪಾಠ ಕ್ಲೀಷೆಯಾಗಿಸದೆ ಶಿಕ್ಷಕರು ಮಾಂತ್ರಿಕರಾಗಬೇಕು

ಮೈಸೂರು, ಮಾ.15(ಬಿಎಲ್‌ಯು)– ವಿಜ್ಞಾನ ಹಾಗೂ ಗಣಿತ ಕಲಿತವರು ಮಾತ್ರ ಬುದ್ಧಿವಂತರು ಎಂಬ ಪರಿಗಣನೆ ಬೇಡ, ಇತರೆ ವಿಷಯಗಳಲ್ಲಿ ವ್ಯಾಸಂಗ ಮಾಡಿದವರು ಕೂಡ ಜಾಣರಾಗಿದ್ದು, ಹಲವು ಕ್ಷೇತ್ರಗಳಲ್ಲಿ ಸಾಧನೆ ಮಾಡಿದ್ದಾರೆ ಎಂದು ಶಿಕ್ಷಣ ತಜ್ಞ ಡಾ.ಗುರುರಾಜ್ ಕರ್ಜಗಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕೃಷ್ಣಮೂರ್ತಿಪುರಂನ ವಿವೇಕಾನಂದ ಶಿಕ್ಷಣ ತರಬೇತಿ ಮತ್ತು ಸಂಶೋಧನಾ ಕೇಂದ್ರ (ಬಿಎಸ್‌ಎಸ್ ವಿದ್ಯೋದಯ)ದಲ್ಲಿ ಇಂದು "ಗುರುವಿನಿಂದ ಗುರುವಿಗೆ" ಕುರಿತು ಶಿಕ್ಷಕರಿಗೆ ಆಯೋಜಿಸಿದ್ದ ವಿಶೇಷ ಉಪನ್ಯಾಸದಲ್ಲಿ ಮಾತನಾಡಿದ ಅವರು, ಲತಾ ಮಂಗೇಶ್ವರ್ ಸೇರಿದಂತೆ ಬಹಳಷ್ಟು ಸಾಧಕಿಯರು ವಿಜ್ಞಾನ ಮತ್ತು ಗಣಿತ ಕಲಿತೆ ಇಲ್ಲ, ಆದರೂ ಅವರು ಸಾಧನೆ ಮಾಡಿಲ್ಲವೆ ಎಂದು ಪ್ರಶ್ನಿಸಿದರು.

ತರಗತಿಯಲ್ಲಿ ಶಿಕ್ಷಕರು ವಿದ್ಯಾರ್ಥಿಗಳಲ್ಲಿ ತಾರತಮ್ಯ ಮಾಡಬಾರದು. ಒಳ್ಳೆಯ ಅಂಕ ಪಡೆದವನು ಮಾತ್ರ ಬುದ್ಧಿವಂತ, ಓದದೆ ಇರುವನು ದಡ್ಡ ಎಂಬ ತೀರ್ಮಾನಕ್ಕೆ ಬರಬಾರದು. ಓದಿನಲ್ಲಿ ಹಿಂದಾಳಿದ ವಿದ್ಯಾರ್ಥಿಗೆ ಹೆಚ್ಚಿನ ಶಿಕ್ಷಣ ನೀಡಿ ಅವನು ಹೆಚ್ಚಿನ ಅಂಕ ಗಳಿಸುವಂತೆ ಮಾಡುವುದು ಶಿಕ್ಷಕರಿಗಿರುವ ದೊಡ್ಡ ಸವಾಲು ಎಂದು ಡಾ.ಗುರುರಾಜ್ ಕರ್ಜಗಿ ಹೇಳಿದರು.

"ಪಾಠ ಮಾಡುವ ವಿಷಯದಲ್ಲಿ ಹಿಡಿತವಿರಬೇಕು. ಪ್ರತಿ ವರ್ಷ ಮಾಡಿದ ಪಾಠವನ್ನೆ ಮತ್ತೆ ಮಾಡಬಾರದು. ವಿದ್ಯಾರ್ಥಿಗಳು ಆಸಕ್ತಿಯಿಂದ ಪಾಠ ಕೇಳುವ ಹಾಗೆ ಶಿಕ್ಷಕರು ಮಾಂತ್ರಿಕರಾಗಿರಬೇಕು. ವಿದ್ಯಾರ್ಥಿಗಳಿಗೆ ಶಿಕ್ಷಕರು ಮಾಡುವ ಪಾಠ ಕ್ಲೀಷೆಯಾಗದಂತೆ ಪರ್ಯಾಯವಾದ ಹೊಸ ವಿಧಾನಗಳನ್ನು ಅನುಸರಿಸಬೇಕು.
–ಡಾ.ಗುರುರಾಜ್ ಕರ್ಜಗಿ

ನೀನು ದಡ್ಡ ಎಂಬ ಕೀಳರಿಮೆ ವಿದ್ಯಾರ್ಥಿಗಳಲ್ಲಿ ಮೂಡಿಸದೆ, ನೀನು ಬಹಳ ಬುದ್ಧಿವಂತ ಇದ್ದೀಯಾ ಎಂಬ ಆತ್ಮವಿಶ್ವಾಸ ಮೂಡಿಸಬೇಕು. ನೀನು ಆಸಕ್ತಿಯಿಂದ ಕಲಿತರೆ ಮತ್ತಷ್ಟು ಬುದ್ಧಿವಂತ ಆಗುತ್ತೀಯಾ ಎಂಬ ಅಚಲ ವಿಶ್ವಾಸ ಹುಟ್ಟುಹಾಕಬೇಕು ಎಂದರು.

ಶಿಕ್ಷಕರು ಪಾಠ ಮಾಡಲು ತರಗತಿಗೆ ಹೋಗುವಾಗ ಪಕ್ಕಾ ಸಿದ್ಧರಾಗಿರಬೇಕು. ಹತ್ತು ಪಟ್ಟು ವಿಷಯ ತಿಳಿದುಕೊಂಡಿರಬೇಕು. ಪಠ್ಯದಲ್ಲಿರುವ ಪ್ರತಿ ವಿಚಾರವನ್ನು ಮನನ ಮಾಡಿಕೊಂಡಿರಬೇಕು. ವಿದ್ಯಾರ್ಥಿಗಳಿಗೆ ಶಿಸ್ತಿನ ಪಾಠ ಮಾಡುವ ಮೊದಲು ತಾವು ಶಿಸ್ತನ್ನು ಮೈಗೂಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.



ಮೈಸೂರಿನ ವಿವೇಕಾನಂದ ಶಿಕ್ಷಣ ತರಬೇತಿ–ಸಂಶೋಧನಾ ಕೇಂದ್ರದಲ್ಲಿ ಆಯೋಜಿಸಿದ್ದ ವಿಶೇಷ ಉಪನ್ಯಾಸದಲ್ಲಿ ಶಿಕ್ಷಣ ತಜ್ಞ ಡಾ.ಗುರುರಾಜ್ ಕರ್ಜಗಿ ಮಾತನಾಡಿದರು.

ಶಿಕ್ಷಕರು ತಾವೇ ಬುದ್ಧಿವಂತರು ಎಂಬ ಭ್ರಮೆಯಲ್ಲಿ ಪಾಠ ಮಾಡಬಾರದು. ಬೋಧನೆ ಮಾಡುವಾಗ ತಪ್ಪುಗಳನ್ನು ಪತ್ತೆ ಮಾಡುವ ಬುದ್ಧಿವಂತ ವಿದ್ಯಾರ್ಥಿಗಳಿರುತ್ತಾರೆ ಎಂಬುದನ್ನು ಮರೆಯಬಾರದು ಎಂದು ಡಾ.ಗುರುರಾಜ್ ಕರ್ಜಗಿ ತಿಳಿಸಿದರು.

ಈ ಟೀಚರ್ ಎಷ್ಟೊತ್ತಿಗೆ ಪಾಠ ಮುಗಿಸಿ ತರಗತಿಯಿಂದ ಹೋಗುತ್ತಾರೊ ಎಂಬ ಮನೋಭಾವ ವಿದ್ಯಾರ್ಥಿಗಳಿಗೆ ಬರಬಾರದು. ಮತ್ತಷ್ಟು ಸಮಯ ಪಾಠ ಮಾಡಲಿ ಎಂಬಂತೆ ಆಸಕ್ತಿ ಮೂಡಿಸಬೇಕು ಎಂದರು.

ಮಕ್ಕಳಿಗೆ ನೆಗೆಟಿವ್ ಆಗಿರುವ ವಿಚಾರಗಳನ್ನು ತುಂಬಬಾರದು. ಪಾಸಿಟಿವ್ ಆಗಿರುವ ವಿಷಯಗಳನ್ನು ಹೇಳಬೇಕು. ನೀನು ಓದಿನಲ್ಲಿ ಆಸಕ್ತಿ ಇದ್ದರೆ ನೀನು ಸಾಧನೆ ಮಾಡುತ್ತೀಯಾ ಎಂದು ಧೈರ್ಯ ತುಂಬಬೇಕು ಎಂದು ಹೇಳಿದರು.

ಪ್ರತಿಯೊಂದು ವಿಚಾರಗಳನ್ನು ಹೇಳುವಾಗ ಡಾ.ಗುರುರಾಜ್ ಕರ್ಜಗಿ ಅವರು ಉದಾಹರಣೆಗಳನ್ನು ನೀಡಿ ವಿಷಯಗಳನ್ನು ಮನದಟ್ಟು ಮಾಡಿದರು. ಶಿಕ್ಷಕರು ಸೇರಿದಂತೆ ನೂರಾರು ಮಂದಿ ತದೇಕಚಿತ್ತದಿಂದ ಹೇಳಿದ ವಿಚಾರಗಳನ್ನು ಕೇಳಿದರು.

ಬಿಎಸ್‌ಎಸ್ ವಿದ್ಯೋದಯ ಗೌರವ ಕಾರ್ಯದರ್ಶಿ ಆರ್.ವಾಸುದೇವ ಭಟ್, ಸಂಸ್ಥೆಯ ಪದಾಧಿಕಾರಿಗಳು ಹಾಜರಿದ್ದರು.

ಮೈಸೂರಿನ ಡೋಪ್ಲಿನ್ ಕಾಂಪ್ಲೆಕ್ಸ್ ವಿವಾದ

ನಮ್ಮ ದಾಖಲಾತಿ ಅಧಿಕೃತವಾಗಿದೆ, ಮುಡಾ ಕಾರ್ಯದರ್ಶಿಯಿಂದ ನೋಂದಣಿಯಾಗಿದೆ

ವರ್ತಕರ ಸಂಘದ ಅಧ್ಯಕ್ಷ ಗಿರೀಶ್ ಸ್ಪಷ್ಟನೆ

ಮೈಸೂರು, ಮಾ.15(ಬಿಎಲ್‌ಯು)– ತಾವು ಅಧಿಕೃತವಾಗಿ ಅಂಗಡಿಗಳ ಮಾಲೀಕತ್ವ ಹೊಂದಿದ್ದು, ಎಂಡಿಎ ಆಯುಕ್ತ ಕೆ.ಆರ್.ರಕ್ಷಿತ್ ಅವರ ಹೇಳಿಕೆಯಿಂದ ಆತಂಕಗೊಳ್ಳಬೇಡಿ ಎಂದು ನಮ್ಮ ಕಾನೂನು ಸಲಹೆಗಾರರು ಧೈರ್ಯ ತುಂಬಿದ್ದಾರೆ ಎಂದು ಮೈಸೂರಿನ ಡೋಪ್ಲಿನ್ ಕಾಂಪ್ಲೆಕ್ಸ್ ವರ್ತಕರ ಸಂಘದ ಅಧ್ಯಕ್ಷ ಗಿರೀಶ್ ತಿಳಿಸಿದರು.

ಈ ಕುರಿತು 'ಮೈಸೂರು ಮಿತ್ರ'ಗೆ ಮಾಹಿತಿ ನೀಡಿರುವ ಅವರು, ಸೇಲ್ ಡೀಡ್ ಆಗಿರುವ ಅಂಗಡಿ ಮಾಲೀಕರು ಈಗಾಗಲೇ ದಾಖಲಾತಿಗಳನ್ನು ತಮ್ಮ ಕಾನೂನು ಸಲಹೆಗಾರರಿಂದ ಪರಿಶೀಲನೆ ಮಾಡಿಸಿದ್ದಾರೆ ಎಂದರು.

ಕಳೆದ ಹಲವು ವರ್ಷಗಳ ಹಿಂದೆಯೇ ಅಂದಿನ ಮುಡಾ ಕಾರ್ಯದರ್ಶಿಗಳು ನಮಗೆ ಸೇಲ್ ಡೀಡ್ ಮಾಡಿಕೊಟ್ಟಿದ್ದು, ಟೈಟಲ್ ಡೀಡ್ ಕೂಡ ನೀಡಿದ್ದಾರೆ. ಎಂಡಿಎ ಆಯುಕ್ತ ರಕ್ಷಿತ್ ಅವರು ಹೇಳಿರುವಂತೆ ನಮಗೆ ಮುಡಾ ಇಂಜಿನಿಯರ್ ನೋಂದಣಿ ಮಾಡಿಕೊಟ್ಟಿಲ್ಲ ಎಂದು ಹೇಳಿದ್ದಾರೆ.

ನಮ್ಮಲ್ಲಿರುವ ಎಲ್ಲಾ ದಾಖಲಾತಿಗಳನ್ನು ನಮ್ಮ ಕಾನೂನು ಸಲಹೆಗಾರರಿಗೆ ತೋರಿಸಿದ್ದೇವೆ. ನಿಮಗೆ ಮುಡಾದಿಂದ ಅಧಿಕೃತವಾಗಿ ನೋಂದಣಿಯಾಗಿದೆ. ಯಾವುದೇ ಕಾರಣಕ್ಕೂ ನೀವು ಆತಂಕಗೊಳ್ಳಬೇಡಿ ಎಂದು ಸಲಹೆ ನೀಡಿದ್ದಾರೆ. ಇದರಿಂದ ನಾವು ನಿಶ್ಚಿಂತೆಯಿಂದ ಇರುವಂತೆ ಗಿರೀಶ್ ತಿಳಿಸಿದರು.

ಡೋಪ್ಲಿನ್ ಕಾಂಪ್ಲೆಕ್ಸ್‌ನಲ್ಲಿರುವ ಅನಧಿಕೃತ ಅಂಗಡಿಗಳನ್ನು ಖಾಲಿ ಮಾಡಿಸುವ ನಿಟ್ಟಿನಲ್ಲಿ ಪಬ್ಲಿಕ್ ಪ್ರಿಮಿಸಸ್ ಆಕ್ಟ್ ನಡಿ ಮಾರ್ಚ್ 18ರಂದು ಸಾರ್ವಜನಿಕ ವಿಚಾರಣೆ ನಡೆಸುತ್ತೇವೆ ಎಂದು ರಕ್ಷಿತ್ ಅವರು ತಿಳಿಸಿದ್ದಾರೆ. ಆದರೆ ಯಾವ ಜಾಗದಲ್ಲಿ ವಿಚಾರಣೆ ಮಾಡುತ್ತಾರೆ ಎಂಬ ಮಾಹಿತಿ ನೀಡಿಲ್ಲ ಎಂದು ಹೇಳಿದರು.

ಯುಗಾದಿ ಹಬ್ಬದ ಹಿಂದಿನ ದಿನ ವಿಚಾರಣೆ ನಿಗದಿ ಮಾಡಿದ್ದಾರೆ. ಅಂದು ನಮಗೆ ವ್ಯಾಪಾರ ಹೆಚ್ಚಾಗಿರುತ್ತದೆ. ಬಿಡುವಿಲ್ಲದ ಕೆಲಸದಲ್ಲಿರುತ್ತೇವೆ. ಆದರೂ ವಿಚಾರಣೆ ಸ್ಥಳದ ಬಗ್ಗೆ ಮಾಹಿತಿ ನೀಡಿದರೆ ಅದರಲ್ಲಿ ಭಾಗವಹಿಸುತ್ತೇವೆ ಎಂದು ಗಿರೀಶ್ ತಿಳಿಸಿದರು.

ನ್ಯಾಯ ಖರೀದಿಸಲಾಗದವರು ಜೈಲಿನಲ್ಲಿದ್ದಾರೆ

ಅಪರಾಧ ಚಟುವಟಿಕೆಗಳಲ್ಲಿ ಭಾಗಿಯಾಗಿರುವವರು ಹೊರಗಿದ್ದಾರೆ



ಮೈಸೂರಿನ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಸಭಾಂಗಣದಲ್ಲಿ ಗಣೇಶ ಅಮೀನಗಡ ಅವರ 'ಕೈದಿಗಳ ಕಥನ', 'ರಂಗ ಪ್ರಸಂಗ', 'ರಂಗ ಕರ್ಪೂರ', 'ರಮೇಶ ಚಂದ್ರ ಅವರ 'ಹಾದಿಯೊಳಗಣ ಹಾಡೇ' ಕವನ ಸಂಕಲನವನ್ನು ಹಿರಿಯ ವಿಮರ್ಶಕ ಓ.ಎಲ್.ನಾಗಭೂಷಣ ಸ್ವಾಮಿ ಬಿಡುಗಡೆಗೊಳಿಸಿದರು.

ಮೈಸೂರು,ಮಾ.15(ಜಿಎ)–ಸಮಾಜದ ಸ್ವಾಸ್ಥ್ಯ ಕಾಪಾಡುತ್ತೇವೆ ಎನ್ನುವವರೆಲ್ಲ ಅಪರಾಧ ಚಟುವಟಿಕೆಗಳಲ್ಲಿ ತೊಡಗಿ ಹೊರಗಿದ್ದಾರೆ. ಹೀಗಾಗಿ ಜೈಲಲ್ಲಿರುವ ಶೇ.98ರಷ್ಟು ಕೈದಿಗಳು ಬಡವರು, ಹಳ್ಳಿಗರು, ಹೆಚ್ಚು ಶಿಕ್ಷಣ ಪಡೆಯದೆ ಇರುವವರು, ನ್ಯಾಯವನ್ನು ಖರೀದಿಸಲಾಗದೆ ಇರುವವರು ಎಂದು ಹಿರಿಯ ವಿಮರ್ಶಕ ಓ.ಎಲ್.ನಾಗಭೂಷಣಸ್ವಾಮಿ ಬೇಸರ ವ್ಯಕ್ತಪಡಿಸಿದರು.

ಮೈಸೂರಿನ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಸಭಾಂಗಣದಲ್ಲಿ ಕವಿತಾ ಪ್ರಕಾಶನವು ಏರ್ಪಡಿಸಿದ್ದ ಗಣೇಶ ಅಮೀನಗಡ ಅವರ 'ಕೈದಿಗಳ ಕಥನ', 'ರಂಗ ಪ್ರಸಂಗ', 'ರಂಗ ಕರ್ಪೂರ' ಹಾಗೂ 'ರಮೇಶ ಚಂದ್ರ ಅವರ 'ಹಾದಿಯೊಳಗಣ ಹಾಡೇ' ಕವನ ಸಂಕಲನ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಜಾತಿ, ಅಧಿಕಾರ, ಅಸಮಾನತೆ, ಕನಸು ಕಾಣುವಲ್ಲಿ ಅಸಮಾನತೆ ಹೋಗಲಾಡಲು ಮಾನವೀಯ ವಿಷಯಗಳಾದ ನಾಟಕ, ಚಿತ್ರಕಲೆ, ಸಾಹಿತ್ಯ, ಸಂಗೀತ ಪಠ್ಯವಾಗಬೇಕು. ಆದರೆ ಇಂದು ಶಿಕ್ಷಣವೆಂದರೆ ದುಡ್ಡು, ಅಧಿಕಾರ, ವ್ಯವಹಾರವಾಗಿದೆ. ಇದು ಕೂಡಾ ಜೈಲು ಎಂದರು.

ಎಲ್ಲರ ಬದುಕಿನಲ್ಲೂ ಒಂಟಿತನದ ಜೈಲಿರುತ್ತದೆ. ಇದರಿಂದ ಪಾರಾಗಲು ರಂಗಭೂಮಿ, ಚಿತ್ರಕಲೆ, ಸಂಗೀತ, ಸಾಹಿತ್ಯ ಅವಕಾಶಗಳನ್ನು ಮತ್ತು ಸೇತುವೆಗಳನ್ನು ಕಲ್ಪಿಸಿಕೊಡುತ್ತವೆ. ಆದರೆ ನಾವು ನಿರ್ಲಕ್ಷ್ಯ ಮಾಡುತ್ತೇವೆ. ನಾವು ಸ್ವಯಂತೃಪ್ತರೆಂದು, ನೆಮ್ಮದಿಯಿಂದ ಸತ್ತುಹೋಗಬೇಕೆಂದು ಬಯಸುತ್ತೇವೆ. ಇದು ಕೂಡ ಜೈಲು. ನಾವು ಕೂಡ ಕೈದಿಗಳು ಎಂದರು.

ಸುಳ್ಳು, ಮೋಸ ಮಾಡದೆ ಇರುವವರು ಯಾರು? ಮನಸ್ಸಲ್ಲಾದರೂ ಹಾದರ ಮಾಡದೆ ಇರುವವರು ಯಾರು? ಇದಕ್ಕಾಗಿ ನಮಗೆ ನಾವೇ ಮನಸ್ಸಲ್ಲಿ ಶಿಕ್ಷೆ ಕೊಟ್ಟುಕೊಳ್ಳುವುದು ಕಣ್ಣಿಗೆ ಕಾಣದೆ ಇರಬಹುದು. ಆದರೆ ಅಪರಾಧ ಚಟುವಟಿಕೆಗಳಲ್ಲಿ ಭಾಗವಹಿಸಿದವರಿಗೆ ಶಿಕ್ಷೆ ಕೊಡುತ್ತೇವೆ ಎನ್ನುವುದು, ಈ ಮೂಲಕ ಸಮಾಜದ ಸ್ವಾಸ್ಥ್ಯ ಕಾಪಾಡುತ್ತೇವೆ ಎನ್ನುವುದೇ ಅಮಾನುಷ ಎಂದು ಹೇಳಿದರು.

ಶಿಕ್ಷೆಗೊಳಗಾದ ಕೈದಿಗಳಿಗೆ ರಂಗಭೂಮಿ ಮಹತ್ವವನ್ನು ಮನಗಾಣಿಸಿ, ಅವರಿಂದ ನಾಟಕ ಪ್ರದರ್ಶಿಸಿದ ಹುಲಗಪ್ಪ ಕಟ್ಟಿಮನಿ ಅವರ ಸಾಹಸ ದೇಶದಲ್ಲೇ ಮೊದಲಿರಬೇಕು ಎಂದು ಪ್ರಶಂಸಿಸಿದರು.

ಹಿರಿಯ ರಂಗಕರ್ಮಿ ಹುಲಗಪ್ಪ ಕಟ್ಟಿಮನಿ ಮಾತನಾಡಿ, ರಂಗಭೂಮಿಯು ಕೇವಲ ಮನರಂಜನೆಗೆ, ಯೋಜನೆಗಲ್ಲ. ಪರಿವರ್ತನೆಗಾಗಿ ಎಂದು ಮನಗಂಡು ರಾಜ್ಯದ ವಿವಿಧ ಜೈಲುಗಳಲ್ಲಿ 20 ಶಿಬಿರಗಳನ್ನು ನಿರ್ದೇಶಿಸಿದೆ. ನಂತರ ವಿವಿಧ ನಾಟಕಗಳ 300 ಪ್ರದರ್ಶನಗಳಾಗಿವೆ. ರಂಗಭೂಮಿಗೆ ಅದ್ಭುತ ಶಕ್ತಿಯಿದೆ. ಇದರಲ್ಲಿ ಅನೇಕ ಸಾಧ್ಯತೆಗಳನ್ನು ಕಂಡುಕೊಳ್ಳಲು ಸಾಧ್ಯ ಮತ್ತು ಅಧ್ಯಾತ್ಮ ಕಾಣಲು ಸಾಧ್ಯ. ಬದುಕುವ ಪದ್ಧತಿಯನ್ನು ರಂಗಭೂಮಿ ಮೂಲಕ ಕಲಿಸುವುದು ಎಂದು ತಿಳಿಸಿದರು.

ರಂಗಕಲಾವಿದರು, ಗಾಯಕರಿಂದ ಅರ್ಜಿ ಆಹ್ವಾನ

ಮೈಸೂರು: ರಾಜ್ಯ ಸರ್ಕಾರದ ಕನ್ನಡ–ಸಂಸ್ಕೃತಿ ಇಲಾಖೆ ವತಿಯಿಂದ 'ವಚನ ಕಲ್ಯಾಣ' ಎಂಬ ಅಹೋರಾತ್ರಿ (9 ಗಂಟೆ) ನಾಟಕವನ್ನು ಸಿದ್ಧಪಡಿಸಿ ನಾಡಿನಾದ್ಯಂತ ಪ್ರದರ್ಶನ ಮಾಡಲು ಇಲಾಖೆ ಉದ್ದೇಶಿಸಿದ್ದು, ಈ ಸಂಬಂಧ ನುರಿತ, ಆಸಕ್ತ ಯುವಕ, ಯುವತಿಯರು, ಅನುಭವಿ ರಂಗಕಲಾವಿದರು, ಗಾಯಕರಿಂದ ಅರ್ಜಿ ಆಹ್ವಾನಿಸಿದೆ. ಅರ್ಜಿ ಸಲ್ಲಿಸಲು 18ರಿಂದ 40 ವರ್ಷಗಳು ರಂಗಶಿಕ್ಷಣದಲ್ಲಿ ತರಬೇತಿ ಪಡೆದ ಹಾಗೂ ನಾಟಕಗಳಲ್ಲಿ ಅಭಿನಯಿಸಿದ ಕಲಾವಿದರಿಗೆ ಆದ್ಯತೆಯನ್ನು ನೀಡಲಾಗುವುದು. ಭರ್ತಿ ಮಾಡಿದ ಅರ್ಜಿಯನ್ನು ಮಾ.20ರೊಳಗೆ ಸದಸ್ಯ ಕಾರ್ಯದರ್ಶಿ ಸಂತ ಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ, ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಂಗಳೂರು–560056, ಇಲ್ಲಿಗೆ ಮುದ್ದಾಂ ಅಂಚೆಯ ಮೂಲಕ ಅಥವಾ ಮೇಲ್ ವಿಳಾಸ: kanakaresearchcentre@gmail.comನಲ್ಲಿ ಸಲ್ಲಿಸಬಹುದು. ಅರ್ಜಿಯ ನಮೂನೆಯನ್ನು www.kannadasiri.karnataka.gov.inನಲ್ಲಿ ಪಡೆಯಬಹುದು. ಹೆಚ್ಚಿನ ಮಾಹಿತಿ ಮತ್ತು ವಿವರಗಳಿಗಾಗಿ ದೂ. ಸಂಖ್ಯೆ: 9448538620 ಅನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿದೆ.

ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿವಿಯಲ್ಲಿ ಮಹಿಳಾ ದಿನಾಚರಣೆ



ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದಲ್ಲಿ ಭಾನುವಾರ ಅಂತರರಾಷ್ಟ್ರೀಯ ಮಹಿಳಾ ದಿನ ಆಚರಿಸಲಾಯಿತು.

ಮೈಸೂರು, ಮಾ.15(ಎಂಕೆ)– ಮೈಸೂರಿನ ಯಾದವಗಿರಿಯಲ್ಲಿರುವ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದಲ್ಲಿ ಭಾನುವಾರ ಅಂತರರಾಷ್ಟ್ರೀಯ ಮಹಿಳಾ ದಿನ ಆಚರಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿದ ಶಿಕ್ಷಣ ಇಲಾಖೆ(ಪದವಿ ಪೂರ್ವ) ಉಪ ನಿರ್ದೇಶಕಿ ಎಂ.ಪಿ.ನಾಗಮ್ಮ ಮಾತನಾಡಿ, ಧ್ಯಾನದಿಂದ ಏಕಾಗ್ರತೆ ವೃದ್ಧಿಸಲಿದ್ದು, ಯುವ ಸಮೂಹ ಪ್ರತಿನಿತ್ಯ ಧ್ಯಾನ ಮಾಡುವುದನ್ನು ಹವ್ಯಾಸವನ್ನಾಗಿ ರೂಡಿಸಿಕೊಳ್ಳಬೇಕು ಎಂದರು.

ಧ್ಯಾನ ಮಾಡುವುದರಿಂದ ಮಾದಕ ವಸ್ತುಗಳ ಆಕರ್ಷಣೆ ಕಡಿಮೆಯಾಗಿ ಓದಿನತ್ತ ಏಕಾಗ್ರತೆ ಹೆಚ್ಚುತ್ತದೆ. ಮುಖ್ಯ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳ ಮನಸ್ಸು ಏಕಾಗ್ರತೆಯಿಂದ ಕೂಡಿರುವುದು ಅತೀ ಮುಖ್ಯ. ಮೈಸೂರಿನಲ್ಲಿ ಮಾದಕ ವಸ್ತುಗಳ ಹಾವಳಿ ಹೆಚ್ಚಾಗಿದ್ದು, ಯೋಗ ಮತ್ತು ಧ್ಯಾನದ ಮೂಲಕ ಒಳ್ಳೆಯ ವಿಚಾರಗಳನ್ನು ತಿಳಿಯುತ್ತಾ, ತಿಳಿಸುತ್ತಾ ಆರೋಗ್ಯಕರ ಸಮಾಜವನ್ನು ನಿರ್ಮಿಸಬೇಕಿದೆ ಎಂದರಲ್ಲದೆ, ನೆರೆದಿದ್ದವರಿಗೆ ಮಹಿಳಾ ದಿನ ಶುಭಾಷಯ ತಿಳಿಸಿದರು.

ಜಿಲ್ಲಾ ಆಯುಷ್ ಅಧಿಕಾರಿ ಡಾ.ಸಿ.ರೇಣುಕಾದೇವಿ ಮಾತನಾಡಿ, ಮೈಸೂರನ್ನು ಯೋಗ ಹಬ್ ಎಂದು ಡಿಕ್ಲೇರ್ ಮಾಡಿದ್ದು, ಈ ಕುರಿತು ಯೋಜನೆಯೊಂದನ್ನು ಸಿದ್ದಪಡಿಸಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದೇವೆ. ಮೈಸೂರು ಜಿಲ್ಲೆಯಾದ್ಯಂತ 40 ಆಯುರ್ವೇದಿಕ್ ಆಸ್ಪತ್ರೆ ಹಾಗೂ 20 ಆಯುಷ್ ಮಂದಿರಗಳಿವೆ. ಎಲ್ಲಾ ಆರೋಗ್ಯ ಮಂದಿರಗಳು ಕುಗ್ರಾಮದಲ್ಲಿದ್ದು, ಎಲ್ಲರಿಗೂ ಯೋಗ ತಲುಪಬೇಕು ಎನ್ನುವ ದೃಷ್ಟಿಯಿಂದ ಹತ್ತು–ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಒಂದು ಆಸ್ಪತ್ರೆಗೆ ಇಬ್ಬರು ಯೋಗ ಮಾರ್ಗದರ್ಶಕರಿದ್ದು, ಸಾಂಕ್ರಾಮಿಕವಲ್ಲದ ರೋಗಗಳಿಗೆ ಯೋಗದ ಮೂಲಕ ಚಿಕಿತ್ಸೆ ಪಡೆದುಕೊಳ್ಳುವ ಕುರಿತು ತಿಳಿಸಿಕೊಡಲಿದ್ದಾರೆ. ಆದ್ದರಿಂದ ಕುಟುಂಬ ಸಮಗ್ರ ಆರೋಗ್ಯ ನೋಡಿಕೊಳ್ಳಬೇಕಾದ ಮಹಿಳೆಯರು ಯೋಗಾಭ್ಯಾಸದಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು ಎಂದರು.

ಬಳಿಕ ಸೀನಿಯರ್ ಪಿರಮಿಡ್ ಮಾಸ್ಟರ್ ಜಿ.ಮನೋರಮ ಅವರನ್ನು ಸನ್ಮಾನಿಸಲಾಯಿತು. ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ಮುಖ್ಯ ಸಂಚಾಲಕರಾದ ಡಾ.ಲಕ್ಷ್ಮೀಜಿ ದಿವ್ಯ ಸಾನಿಧ್ಯ ವಹಿಸಿದ್ದರು. ಮೈಸೂರು ವಿವಿ ಜೆನೆಟಿಕ್ಸ್ ವಿಭಾಗದ ಅಧ್ಯಕ್ಷರಾದ ಪ್ರೊ.ಸುತ್ತೂರು ಎಸ್.ಮಾಲಿನಿ, ಜೆಎಸ್‌ಎಸ್ ವೃದ್ಧಾರೋಗ್ಯ ವಿಭಾಗದ ಡಾ.ಶಿಲ್ಪ ಅವರೆಬೀಳ್, ಸಮಾಜ ಸೇವಕರಾದ ರಾಧಾ ನೀಲಕಂಠ್, ಡಾ.ವಿ.ಪ್ರೀತಿ, ಈಶ್ವರಿ ವಿವಿ ಸಂಚಾಲಕರಾದ ಶಿವಲೀಲ, ರಶ್ಮಿ, ಮಂಜುಳ ಇದ್ದರು.

ನ್ಯಾಯಯುತ ಒಳಮೀಸಲಾತಿ ಜಾರಿಗೆ ಮನವಿ

ಮೈಸೂರು,ಮಾ.15–ಒಳ ಮೀಸಲಾತಿ ಹಂಚಿಕೆ ವಿಚಾರದಲ್ಲಿ ಎಡಗೈ ಮತ್ತು ಬಲಗೈ ಸಮುದಾಯಗಳಲ್ಲಿ ಉಂಟಾಗಿರುವ ಗೊಂದಲ ನಿವಾರಿಸುವಂತೆ ಮೈಸೂರು ನಗರ (ಜಿಲ್ಲಾ) ಕಾಂಗ್ರೆಸ್ ಸಮಿತಿ ಉಪಾಧ್ಯಕ್ಷ ಕೆ.ರಾಮು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿದ್ದಾರೆ.

ಪರಿಶಿಷ್ಟ ಜಾತಿ ಒಳಮೀಸಲಾತಿ ಮಸೂದೆಗೆ ರಾಜ್ಯಪಾಲರು ಅಂಕಿತ ಹಾಕಿದ್ದಾರೆ. ಆದ್ದರಿಂದ ಒಳ ಮೀಸಲಾತಿ ಜಾರಿಯಿಂದ ಎಡಗೈ ಮತ್ತು ಬಲಗೈ ಸಮುದಾಯಗಳಿಗೆ ಯಾವುದೇ ತೊಂದರೆಯಾಗದಂತೆ ಮೀಸಲಾತಿ ಹಂಚಿಕೆ ಮಾಡಬೇಕು. ಸರ್ಕಾರಿ ಹುದ್ದೆಗಳ ನೇಮಕಾತಿಯಲ್ಲಿ ಎರಡೂ ಸಮುದಾಯಗಳಿಗೂ ಅನ್ಯಾಯವಾಗದಂತೆ ಒಳ ಮೀಸಲಾತಿ ಜಾರಿ ಮಾಡಬೇಕು. ಈ ವಿಚಾರವಾಗಿ ಎರಡು ಪಂಗಡಗಳು ಯಾವುದೇ ಪ್ರತಿಭಟನೆ, ಹೇಳಿಕೆ ನೀಡಬಾರದು ಎಂದು ಮನವಿ ಮಾಡಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

16.3.2026 ಸೋಮವಾರ, ಮಳೆ ನಕ್ಷತ್ರ: ಪೂರ್ವಾಭಾದ್ರ 4.03.2026 ರಿಂದ 17.03.2026 ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ಧನಿಷ್ಠ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಕಿಡ್ನಿ ಆರೋಗ್ಯ ತಪಾಸಣೆ ಮತ್ತು ವಸಂತ ವಮನ ದೇಹ ಶುದ್ಧಿ ಚಿಕಿತ್ಸಾ ಶಿಬಿರ, ಕುತ್ತಿಗೆ ಹಾಗೂ ಬೆನ್ನು ನೋವಿಗೆ ಆಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಪಾರ್ಕಿನ್‌ಸನ್ಸ್ ಕಾಯಿಲೆ, ಪಿಸಿಓಡಿ, ಪೈಲ್ಸ್, ಮೂಲವ್ಯಾಧಿ, ಫಿಸ್ತುಲಾ, ಭಗಂದರ, ನಾಡಿವ್ರಣ, ಫಿಶರ್ ತೊಂದರೆಗಳಿಗೆ ತಪಾಸಣಾ ಮತ್ತು ಸಲಹಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.
- **ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮೈಸೂರಿನ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ (ರಾಷ್ಟ್ರೀಯ ಸೇವಾ ಯೋಜನೆ):** ರಾಷ್ಟ್ರೀಯ ಭಾವೈಕ್ಯತಾ ಶಿಬಿರ 4.0, ವಿಚಾರ ಸಂಕಿರಣ, ಸ್ಥಳ: ಶ್ರೀ ರಾಜೇಂದ್ರ ಆಡಿಟೋರಿಯಂ, ಜೆಎಸ್‌ಎಸ್ ಕಾಲೇಜ್ ಆಫ್ ಫಾರ್ಮಸಿ, ಬೆಳಗ್ಗೆ 10ರಿಂದ
- **ಕನ್ಸೋರ್ಟಿಯಂ ಫಾರ್ ಎಜುಕೇಶನಲ್ ಕಮ್ಯುನಿಕೇಷನ್ (ಸಿಇಸಿ), ಯುಜಿಸಿ ಅಂತರ ವಿಶ್ವ ವಿದ್ಯಾನಿಲಯ ಕೇಂದ್ರ (ನವದೆಹಲಿ), ಶೈಕ್ಷಣಿಕ ಮಲ್ಟಿ ಮೀಡಿಯಾ ಸಂಶೋಧನಾ ಕೇಂದ್ರ, ಮೈಸೂರು ವಿಶ್ವ ವಿದ್ಯಾನಿಲಯ:** ಭವಿಷ್ಯಕ್ಕಾಗಿ ಶಿಕ್ಷಣದ ರೂಪಾಂತರ: ಬುದ್ಧಿವಂತ, ಒಳಗೊಳ್ಳುವ ಮತ್ತು ತಲ್ಲೀನಗೊಳಿಸುವ ಕಲಿಕೆ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ, ಉದ್ಘಾಟನೆ: ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ನವ ದೆಹಲಿಯ ಸಿಇಸಿ ನಿರ್ದೇಶಕ ಪ್ರೊ.ಪರಿಷಿತ ಸಿಂಗ್, ಸ್ಥಳ: ಬಿ.ಎನ್.ಬಹದ್ದೂರ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸೈನ್ಸಸ್ ಬೆಳಗ್ಗೆ 10.30 ರಿಂದ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, ಡಾ.ಧನಂಜಯ ಸರ್ಜಿ, 6.15 ಗೀತಾರಾಧನ, 6.35 ಮತ್ತು ಸಂಜೆ 6.10: ಸಸ್ಯ ಸಿರಿ ಆಹಾರವಾಗಿ ಔಷಧೀಯ ಸಸ್ಯಗಳು, ಪ್ರಸ್ತುತಿ: ಡಾ.ಟಿ.ಶಿವಕುಮಾರ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಎಂ.ಆರ್.ಸುಧಾ, ಎಂ.ಎಸ್.ಲಕ್ಷ್ಮೀಶ, ವ್ಯಾಖ್ಯಾನ –ಡಾ.ಪ್ರದೀಪ್‌ಕುಮಾರ್ ಹೆಬ್ರಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 7.45 ಚಿತ್ರಗೀತೆಗಳು, 8.30 ಸೌರಶಕ್ತಿ ಬಳಸೋಣ–ಮನೆ ಮನೆಗು ಸೌರ ವಿದ್ಯುತ್ ಉಪಯೋಗಿಸೋಣ, ಪ್ರಾಯೋಜಕರು–BESCOM, ಬೆಂಗಳೂರು, 9.00 ನೆನಪಿನಂಗಳ (ಧ್ವನಿ ಭಂಡಾರದಿಂದ) 1. ಶ್ವಾನ ಪುರಾಣ–ಡಾ.ಪ್ರಭುಶಂಕರ ಅವರ ಲಘು ಧಾಟಿಯ ಭಾಷಣದ ಧ್ವನಿಮುದ್ರಣ, 2. ಡಾ.ಜಿ.ಎಸ್.ಶಿವರುದ್ರಪ್ಪ ಹಾಗೂ ಎ.ಕೆ.ರಾಮಾನುಜಂ ಅವರಿಂದ ಸ್ವರಚಿತ ಕವನ ವಾಚನ. 10.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಪ್ರಪಂಚಮ್ ಸೀತಾರಾಮ್–ವೇಣುವಾದನ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಗೇಮ್ ಷೋ–ಪ್ರಸ್ತುತಿ: ಬಿ.ದಿಗ್ವಿಜಯ್, 12.05 ವನಿತಾ ವಿಹಾರ, 12.35 ದೇವರನಾಮ, ಅದಿತಿ.ಎ 12.45 ನಮ್ಮ ಆರೋಗ್ಯ–ರಾಷ್ಟ್ರೀಯ ಲಸಿಕಾ ದಿನದ ಸಂದರ್ಭದಲ್ಲಿ ಲಸಿಕೆಗಳ ಮಹತ್ವ ಹಾಗೂ ಅಗತ್ಯ ಈ ಕುರಿತು ಮೈಸೂರಿನ ನವಜಾತ ಶಿಶು ಹಾಗೂ ಮಕ್ಕಳ ತಜ್ಞರಾದ ಡಾ.ಮಲ್ಲಿಕಾರ್ಜುನ ಸ್ವಾಮಿ.ಎಚ್.ಪಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ತೇಜಸ್ವಿನಿ ಗಿರೀಶ್, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ–ಪ್ರಧಾನಮಂತ್ರಿ ಸೂರ್ಯಘರ್ ಯೋಜನೆ ಕುರಿತು ಮಾಹಿತಿ ನೀಡುತ್ತಾರೆ ರಾಜಣ್ಣ. 1.20 ಭಾವಗೀತೆಗಳು– ತೇಜಸ್ವಿನಿ.ಎ.ಆರ್, 2.30 ಪ್ರದೇಶ ಸಮಾಚಾರ, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಅಶೋಕ್.ಟಿ.ಎನ್–ಹಾಡುಗಾರಿಕೆ, 4.00 ಮಹಿಳಾರಂಗ–ನನ್ನ ಹಕ್ಕು, ನನ್ನ ಜವಾಬ್ದಾರಿ–ಮಹಿಳಾ ಕಾನೂನು ಜಾಗೃತಿ ಕಾರ್ಯಕ್ರಮ. ಭಾಗವಹಿಸುತ್ತಾರೆ–ಮಹಿಳಾ ಮತ್ತು ಮಕ್ಕಳ ಹಕ್ಕುಗಳ ವಕೀಲರಾದ ಅಂಜಲಿ ರಾಮಣ್ಣ. ಪ್ರಸ್ತುತಿ: ಸಹನ, 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ–ಪ್ರಸ್ತುತಿ: ಎಸ್.ಈಶ್ವರ ಭಟ್, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ: ಕೃಷಿ ದೀವಿಗೆ ಸಂಶೋಧನಾ ಸಂಸ್ಥೆಯೊಂದಿಗೆ ಕೃಷಿ ಕಲಿಕೆ ಕುರಿತ ಬಾನುಲಿ ಸರಣಿ ಕಾರ್ಯಕ್ರಮ. ಅರಿಸಿಣ ಬೆಳೆಯಲ್ಲಿ ತಳಿಗಳ ಮಹತ್ವ ಮತ್ತು ಉತ್ಪಾದನಾ ತಾಂತ್ರಿಕತೆಗಳನ್ನ ಕುರಿತು ಸಂವಾದ. ಭಾಗವಹಿಸುತ್ತಾರೆ–ಚಾಮರಾಜನಗರ ತಾಲೂಕು ಹರದನಹಳ್ಳಿಯ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ಡಾ.ಎ.ಬಿ.ಮೋಹನ್‌ಕುಮಾರ್ ಮತ್ತು ಚಾಮರಾಜನಗರ ತಾಲೂಕು ಕೊತ್ತಲವಾಡಿಯ ಕೃಷಿಕ ಕೆ.ಎನ್.ಗುರುಪ್ರಸಾದ್. ಪ್ರಸ್ತುತಿ–ಎನ್.ಕೇಶವಮೂರ್ತಿ, 7.45 ವಿಧಾನಮಂಡಲದಲ್ಲಿ ಇಂದು, 8.00 ಸಂಸತ್ ಸಮೀಕ್ಷಾ, 8.15 ಯುವವಾಣಿ: ಮೈಸೂರು ವಿಶ್ವವಿದ್ಯಾನಿಲಯದ 106ನೇ ಘಟಿಕೋತ್ಸವದಲ್ಲಿ M.Tech ವಿಭಾಗದ urban and Regional planningನಲ್ಲಿ 16 ಚಿನ್ನದ ಪದಕ ಪಡೆದ ಮಂಡ್ಯದ ಪ್ರೇರಣಾ ಎಸ್.ಎಲ್. ಹಾಗೂ M.Comನಲ್ಲಿ 7 ಚಿನ್ನದ ಪದಕ ಹಾಗೂ 2 ನಗದು ಬಹುಮಾನ ಪಡೆದ ಮೈಸೂರಿನ ಮಾರಶೆಟ್ಟಿಹಳ್ಳಿಯ ಸುಮಲತಾ.ಎಂ ಅವರೊಂದಿಗೆ ಸಂದರ್ಶನ. ಸಂದರ್ಶಕರು–ದಿಗ್ವಿಜಯ್.ಬಿ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ–ಡಾ.ಆರ್.ಎನ್.ಶ್ರೀಲತಾ –ಹಾಡುಗಾರಿಕೆ, 10.00–ಸಂಸತ್ತಿನ ಪ್ರಶ್ನೋತ್ತರ ಅವಧಿಯ ಕಲಾಪಗಳ ಧ್ವನಿಮುದ್ರಣದ ಪ್ರಸಾರ. 10.30–ಸವಿನೆನಪು.

ಹಿರಿಯ ಸಾಹಿತಿ ಸಿಪಿಕೆಗೆ ಪತ್ನಿ ವಿಯೋಗ

ಮೈಸೂರು, ಮಾ.15–ಹೆಸರಾಂತ ಹಿರಿಯ ಸಾಹಿತಿ ಡಾ. ಸಿ.ಪಿ.ಕೃಷ್ಣ ಕುಮಾರ್ (ಡಾ. ಸಿಪಿಕೆ) ಅವರ ಪತ್ನಿ ಎಚ್.ಕೆ.ಶಾರದಾ (81) ಭಾನುವಾರ ಸಂಜೆ ಅನಾರೋಗ್ಯದಿಂದ ನಗರದ ಜಯಲಕ್ಷ್ಮಿಪುರಂನಲ್ಲಿರುವ ಬೃಂದಾವನ ಆಸ್ಪತ್ರೆಯಲ್ಲಿ ನಿಧನರಾದರು.

ಮೈಸೂರಿನ ವಿನಾಯಕ ನಗರದ ನಿವಾಸಿಯಾದ ದಿವಂಗತರು ಪತಿ ಸಿಪಿಕೆ, ಪುತ್ರ ಬೃಂದಾವನ ಆಸ್ಪತ್ರೆಯ ಡಾ. ಸಿ.ಕೆ.ಶ್ರೀಹರ್ಷ ಹಾಗೂ ಮೂವರು ಪುತ್ರಿಯರು, ಸೊಸೆ, ಅಳಿಯಂದಿರು ಮತ್ತು ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ.

ಅನಾರೋಗ್ಯ ಕಾರಣದಿಂದ ಹತ್ತು ದಿನಗಳ ಹಿಂದೆ ಶಾರದಾ ಅವರನ್ನು ಜಯಲಕ್ಷ್ಮಿಪುರಂನ ಬೃಂದಾವನ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರ ಅಂತ್ಯಕ್ರಿಯೆ ಸೋಮವಾರ (ಮಾ.16) ಬೆಳಿಗ್ಗೆ 11 ಗಂಟೆಗೆ ಗೋಕುಲಂನ ಚಿರಧಾಮದಲ್ಲಿ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.



ಶ್ರೀಮತಿ ಶಾರದಾ ಅವರು ಕೆ.ಆರ್. ನಗರ ತಾಲೂಕಿನ ದೊಡ್ಡ ಹನಸೋಗೆಯಲ್ಲಿ ಜನಿಸಿದ್ದು, 1962ರಲ್ಲಿ ಡಾ. ಸಿಪಿಕೆ ಅವರನ್ನು ವಿವಾಹವಾಗಿದ್ದರು. ಅಂದಿನಿಂದಲೂ ತಮ್ಮ ಪತಿಯ ಸಾಹಿತ್ಯ ಚಟುವಟಿಕೆಗಳಿಗೆ ತಮ್ಮನ್ನೇ ತಾವು ಧಾರೆ ಎರೆದಿದ್ದರು. ತಮ್ಮ ಪತ್ನಿಯ ಅಗಲಿಕೆಯಿಂದ ಡಾ. ಸಿಪಿಕೆ ಅವರು ದುಃಖಿತರಾಗಿದ್ದಾರೆ.

ಕಾಳಸಂತೆಯಲ್ಲಿ ದುಬಾರಿ ಬೆಲೆಗೆ ವಾಣಿಜ್ಯ ಸಿಲಿಂಡರ್ ಮಾರಾಟ

ಹೋಟೆಲ್‌ಗಳಲ್ಲಿ ತಿಂಡಿ, ತಿನಿಸುಗಳ ಬೆಲೆ ದಿಢೀರ್ ಏರಿಕೆ

- ಹಣ ಕೊಟ್ಟರೆ ಹೋಟೆಲ್ ಬಾಗಿಲಿಗೆ ಸಿಲಿಂಡರ್
- 4,500 ರಿಂದ 5 ಸಾವಿರಕ್ಕೆ ಮಾರಾಟ
- ಗ್ರಾಹಕರ ಮೇಲೆ ಬೆಲೆ ಹೆಚ್ಚಳದ ಹೊರೆ
- ಪ್ರತಿ ಆಹಾರದ ಬೆಲೆ 5 ರಿಂದ 10 ರೂಪಾಯಿಗೆ ಹೆಚ್ಚಳ

ಮೈಸೂರು, ಮಾ.15(ಬಿಎಲ್‌ಯು)– ಕಾಳಸಂತೆಯಲ್ಲಿ ವಾಣಿಜ್ಯ ಸಿಲಿಂಡರ್‌ಗಳ ಖರೀದಿ, ಅಡುಗೆ ಎಣ್ಣೆ ಬೆಲೆ ಏರಿಕೆ ಸೇರಿದಂತೆ ಇತರೆ ವಸ್ತುಗಳ ಬೆಲೆ ದುಬಾರಿ ಆಗಿರುವ ಹಿನ್ನೆಲೆಯಲ್ಲಿ ಮೈಸೂರಿನ ಹೋಟೆಲ್ ಮಾಲೀಕರು ತಿಂಡಿ, ತಿನಿಸುಗಳ ಬೆಲೆಯನ್ನು ಹೆಚ್ಚಳ ಮಾಡಿದ್ದಾರೆ.

ವಾಣಿಜ್ಯ ಸಿಲಿಂಡರ್‌ಗಳ ಪೂರೈಕೆ ಸಂಪೂರ್ಣವಾಗಿ ಸ್ಥಗಿತವಾಗಿದೆ. ಆದರೆ ಕಾಳಸಂತೆಯಲ್ಲಿ ವಾಣಿಜ್ಯ ಸಿಲಿಂಡರ್‌ಗಳು ಸುಲಭವಾಗಿ ದೊರೆಯುತ್ತಿವೆ. ಕೆಲವು ಗ್ಯಾಸ್ ಏಜೆನ್ಸಿಗಳು ಹೋಟೆಲ್ ಬಾಗಿಲಿಗೆ ಸಿಲಿಂಡರ್ ಪೂರೈಕೆ ಮಾಡಿ ದುಪ್ಪಟ್ಟು ಹಣ ವಸೂಲಿ ಮಾಡುತ್ತಿದ್ದಾರೆ.

ವಾಣಿಜ್ಯ ಸಿಲಿಂಡರ್ ಬೆಲೆ 1,938 ರೂಪಾಯಿಗೆ ಬೆಲೆ ನಿಗದಿಯಾಗಿದೆ. ಆದರೆ ಕಾಳಸಂತೆಯಲ್ಲಿ 4,500 ರೂಪಾಯಿಯಿಂದ 5,000 ರೂಪಾಯಿಗೆ ದೊರೆಯುತ್ತಿದೆ.



ಹೋಟೆಲ್ ಮುಚ್ಚಿದರೆ ಕೆಲಸಗಾರರು ಮತ್ತೆ ಬರುವುದಿಲ್ಲ ಎಂಬುದು ಸೇರಿದಂತೆ ಹಲವು ತೊಂದರೆ ಎದುರಾಗುವ ಹಿನ್ನೆಲೆಯಲ್ಲಿ ಹೋಟೆಲ್ ಮುಚ್ಚದೆ ನಡೆಸುತ್ತಿದ್ದಾರೆ. ದುಬಾರಿ ಬೆಲೆಗೆ ಸಿಲಿಂಡರ್ ಖರೀದಿಸಿ ಆಹಾರ ತಯಾರಿಸುತ್ತಿದ್ದಾರೆ. ಆದರೆ ಇದರ ಹೊರೆಯನ್ನು ಅಂತಿಮವಾಗಿ ಗ್ರಾಹಕರ ಮೇಲೆ ಹೊರೆಸುತ್ತಿದ್ದಾರೆ. ಇದರ ಮಧ್ಯೆ ಅಡುಗೆ ಎಣ್ಣೆ ಸೇರಿದಂತೆ ಇತರೆ ವಸ್ತುಗಳ ಬೆಲೆ ಕೂಡ ದುಬಾರಿಯಾಗಿದೆ. ತಿಂಡಿ, ತಿನಿಸುಗಳ ಬೆಲೆಯನ್ನು ಹೆಚ್ಚಳ ಮಾಡಲು ಇದೂ ಕೂಡ ಕಾರಣವಾಗಿದೆ.

ಹೋಟೆಲ್ ಮಾಲೀಕರು ಪ್ರತಿಯೊಂದು ಆಹಾರದ ಬೆಲೆಯನ್ನು 5 ರಿಂದ 10 ರೂಪಾಯಿಗೆ ಏರಿಕೆ ಮಾಡಿದ್ದಾರೆ. ಮೈಸೂರು ಪ್ರವಾಸಿ ತಾಣವಾಗಿದ್ದು, ಸಾವಿರಾರು ಜನರು ಮೈಸೂರಿಗೆ ಬರುತ್ತಾರೆ. ಬೆಲೆ ಹೆಚ್ಚಳವಾದರೂ ಅನಿವಾರ್ಯವಾಗಿ ತಿಂಡಿ, ತಿನಿಸು ಖರೀದಿಸುತ್ತಿದ್ದಾರೆ.

ದೋಸೆ, ಪೂರಿ, ಬೋಂಡ ಬಜ್ಜಿ ತಯಾರಿಕೆ ಸ್ಥಗಿತ

ಹೋಟೆಲ್‌ಗಳಲ್ಲಿ ದೋಸೆ, ಪೂರಿ ಸೇರಿದಂತೆ ಇತರೆ ಆಹಾರ ತಯಾರಿಕೆಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಲಾಗಿದೆ. ದೋಸೆ, ಪೂರಿ, ವಡೆ ಬೊಂಡ, ಬಜ್ಜಿ, ಪಕೋಡ ಸೇರಿದಂತೆ ಇತರೆ ಆಹಾರ ತಯಾರಿಸಲು ಯಾವಾಗಲೂ ಗ್ಯಾಸ್ ಉರಿಯುತ್ತಿರಬೇಕು. ಆದರೆ ವಾಣಿಜ್ಯ ಸಿಲಿಂಡರ್ ದೊರೆಯದ ಕಾರಣ ಈ ಆಹಾರ ತಯಾರಿಕೆಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಲಾಗಿದೆ.

ಸದ್ಯಕ್ಕೆ ಹೋಟೆಲ್‌ಗಳಲ್ಲಿ ದೋಸೆ, ಪೂರಿ, ವಡೆ ಬೊಂಡ ಬಜ್ಜಿ ಪಕೋಡ ಸಿಗುತ್ತಿಲ್ಲದ ಕಾರಣ ಬಾಯಿ ರುಚಿ ತಪ್ಪಿ ತಿಂಡಿ ಪ್ರಿಯರು ನಿರಾಶರಾಗಿದ್ದಾರೆ.

ಮೈಸೂರಿನಲ್ಲಿ 150 ಕ್ಕೂ ಹೆಚ್ಚು ಹೋಟೆಲ್‌ಗಳು ಬಾಗಿಲು ಮುಚ್ಚಿವೆ

ವಾಣಿಜ್ಯ ಸಿಲಿಂಡರ್ ಪೂರೈಕೆ ಸಂಪೂರ್ಣವಾಗಿ ಸ್ಥಗಿತವಾಗಿರುವ ಹಿನ್ನೆಲೆಯಲ್ಲಿ ಮೈಸೂರಿನ ಸುಮಾರು 150ಕ್ಕೂ ಹೆಚ್ಚು ಹೋಟೆಲ್‌ಗಳನ್ನು ಮುಚ್ಚಲಾಗಿದೆ.

ಕೆಲವು ಹೋಟೆಲ್‌ನವರು ಸೌದೆ ಒಲೆ ಬಳಸಿ ಆಹಾರ ತಯಾರಿಸುತ್ತಿದ್ದಾರೆ. ಕಾಫಿ, ಟೀ ಸೇರಿದಂತೆ ಇತರೆ ಆಹಾರ ತಯಾರಿಕೆಗೆ ಇಂಡಕ್ಷನ್ ಸ್ಟೌವ್ ಬಳಸುತ್ತಿದ್ದಾರೆ.

ಆದರೆ ಕೆಲವು ಹೋಟೆಲ್‌ಗಳಲ್ಲಿ ಆಹಾರ ತಯಾರಿಕೆಗೆ ಸೌದೆ ಒಲೆ ವ್ಯವಸ್ಥೆ ಇಲ್ಲ, ಇಂಡಕ್ಷನ್ ಸ್ಟೌವ್ ಬಳಸಿ ಎಲ್ಲಾ ಆಹಾರ ತಯಾರಿಸಲು ಸಾಧ್ಯವಿಲ್ಲ. ಈ ಎಲ್ಲಾ ಕಾರಣಗಳಿಂದ ಮೈಸೂರಿನ ಹಲವು ಹೋಟೆಲ್‌ಗಳನ್ನು ಸಂಪೂರ್ಣವಾಗಿ ಮುಚ್ಚಲಾಗಿದೆ.

ಹೋಟೆಲ್‌ಗಳು ಮಾತ್ರವಲ್ಲದೆ ಫಾಸ್ಟ್ ಫುಡ್‌ನವರು ಕೂಡ ಆಹಾರ ತಯಾರಿಕೆ ಸ್ಥಗಿತಗೊಳಿಸಿದ್ದಾರೆ. ಇದರಿಂದ ಫಾಸ್ಟ್ ಫುಡ್ ಆಹಾರ ದೊರೆಯುತ್ತಿಲ್ಲ.

ದೆಹಲಿ ಹಾಗೂ ಚೆನ್ನೈನಲ್ಲಿ ನಾಳೆಯಿಂದ ಶೇಕಡ 20ರಷ್ಟು ವಾಣಿಜ್ಯ ಸಿಲಿಂಡರ್ ಪೂರೈಸುವ ಬಗ್ಗೆ ಕೇಂದ್ರ ಪೆಟ್ರೋಲಿಯಂ ಸಚಿವಾಲಯ ಆದೇಶ ಹೊರಡಿಸಿದೆ.

ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹಾಕಿ ದೆಹಲಿ ಹಾಗೂ ಚೆನ್ನೈನಂತೆ ಕರ್ನಾಟಕದಲ್ಲೂ ಕೂಡ ವಾಣಿಜ್ಯ ಸಿಲಿಂಡರ್ ಸರಬರಾಜು ಮಾಡಬೇಕೆಂದು ಹೋಟೆಲ್ ಮಾಲೀಕರ ಸಂಘದವರು ನಾಳೆ ರಾಜ್ಯದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಲಿದ್ದಾರೆ.

ಸಂಕಷ್ಟದಲ್ಲಿರುವ ರೈತರಿಗೂ ನೆರವು ನೀಡಿ

ಲಯನ್ಸ್ ಸಂಸ್ಥೆಗೆ ಸಚಿವ ಚೆಲುವರಾಯಸ್ವಾಮಿ ಮನವಿ



ಲಯನ್ಸ್ ಇಂಟರ್‌ನ್ಯಾಷನಲ್ ಜಿಲ್ಲೆ 317 ಜಿ ವತಿಯಿಂದ ಆಯೋಜಿಸಿದ್ದ ಪ್ರಾಂತೀಯ ಸಮ್ಮೇಳನವನ್ನು ಉದ್ಘಾಟಿಸಲಾಯಿತು.

ಮೈಸೂರು, ಮಾ.15(ಎಸ್‌ಪಿಎನ್)– ಮೈಸೂರು ಬೋಗಾದಿ ಎರಡನೇ ಹಂತದ ರಾಜರಾಜೇಶ್ವರಿ ನಗರದ ಬಿಇಎಂಎಲ್ ಲೇಔಟ್ 2ನೇ ಹಂತದ ಖಾಸಗಿ ಹೋಟೆಲ್‌ನಲ್ಲಿ ಭಾನುವಾರ ಲಯನ್ಸ್ ಇಂಟರ್‌ನ್ಯಾಷನಲ್ ಜಿಲ್ಲೆ 317 ಜಿ ವತಿಯಿಂದ ಆಯೋಜಿಸಿದ್ದ ಪ್ರಾಂತೀಯ ಸಮ್ಮೇಳನವನ್ನು ಕೃಷಿ ಸಚಿವ ಎನ್. ಚೆಲುವರಾಯ ಸ್ವಾಮಿ ಉದ್ಘಾಟಿಸಿದರು.

ಲಯನ್ಸ್ ಸಂಸ್ಥೆ ಜಗತ್ತಿನಾದ್ಯಂತ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿದೆ. ಆರೋಗ್ಯ, ಶಿಕ್ಷಣ ಹೀಗೆ ಎಲ್ಲಾ ಕ್ಷೇತ್ರಗಳಲ್ಲೂ ಸೇವೆ ಸಲ್ಲಿಸುತ್ತಿದೆ. ಒಂದು ಪ್ರದೇಶಕ್ಕೆ ಸೀಮಿತವಾಗದೆ ವಿಶ್ವದೆಲ್ಲೆಡೆ ಸಂಸ್ಥೆಯು ಸೇವಾ ಕಾರ್ಯಗಳನ್ನು ನಡೆಸುತ್ತಿರುವುದು ಶ್ಲಾಘನೀಯ ಎಂದರು.

ದೇಶಕ್ಕೆ ಅನ್ನ ನೀಡುವ ರೈತ ಪ್ರಸ್ತುತ ಕಷ್ಟದಲ್ಲಿದ್ದಾನೆ. ಆತನ ನೆರವಿಗೆ ಧಾವಿಸುವುದು ಪ್ರತಿಯೊಬ್ಬರ ಕರ್ತವ್ಯ. ಹಾಗಾಗಿ ಲಯನ್ಸ್ ಸಂಸ್ಥೆಯ ಪದಾಧಿಕಾರಿಗಳು ಬೇರೆ ಕ್ಷೇತ್ರದಲ್ಲಿರುವವರನ್ನು ಗುರುತಿಸಿದಂತೆ ಸಂಕಷ್ಟದಲ್ಲಿರುವ ರೈತರನ್ನು ಗುರುತಿಸಿ, ನೆರವು ನೀಡಲಿ ಎಂದು ಸಲಹೆ ನೀಡಿದರು.

ಪ್ರಾಂತೀಯ ಸಮ್ಮೇಳನದ ಅಧ್ಯಕ್ಷ ಕೆ.ರವಿ ಅವರು ಲಯನ್ಸ್ ಸಂಸ್ಥೆ ಕುರಿತು ಮಾತನಾಡಿದರು. ಈ ವೇಳೆ ಅಂತಾರಾಷ್ಟ್ರೀಯ ಲಯನ್ಸ್‌ನ ಮಾಜಿ ನಿರ್ದೇಶಕ ವಿ.ವಿ.ಕೃಷ್ಣರೆಡ್ಡಿ, ಶಿಕ್ಷಣ ತಜ್ಞ ಚೇತನ್ ರಾವ್, ಪದಾಧಿಕಾರಿಗಳಾದ ಕೆ. ದೇವೇಗೌಡ, ಎಸ್. ರಾಮಚಂದ್ರನ್, ಎಸ್.ಮೂರ್ತಿ, ಎನ್. ಸುಬ್ರಮಣ್ಯ , ಸಿ.ಡಿ. ಕೃಷ್ಣ, ವಿ.ಸಿ. ರವಿ ಕುಮಾರ್, ನಂಜುಂಡಸ್ವಾಮಿ ಇತರರಿದ್ದರು.

'ಪದ್ಮ' ಪ್ರಶಸ್ತಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನ

ನವದೆಹಲಿ: ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ಪದ್ಮವಿಭೂಷಣ, ಪದ್ಮಭೂಷಣ ಮತ್ತು ಪದ್ಮಶ್ರೀ ಪ್ರಶಸ್ತಿಗಳಿಗೆ ಸರ್ಕಾರ ಆನ್‌ಲೈನ್ ಮೂಲಕ ನಾಮನಿರ್ದೇಶನಗಳನ್ನು ಆಹ್ವಾನಿಸಿದೆ. 2027ರ ಗಣರಾಜ್ಯೋತ್ಸವ ಸಂದರ್ಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಅರ್ಜಿ ಸಲ್ಲಿಸಲು 2026ರ ಜುಲೈ 31 ಕೊನೆಯ ದಿನ. ರಾಷ್ಟ್ರೀಯ ಪುರಸ್ಕಾರ ಪೋರ್ಟಲ್ https://awards.gov.in ಮೂಲಕ ಅರ್ಜಿ ಸಲ್ಲಿಸಬೇಕು. ಕಲೆ, ಸಾಹಿತ್ಯ, ಶಿಕ್ಷಣ, ಕ್ರೀಡೆ, ವೈದ್ಯಕೀಯ, ಸಮಾಜ ಕಾರ್ಯ, ವಿಜ್ಞಾನ ಮತ್ತು ತಂತ್ರಜ್ಞಾನ, ಸಾರ್ವಜನಿಕ ಸಂಪರ್ಕ, ನಾಗರಿಕ ಸೇವೆ, ಉದ್ಯಮ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿನ ಶ್ರೇಷ್ಠ ಸಾಧಕರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗುತ್ತದೆ.

ಅರ್ಜಿ ನಮೂನೆ, ಅರ್ಹತೆ ಮತ್ತು ಇತರೆ ಮಾಹಿತಿಗಳು ಪೋರ್ಟಲ್‌ನಲ್ಲಿ ಲಭ್ಯ ಇವೆ. ಪದ್ಮ ಪ್ರಶಸ್ತಿ ವೆಬ್‌ಸೈಟ್ https://padmaawards.gov.in ಮೂಲಕವೂ ಹೆಚ್ಚಿನ ಮಾಹಿತಿ ಪಡೆಯಬಹುದು ಎಂದು ಪ್ರಕಟಣೆ ತಿಳಿಸಿದೆ.

ಕ್ರಿಕೆಟ್ ಪಂದ್ಯಾವಳಿ



ಮೈಸೂರು ತಾಲೂಕಿನ ದಡದಕಲ್ಲಹಳ್ಳಿ ಮಾರಮ್ಮನ ಹಬ್ಬದ ಪ್ರಯುಕ್ತ ಆಯೋಜಿಸಲಾಗಿದ್ದ ಕ್ರಿಕೆಟ್ ಪಂದ್ಯಾವಳಿಯಲ್ಲಿ ಚಾಂಪಿಯನ್ ಆದ ತಂಡಕ್ಕೆ ಬಿಜೆಪಿ ಮುಖಂಡ ಕವೀಶ್ ಗೌಡ ಪ್ರಶಸ್ತಿ ನೀಡಿ, ಅಭಿನಂದಿಸಿದರು. ಈ ವೇಳೆ ಗುಂಗ್ರಾಲ್ ಛತ್ರ ಗ್ರಾಪಂ ಉಪಾಧ್ಯಕ್ಷ ಇ.ಪಿ.ರವಿ, ದೇವರಾಜು, ದಡದಕಲ್ಲಹಳ್ಳಿ ಗ್ರಾಪಂ ಸದಸ್ಯರಾದ ಲೋಕೇಶ್, ಯೋಗಮೂರ್ತಿ, ಮುಖಂಡರಾದ ವೀರಭದ್ರಸ್ವಾಮಿ, ಯಲಚಹಳ್ಳಿ ಗ್ರಾಮದ ಜೆಡಿಎಸ್ ಮುಖಂಡ ದೇವರಾಜು ಮತ್ತಿತರರು ಉಪಸ್ಥಿತರಿದ್ದರು.

ಬುಲ್ಸ್ ಆಫ್ ಮೈಸೂರು ಮೋಟಾರ್ ಸೈಕಲ್ ಕ್ಲಬ್ ಮೊದಲ ವಾರ್ಷಿಕ ಮಹಾಸಭೆ ಯಶಸ್ವಿ



ಬುಲ್ಸ್ ಆಫ್ ಮೈಸೂರು ಮೋಟಾರ್ ಸೈಕಲ್ ಕ್ಲಬ್‌ನ ಮೊದಲ ವಾರ್ಷಿಕ ಮಹಾಸಭೆ ಭಾನುವಾರ ನಡೆಯಿತು.

ಮೈಸೂರು,ಮಾ.15(ಪಿಎಂ)– ಬುಲ್ಸ್ ಆಫ್ ಮೈಸೂರು ಮೋಟಾರ್ ಸೈಕಲ್ ಕ್ಲಬ್ (ಬಿಓಎಂ–ಎಂಸಿ) ಮೊದಲ ವಾರ್ಷಿಕ ಮಹಾಸಭೆ ಭಾನುವಾರ ನಡೆಯಿತು.

ಮೈಸೂರಿನ ಬೋಗಾದಿ ರಿಂಗ್ ರೆಸ್ಟೋರೆಂಟ್‌ವೊಂದರಲ್ಲಿ ನಡೆದ ಮೊದಲ ವಾರ್ಷಿಕ ಮಹಾಸಭೆಯಲ್ಲಿ ಸಿ.ಹೆಚ್. ದಿವಾಕರ್ (ಅಧ್ಯಕ್ಷರು) ಸೇರಿದಂತೆ ನೂತನ ಪದಾಧಿಕಾರಿಗಳನ್ನು ಒಳಗೊಂಡ ಸಮಿತಿಯನ್ನು ರಚಿಸಲಾಯಿತು. ಈ ಚುನಾಯಿತ ಸಮಿತಿಯು 3 ವರ್ಷಗಳ ಅವಧಿಗೆ (2025–2027) ಕ್ಲಬ್ ಚಟುವಟಿಕೆಗಳಿಗೆ ಸೂಕ್ತ ಮಾರ್ಗದರ್ಶನ ನೀಡುವ ಮೂಲಕ ಸುಗಮವಾಗಿ ಮುನ್ನಡೆಸಲಿದೆ.

2009ರಲ್ಲಿ ಸ್ಥಾಪನೆಯಾದ ಬುಲ್ಸ್ ಆಫ್ ಮೈಸೂರು ಮೋಟಾರ್ ಸೈಕಲ್ ಕ್ಲಬ್, ಅಕ್ಟೋಬರ್ 2004ರಲ್ಲಿ ಸೊಸೈಟಿಸ್ ಆಕ್ಟ್ ಆಫ್ ಇಂಡಿಯಾ ಅಡಿಯಲ್ಲಿ ಅಧಿಕೃತವಾಗಿ ನೋಂದಾಯಿತ ಕ್ಲಬ್ ಆಗಿ ಹೊರಹೊಮ್ಮಿತ್ತು. ಇದೀಗ ಮೊದಲ ವಾರ್ಷಿಕ ಸಾಮಾನ್ಯ ಸಭೆಯನ್ನು ಯಶಸ್ವಿಯಾಗಿ ನಡೆಸಿತು.

ಮೋಟಾರ್‌ಸೈಕಲ್ ಸವಾರಿಯಲ್ಲಿ ಉತ್ಸಾಹ ಹೊಂದಿದ್ದ ಸ್ನೇಹಿತರ ಗುಂಪಿನಿಂದ ಕ್ಲಬ್ ಪ್ರಾರಂಭವಾಯಿತು. ಭಾರತದಾದ್ಯಂತ ನಿಯಮಿತವಾಗಿ ಸವಾರಿ ನಡೆಸುವ, ರಾಷ್ಟ್ರೀಯ ಮೋಟಾರ್ ಸೈಕ್ಲಿಂಗ್‌ನಲ್ಲಿ ಭಾಗವಹಿಸುವ ಮತ್ತು ಸ್ಥಳೀಯ ಮೋಟಾರ್ ಸೈಕ್ಲಿಂಗ್ ಚಟುವಟಿಕೆ ಆಯೋಜಿಸುವ ಸಕ್ರಿಯ ಸವಾರಿ ಸಮುದಾಯವಾಗಿ ಕ್ಲಬ್ ವಿಕಾಸಗೊಂಡಿದೆ.

ಕ್ಲಬ್‌ನ ಸದಸ್ಯರು ಇತ್ತೀಚೆಗೆ ದೇಶಾದ್ಯಂತ ಸಾವಿರಾರು ಕಿಲೋಮೀಟರ್‌ಗಳನ್ನು ಕ್ರಮಿಸಿ ಹಲವು ಪ್ಯಾನ್ ಇಂಡಿಯಾ ಸವಾರಿಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆ. ಇತ್ತೀಚೆಗೆ ಕ್ಲಬ್‌ನ ಸವಾರರ ತಂಡವು ಮೈಸೂರಿನಿಂದ ಉತ್ತರಾಖಂಡದ ಋಷಿಕೇಶಕ್ಕೆ ಪ್ರಯಾಣಿಸಿ ಪ್ರಸಿದ್ಧ ರೈಡರ್ ಮೇನಿಯಾ ಮೋಟಾರ್ ಸೈಕ್ಲಿಂಗ್ ಕಾರ್ಯಕ್ರಮದಲ್ಲಿ ಭಾಗವಹಿಸಲು ವಿವಿಧ ರಾಜ್ಯಗಳ ಮೂಲಕ ಸವಾರಿ ಮಾಡಿದೆ. ಮೋಟಾರ್ ಸೈಕಲ್ ಸವಾರಿ ಜೊತೆಗೆ ಸ್ಥಳೀಯ ಸಮುದಾಯಗಳು ಹಾಗೂ ನಗರದ ಕಾರ್ಯಕ್ರಮಗಳನ್ನು ಸಹ ಕ್ಲಬ್ ಬೆಂಬಲಿಸುತ್ತಿದೆ.

ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದ ಕ್ಲಬ್ ಸದಸ್ಯರು, ಕಳೆದ ದಶಕದಲ್ಲಿ ಕ್ಲಬ್‌ನ ಬೆಳವಣಿಗೆ ಬಗ್ಗೆ ಮೆಲುಕು ಹಾಕಿದರು. ಅನೌಪಚಾರಿಕ ವಾರಾಂತ್ಯದ ಸವಾರಿಗಳಿಂದ ಹಿಡಿದು ದೇಶಾದ್ಯಂತ ನಡೆದ ಪ್ರಯಾಣಗಳು ಮತ್ತು ರಾಷ್ಟ್ರೀಯ ಮೋಟಾರ್ ಸೈಕ್ಲಿಂಗ್ ಕಾರ್ಯಕ್ರಮಗಳನ್ನು ಕೈಗೊಳ್ಳುವ ಬಗ್ಗೆ ಚರ್ಚೆ ನಡೆಸಿದರು.

ತಿರುಪತಿಯಲ್ಲಿ ಬೃಹತ್ ಹೈಟೆಕ್ ಅನ್ನಪ್ರಸಾದ ಕೇಂದ್ರಕ್ಕೆ ರಿಲಯನ್ಸ್ ಸಂಸ್ಥೆಯಿಂದ 120 ಕೋಟಿ ದೇಣಿಗೆ

ತಿರುಪತಿ: ಆಂಧ್ರಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರ ಆಶಯದಂತೆ ತಿರುಮಲ ತಿರುಪತಿ ದೇವಸ್ಥಾನದಲ್ಲಿ ಅನ್ನಪ್ರಸಾದ ವಿತರಣೆಯಲ್ಲಿ ಸಂಪೂರ್ಣ ಯಾಂತ್ರೀಕರಣ ಮತ್ತು ಆಧುನಿಕತೆಯನ್ನು ತರಲು ಟಿಟಿಡಿ ಮುಂದಾಗಿದ್ದು, ಈ ಮಹತ್ವಾಕಾಂಕ್ಷೆಯ ಯೋಜನೆಗೆ ಭಾರತದ ಪ್ರತಿಷ್ಠಿತ ರಿಲಯನ್ಸ್ ಸಂಸ್ಥೆಯು ಸುಮಾರು 120 ಕೋಟಿ ರೂಪಾಯಿ ಬೃಹತ್ ದೇಣಿಗೆಯನ್ನು ಘೋಷಿಸಿದೆ.

ಕಳೆದ ವರ್ಷ ತಿರುಮಲಕ್ಕೆ ಭೇಟಿ ನೀಡಿದ್ದ ರಿಲಯನ್ಸ್ ಅಧ್ಯಕ್ಷ ಮುಖೇಶ್ ಅಂಬಾನಿ ಅವರು ಭಕ್ತರ ಅನುಕೂಲಕ್ಕಾಗಿ ಈ ದೇಣಿಗೆಯನ್ನು ನೀಡುವ ಭರವಸೆ ನೀಡಿದ್ದರು. ಅದರಂತೆ ಈಗ 120 ಕೋಟಿ ವೆಚ್ಚದಲ್ಲಿ ತಂತ್ರಜ್ಞಾನ ಆಧಾರಿತ 'ಮೆಡ್ರಾನ್' ಅಡುಗೆಮನೆ ಮತ್ತು ಅನ್ನಪ್ರಸಾದ ಕೇಂದ್ರದ ನಿರ್ಮಾಣ ಕಾರ್ಯಕ್ಕೆ ಚಾಲನೆ ಸಿಗಲಿದೆ. ಪ್ರಸ್ತುತ ಕಾರ್ಯಾಚರಿಸುತ್ತಿರುವ ತಾರಿಗೊಂಡ ವೆಂಕಮಾಂಬ ಅನ್ನಪ್ರಸಾದ ಕೇಂದ್ರವನ್ನು ಕೂಡ ಆಧುನೀಕರಿಸಲಾಗುತ್ತಿದ್ದು, ಏಕಕಾಲದಲ್ಲಿ 4 ಸಾವಿರ ಭಕ್ತರಿಗೆ ಆಸನ ವ್ಯವಸ್ಥೆ ಕಲ್ಪಿಸಲು ಟಿಟಿಡಿ ಸಿದ್ಧತೆ ನಡೆಸುತ್ತಿದೆ. ಆಧುನಿಕ ಅಡುಗೆ ಮನೆಯು ಆಹಾರ ತಯಾರಿಕೆಯಲ್ಲಿ ಗರಿಷ್ಠ ಶುಚಿತ್ವ ಮತ್ತು ಗುಣಮಟ್ಟವನ್ನು ಕಾಪಾಡಿಕೊಳ್ಳಲು ಸಹಾಯ ಮಾಡಲಿದೆ.

ಇತ್ತೀಚೆಗೆ ನಡೆದ ಟಿಟಿಡಿ ಟ್ರಸ್ಟಿಗಳ ಮಂಡಳಿ ಸಭೆಯಲ್ಲಿ ಈ ಯೋಜನೆಗೆ ಅಧಿಕೃತ ಅನುಮೋದನೆ ದೊರೆತಿದ್ದು, ಶೀಘ್ರದಲ್ಲೇ ಟೆಂಡರ್ ಪ್ರಕ್ರಿಯೆ ಆರಂಭವಾಗಲಿದೆ. ಈ ಹೊಸ ಕೇಂದ್ರದ ಸ್ಥಾಪನೆಯಿಂದಾಗಿ ತಿರುಮಲಕ್ಕೆ ಬರುವ ಭಕ್ತರು ಸಾಲಿನಲ್ಲಿ ಹೆಚ್ಚು ಹೊತ್ತು ಕಾಯದೆ, ಅತ್ಯಂತ ಸುಸಜ್ಜಿತ ಪರಿಸರದಲ್ಲಿ ಪ್ರಸಾದವನ್ನು ಸ್ವೀಕರಿಸಬಹುದಾಗಿದೆ.

ಕಚ್ಚಾ ತೈಲ ಹೊತ್ತ ಹಡಗು ಭಾರತದತ್ತ ಸುರಕ್ಷಿತ ಪ್ರಯಾಣ

ನವದೆಹಲಿ: ಕಚ್ಚಾ ತೈಲವನ್ನು ಹೊತ್ತಿರುವ ಭಾರತದ ಹಡಗು ಯುಎಇ ದೇಶದ ಫುಜೈರಾ ಬಂದರಿನಿಂದ ಭಾರತದತ್ತ ಸುರಕ್ಷಿತವಾಗಿ ಪ್ರಯಾಣ ಆರಂಭಿಸಿದೆ.

ಸುಮಾರು 80,800 ಟನ್ ಕಚ್ಚಾ ತೈಲವನ್ನು ಹೊತ್ತಿರುವ 'ಜಗ್ ಲಾಡಕಿ' ಹೆಸರಿನ ಈ ಹಡಗು, ಯುದ್ಧಪೀಡಿತ ಪ್ರದೇಶದಿಂದ ಸುರಕ್ಷಿತವಾಗಿ ಹೊರಬಂದಿರುವ ಭಾರತದ ನಾಲ್ಕನೆಯ ಹಡಗಾಗಿದೆ. ಜಗ್ ಲಾಡಕಿ ಹಡಗು ಶನಿವಾರ ಕಚ್ಚಾ ತೈಲವನ್ನು ಭರ್ತಿ ಮಾಡಿಕೊಳ್ಳುತ್ತಿದ್ದಾಗ, ಫುಜೈರಾ ತೈಲದ ಟರ್ಮಿನಲ್ ಮೇಲೆ ದಾಳಿ ಆಗಿದೆ. ಆದರೆ ಹಡಗು ಅಲ್ಲಿಂದ ಸುರಕ್ಷಿತವಾಗಿ ಭಾನುವಾರ ಹೊರಟಿದೆ. ಪಶ್ಚಿಮ ಏಷ್ಯಾದಲ್ಲಿನ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸಲಾಗುತ್ತಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ.

ಎಲ್‌ಪಿಜಿ ಹೊತ್ತ ಭಾರತದ ಹಡಗುಗಳಾದ ಶಿವಾಲಿಕ್ ಮತ್ತು ನಂದಾದೇವಿ ಶನಿವಾರ ಹಾರ್ಮುಜ್ ಜಲಸಂಧಿಯನ್ನು ಸುರಕ್ಷಿತವಾಗಿ ದಾಟಿದ್ದವು.

ಸಂಸ್ಮರಣೆ



ಜೆಎಸ್‌ಎಸ್ ಆಟೋ ಮಾಲೀಕರ ಸಂಘದ ಗೌರವಾಧ್ಯಕ್ಷ ರವಿ ಶರ್ಮ ಅವರ ಮೊದಲ ವರ್ಷದ ಸಂಸ್ಮರಣೆ ಪ್ರಯುಕ್ತ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು. ಸ್ಥಳೀಯ ಮುಖಂಡರಾದ ಶೇಖರ್, ರಮೇಶ್, ಸೋಮ, ಪ್ರಭಿ, ಆಟೋ ಮಹೇಶ್, ದೀಪಕ್ ಸೇರಿದಂತೆ ರವಿ ಶರ್ಮ ಅವರ ಸ್ನೇಹಿತರು ಭಾಗವಹಿಸಿದ್ದರು.

ಯುಗಾದಿ, ರಂಜಾನ್‌ಗೆ 2 ಸಾವಿರ ವಿಶೇಷ ಬಸ್ ಸಂಚಾರ

ಮುಂಗಡ ಟಿಕೆಟ್‌ಗೆ ರಿಯಾಯ್ತಿ ಘೋಷಿಸಿದ ಸಾರಿಗೆ ಸಂಸ್ಥೆ

ಬೆಂಗಳೂರು: ಯುಗಾದಿ ಮತ್ತು ರಂಜಾನ್ ಹಬ್ಬಗಳ ಹಿನ್ನೆಲೆಯಲ್ಲಿ ಪ್ರಯಾಣಿಕರ ಸಂಖ್ಯೆ ಹೆಚ್ಚಲಿರುವುದರಿಂದ ಕೆಎಸ್‌ಆರ್‌ಟಿಸಿ 2,000 ವಿಶೇಷ ಬಸ್ ಕಲ್ಪಿಸಲು ನಿರ್ಧರಿಸಿದೆ.

ಬೆಂಗಳೂರಿನಿಂದ ಧರ್ಮಸ್ಥಳ, ಕುಕ್ಕೆ ಸುಬ್ರಹ್ಮಣ್ಯ, ಶಿವಮೊಗ್ಗ, ಮೈಸೂರು, ಹುಣಸೂರು, ಪಿರಿಯಾಪಟ್ಟಣ, ವಿರಾಜಪೇಟೆ, ಕುಶಾಲನಗರ, ಮಡಿಕೇರಿ, ಹಾಸನ, ಮಂಗಳೂರು, ಕುಂದಾಪುರ, ಶೃಂಗೇರಿ, ಹೊರನಾಡು, ದಾವಣಗೆರೆ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ವಿಜಯಪುರ, ಗೋಕರ್ಣ, ಶಿರಸಿ, ಕಾರವಾರ, ರಾಯಚೂರು, ಕಲಬುರಗಿ, ಬಳ್ಳಾರಿ, ಕೊಪ್ಪಳ, ಯಾದಗಿರಿ, ಬೀದರ್, ಹೊರರಾಜ್ಯಗಳ ತಿರುಪತಿ, ವಿಜಯವಾಡ, ಹೈದರಾಬಾದ್ ಸೇರಿದಂತೆ ವಿವಿಧೆಡೆಗೆ



ಮಾರ್ಚ್ 18ರಿಂದ 20ರವರೆಗೆ ಹಾಗೂ ವಿವಿಧೆಡೆಯಿಂದ ಬೆಂಗಳೂರಿಗೆ ಮಾ.22ರಂದು ವಿಶೇಷ ಬಸ್‌ಗಳು ಸಂಚರಿಸಲಿವೆ.

ಕೆಂಪೇಗೌಡ ಬಸ್ ನಿಲ್ದಾಣ, ಮೈಸೂರು ರಸ್ತೆ ಬಸ್ ನಿಲ್ದಾಣಗಳಿಂದ ಬಸ್‌ಗಳು ಸಂಚರಿಸಲಿವೆ. ನಿಗಮದ ಕಾರ್ಯಾಚರಣೆ ವ್ಯಾಪ್ತಿಯ ಎಲ್ಲ ತಾಲೂಕು, ಜಿಲ್ಲಾ ಬಸ್ ನಿಲ್ದಾಣಗಳಿಂದ ಸಂಚಾರ ಒತ್ತಡಕ್ಕೆ ಅನುಗುಣವಾಗಿ ವಿಶೇಷ ಕಾರ್ಯಾಚರಣೆ ಮಾಡಲಾಗುವುದು. www.ksrtc.karnataka.gov.in ವೆಬ್‌ಸೈಟ್ ಭೇಟಿ ನೀಡಿ ಇ–ಟಿಕೆಟ್ ಬುಕಿಂಗ್ ಮಾಡಬಹುದು. ಪ್ರಯಾಣಿಕರು ಕರ್ನಾಟಕ ಹಾಗೂ ಅಂತಾರಾಜ್ಯದಲ್ಲಿ ಇರುವ ಗಣಕೀಕೃತ ಬುಕಿಂಗ್ ಕೌಂಟರ್‌ಗಳ ಮೂಲಕ ಮುಂಗಡವಾಗಿ ಆಸನಗಳನ್ನು ಕಾಯ್ದಿರಿಸಬಹುದು.

ಬುಕ್ಕಿಂಗ್ ರಿಯಾಯ್ತಿ: ನಾಲ್ಕು ಅಥವಾ ಹೆಚ್ಚು ಪ್ರಯಾಣಿಕರು ಒಟ್ಟಾಗಿ ಮುಂಗಡ ಟಿಕೆಟ್ ಕಾಯ್ದಿರಿಸಿದಲ್ಲಿ ಶೇ.5ರಷ್ಟು ರಿಯಾಯಿತಿ ನೀಡಲಾಗುವುದು ಹಾಗೂ ಹೋಗುವ ಮತ್ತು ಬರುವ ಪ್ರಯಾಣದ ಟಿಕೆಟ್ ಅನ್ನು ಒಟ್ಟಿಗೆ ಕಾಯ್ದಿರಿಸಿದಾಗ ಬರುವ ಪ್ರಯಾಣ ದರದಲ್ಲಿ ಶೇ.10 ರಿಯಾಯಿತಿ ನೀಡಲಾಗುವುದು ಎಂದು ಕೆಎಸ್‌ಆರ್‌ಟಿಸಿ ಮುಖ್ಯ ಸಂಚಾರ ವ್ಯವಸ್ಥಾಪಕರು ತಿಳಿಸಿದ್ದಾರೆ.

ಬಿಡದಿ ರೆಸಾರ್ಟ್‌ನಲ್ಲಿರುವ ಒಡಿಶಾ ಕೈ ಶಾಸಕರಿಗೆ ತಲಾ 5 ಕೋಟಿ ಆಮಿಷ

ಇಬ್ಬರು ಪೊಲೀಸ್ ವಶಕ್ಕೆ; ಇದು ಬಿಜೆಪಿಯ ಆಪರೇಷನ್ ಕಮಲ ಯತ್ನ: ಡಿಕೆಶಿ ಆರೋಪ

ಬೆಂಗಳೂರು: ಬಿಡದಿಯ ರೆಸಾರ್ಟ್‌ನಲ್ಲಿ ವಾಸ್ತವ್ಯ ಹೂಡಿರುವ ಒಡಿಶಾ ಕಾಂಗ್ರೆಸ್ ಶಾಸಕರಿಗೆ ಲಂಚ ನೀಡಲು ಯತ್ನಿಸಿದ ಆರೋಪದ ಮೇಲೆ ಇಬ್ಬರನ್ನು ಹಿಡಿದು, ಪೊಲೀಸರ ವಶಕ್ಕೆ ಒಪ್ಪಿಸಲಾಗಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ಬಿಜೆಪಿ ಆಪರೇಷನ್ ಕಮಲ ಮಾಡಲು ಯೋಜನೆ ರೂಪಿಸಿದ್ದು, ಮಾರ್ಚ್ 16 ರಂದು ನಡೆಯಲಿರುವ ರಾಜ್ಯಸಭಾ ಚುನಾವಣೆಗೆ ಮುಂಚಿತವಾಗಿ ಇಲ್ಲಿಗೆ ಕರೆತರಲಾದ ಒಡಿಶಾ ಶಾಸಕರಿಗೆ ತಲಾ ಐದು ಕೋಟಿ ರೂ. ನೀಡುವ ಆಮಿಷವೊಡ್ಡಲಾಗಿದೆ. ನಮ್ಮ ಶಾಸಕರಿಗೆ ಲಂಚ ನೀಡಲು ಯತ್ನಿಸಿದ ಆರೋಪದ ಮೇಲೆ ಇಬ್ಬರನ್ನು ವಶಕ್ಕೆ ಪಡೆಯಲಾಗಿದೆ ಎಂದು ಅವರು ಆರೋಪಿಸಿದ್ದಾರೆ.

ಸ್ಥಳೀಯ ವ್ಯಕ್ತಿ ಸುರೇಶ್ ಸಹಾಯದಿಂದ ನಾಲ್ವರು ರೆಸಾರ್ಟ್‌ಗೆ ಬಂದಿದ್ದರು. ಶಾಸಕರನ್ನು ಆನ್‌ಲೈನ್‌ನಲ್ಲಿ ಸಂಪರ್ಕಿಸಿ, ಬೆಳಗ್ಗೆ ಕರೆದೊಯ್ದು,



ಒಡಿಶಾ ಕಾಂಗ್ರೆಸ್ ಶಾಸಕರ ಜೊತೆ ಡಿಸಿಎಂ ಡಿ.ಕೆ.ಶಿವಕುಮಾರ್ ಶನಿವಾರ ಸಮಾಲೋಚನೆ ನಡೆಸಿದರು

ಪ್ರತಿ ಮತಕ್ಕೆ 5 ಕೋಟಿ ನೀಡುವುದಾಗಿ ಆಮಿಷವೊಡ್ಡಿದ್ದಾಗಿ ನಮ್ಮ ಶಾಸಕರು ತಿಳಿಸಿದ್ದಾರೆ. ಆದರೆ ನಾವು ಕುದುರೆ ವ್ಯಾಪಾರಕ್ಕೆ ಬೆಂಬಲ ನೀಡುವುದಿಲ್ಲ ಎಂದು ನಮ್ಮ ಶಾಸಕರು ಹೇಳಿದ್ದಾಗಿ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಆ ವ್ಯಕ್ತಿಗಳ ಬಳಿಯಿದ್ದ ಚೆಕ್ ಇನ್ನಿತರ ವಸ್ತುಗಳನ್ನು ವಶಪಡಿಸಿಕೊಳ್ಳಬೇಕು. ಈ ಸಂಬಂಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗುವುದು. ನಂತರ, ಅಗತ್ಯವಿರುವ ಯಾವುದೇ ಕಾನೂನು ಕ್ರಮ ಕೈಗೊಳ್ಳಲಾಗುವುದು. ಸಿಕ್ಕಿಬಿದ್ದವರು ಅದೊಂದೇ ಉದ್ದೇಶಕ್ಕಾಗಿ ಬಂದಿದ್ದೇವೆ ಎಂದು ಒಪ್ಪಿಕೊಂಡಿದ್ದಾರೆ. ಇತರರನ್ನು ಪತ್ತೆಹಚ್ಚುವ ಪ್ರಕ್ರಿಯೆ ನಡೆದಿದೆ. ಇದು ಕರ್ನಾಟಕದಲ್ಲಿ ಬಿಜೆಪಿ ಸ್ನೇಹಿತರು ನಡೆಸಿದ ಮಹಾನ್ ಆಪರೇಷನ್ ಕಮಲ ಎಂದು ಶಿವಕುಮಾರ್ ಆರೋಪಿಸಿದರು.

ಅವರು ಖಾಲಿ ಚೆಕ್ ನೀಡುವ ಮೂಲಕ ಕಾಂಗ್ರೆಸ್ ಶಾಸಕರೊಂದಿಗೆ ಮಾತುಕತೆ ನಡೆಸಲು ಪ್ರಯತ್ನಿಸಿದ್ದಾರೆ. ಇಬ್ಬರನ್ನೂ ಹಿಡಿದು ಬಿಡದಿ ಪೊಲೀಸರಿಗೆ ಹಸ್ತಾಂತರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಅವರನ್ನು ಬಂಧಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಈ ಸಂಬಂಧ ಛಾಯಾಚಿತ್ರ ಮತ್ತು ಖಾಲಿ ಚೆಕ್‌ಗಳನ್ನು ಸಹ ಹಂಚಿಕೊಳ್ಳಲಾಗಿದೆ.

ಒಡಿಶಾದಲ್ಲಿ ನಡೆಯಲಿರುವ ರಾಜ್ಯಸಭಾ ಚುನಾವಣೆ ಹಿನ್ನೆಲೆಯಲ್ಲಿ ಅಡ್ಡ ಮತದಾನದ ಭೀತಿ ಹೆಚ್ಚಾಗಿರುವ ನಡುವೆ ಕಾಂಗ್ರೆಸ್ ತನ್ನ ಶಾಸಕರನ್ನು ಸುರಕ್ಷಿತವಾಗಿ ಇರಿಸಲು ರೆಸಾರ್ಟ್ ರಾಜಕೀಯಕ್ಕೆ ಮುಂದಾಗಿದೆ. ಈ ಹಿನ್ನೆಲೆ ಡಿಸಿಎಂ ಡಿಕೆ ಶಿವಕುಮಾರ್ ನೇತೃತ್ವದಲ್ಲಿ ಒಡಿಶಾದ ಎಂಟು ಶಾಸಕರು ಮತ್ತು ಒಡಿಶಾ ಕಾಂಗ್ರೆಸ್ ಘಟಕದ ಕೆಲವು ಪದಾಧಿಕಾರಿಗಳು ಬೆಂಗಳೂರಿಗೆ ಕರೆಸಿಕೊಳ್ಳಲಾಗಿದೆ.

ನಕ್ಕರೆ ಅದೇ ಸ್ವರ್ಗ

ಮದುವೆಯಾಗಿ ಗಂಡನ ಮನೆಗೆ ಬರುತ್ತಿದ್ದಂತೆ ಅತ್ತೆಯ ವ್ಯಂಗ್ಯ ಶುರುವಾಗುತ್ತೆ.

ಅತ್ತೆ : ನೋಡಮ್ಮ ನಾನು ಈ ಮನೆಯ ಗೃಹ ಸಚಿವೆ. ನಿನ್ನ ಮಾವ ಹಣಕಾಸು ಸಚಿವ, ನಿನ್ನ ನಾದಿನಿ ಸಾಮಾಜಿಕ ಅಭಿವೃದ್ಧಿ ಸಚಿವೆ.

ಸೊಸೆ : ಸರಿ ಅತ್ತೆ... ಹಾಗಾದರೆ ನನ್ನ ಗಂಡ?

ಅತ್ತೆ : ನಿನ್ನ ಗಂಡ ಅಂದರೆ ನನ್ನ ಮಗ ನಾಗರಿಕ ಪೂರೈಕೆ, ಮನೆ ಅಗತ್ಯ ಪೂರೈಕೆ ಸಚಿವ. ನೀನು ಯಾವ ಖಾತೆ ನಿಭಾಯಿಸುತ್ತೀಯಾ?

ಸೊಸೆ : ವಿರೋಧ ಪಕ್ಷದ ನಾಯಕಿಯ ಸ್ಥಾನ.

ಮೈಸೂರು ಮಿತ್ರ

ಸೋಮವಾರ, ಮಾರ್ಚ್ 16, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಸಮಾಜದಲ್ಲಿ ಬದುಕಬೇಕೆಂದರೆ ಬೇಟೆಯಾಡುವ ಸಿಂಹದಂತಾದರೂ ಇರಬೇಕು ಅಥವಾ ಓಡುವ ಕುದುರೆಯಂತಾದರೂ ಇರಬೇಕು. ಇಲ್ಲದಿದ್ದರೆ ತುಳಿದು ಹಾಕುತ್ತಾರೆ.

ವೇದ ಸುಳ್ಳಾದರೂ { ಹೊಳೆಗೆ ಸುರಿದರೂ
ಗಾದೆ ಸುಳ್ಳಾಗದು { ಅಳೆದು ಸುರಿ

ನಿಮ್ಮ ಪತ್ರಗಳು

ಕೆಎಸ್ಐಸಿ ಕ್ರೀಡಾಂಗಣ: ಸಂಘಟಿತ ಹೋರಾಟಕ್ಕೆ ಸಂದ ಜಯ

ಮಾನ್ಯರೆ,

ಟಿ.ನರಸೀಪುರದ ಕೆಎಸ್ಐಸಿ ಆವರಣದ ಆರು ಎಕರೆ ಜಾಗದಲ್ಲಿ ಕ್ರೀಡಾಂಗಣ ನಿರ್ಮಿಸಲು ಹೊರಟಿದ್ದ ಜಿಲ್ಲಾಡಳಿತದ ವಿರುದ್ಧ, ಕಾರ್ಖಾನೆ ಕಾರ್ಮಿಕರು, ರೈತ ಸಂಘ, ಪರಿಸರವಾದಿಗಳು, ಮೈಸೂರು ಗ್ರಾಹಕ ಪರಿಷತ್, ಸಂಸದರು, ಶಾಸಕರು, ವಿರೋಧ ಪಕ್ಷದ ನಾಯಕರು ಹಾಗೂ ವಿವಿಧ ಸಂಘಟನೆಗಳು ಹೋರಾಟ ನಡೆಸಿದ್ದವು.

ಅಂತೂ ಕೊನೆಗೂ ಸರ್ಕಾರ ಸದರಿ ಯೋಜನೆಯನ್ನು ಕೈ ಬಿಟ್ಟಿರುವುದಾಗಿ ರೇಷ್ಮೆ ಖಾತೆ ಸಚಿವ ಕೆ ವೆಂಕಟೇಶ್ ಅವರು ವಿಧಾನಸಭೆಯಲ್ಲಿ ಹೇಳಿರುವುದು (10.3.26. 'ಮೈಸೂರು ಮಿತ್ರ')ವರದಿಯಾಗಿದೆ. ಇದು ಸ್ವಾಗತಾರ್ಹ. ಇದರಲ್ಲಿ ವಿಧಾನಪರಿಷತ್ ಸದಸ್ಯರಾದ ಯತೀಂದ್ರ ಸಿದ್ದರಾಮಯ್ಯ ನವರ ಪಾತ್ರ ಬಹಳ ಮುಖ್ಯವಾದುದು. ಏಕೆಂದರೆ ಒಂದೆರಡು ದಿನಗಳ ಹಿಂದೆ ಅವರು, ಸದರಿ ಜಾಗದಲ್ಲಿ ತಾಲೂಕು ಕ್ರೀಡಾಂಗಣ ಸೂಕ್ತವಲ್ಲ ಎಂಬ ಪ್ರತಿಭಟನಾಕಾರರ ಅಭಿಪ್ರಾಯವನ್ನು ಗಂಭೀರವಾಗಿ ಪರಿಗಣಿಸಿದ್ದು, ಅವರು ಕೊಡುತ್ತಿರುವ ತಾಂತ್ರಿಕ ಕಾರಣಗಳನ್ನು ಪರಿಶೀಲಿಸಿ ವರದಿ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಹೇಳಿಕೆ ನೀಡಿದ್ದರು. ಅದು ಯೋಜನೆ ಕೈ ಬಿಡುವ ಸೂಚನೆಯಾಗಿತ್ತು. ಅದರಂತೆ ಈಗ ಪ್ರತಿಭಟನಾಕಾರರ ಒತ್ತಡಕ್ಕೆ ಮಣಿದು ಸರ್ಕಾರ ಯೋಜನೆ ಕೈ ಬಿಟ್ಟಿದೆ. ಪತ್ರಿಕೆ, ಮಾಧ್ಯಮಗಳು ಸೇರಿದಂತೆ ಹೋರಾಟ ನಡೆಸಿದ ಎಲ್ಲರೂ ಅಭಿನಂದನಾರ್ಹರು.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ಕ್ರೀಡಾಪಟುಗಳಿಗೆ ಹೀಗಾದರೆ...

ಮಾನ್ಯರೆ,

ಮಾ.೮ರಂದು ಮಂಡ್ಯದ ಪಿಇಎಸ್ ಎಂಜಿನಿಯರಿಂಗ್ ಕಾಲೇಜು ಮೈದಾನದಲ್ಲಿ ನಡೆದ KSCA ಪ್ರಥಮ ದರ್ಜೆ ಕ್ರಿಕೆಟ್ ಪಂದ್ಯಾವಳಿಯ (FUCC vs NCC) ವೇಳೆ, ಪ್ರತಿಭಾವಂತ ಕ್ರೀಡಾಪಟು ಮಂಜುನಾಥ್ ಅವರು ತಮ್ಮ ಕಿಟ್ ಬ್ಯಾಗ್‌ನಲ್ಲಿ ಇಟ್ಟಿದ್ದ ಸುಮಾರು 1.5 ಲಕ್ಷಕ್ಕೂ ಅಧಿಕ ಮೌಲ್ಯದ 'iPhone 16 Pro Max (1TB)' ಮೊಬೈಲ್ ಫೋನ್ ಕಳುವಾಗಿರುವುದು ಅತ್ಯಂತ ಖೇದಕರ.

ಸಿಸಿಎಲ್ (CCL) ಆಟಗಾರ ಹಾಗೂ ಚಿತ್ರರಂಗದ ಗಣ್ಯರ ಒಡನಾಡಿಯಾಗಿರುವ ವ್ಯಕ್ತಿಗೇ ಇಂತಹ ಪರಿಸ್ಥಿತಿ ಬಂದಿರುವುದು ಕ್ರೀಡಾ ವಲಯದಲ್ಲಿ ಆತಂಕ ಮೂಡಿಸಿದೆ. ಮೈದಾನದ ಆವರಣದಲ್ಲಿ ಸಿಸಿಟಿವಿ ಕ್ಯಾಮರಾಗಳಿದ್ದರೂ ಅವು ಕಾರ್ಯನಿರ್ವಹಿಸದಿರುವುದು ಭದ್ರತಾ ಲೋಪಕ್ಕೆ ಸಾಕ್ಷಿಯಾಗಿದ್ದು, ಮೈಸೂರಿನ ಮಾನಸಗಂಗೋತ್ರಿ ಗ್ಲೇಡ್ಸ್ ಹಾಗೂ SJCE ಮೈದಾನಗಳಲ್ಲೂ ನಿರಂತರ ಪಂದ್ಯಗಳು ನಡೆಯುವುದರಿಂದ KSCA ಸಂಸ್ಥೆಯು ಎಲ್ಲಾ ಕ್ರೀಡಾಂಗಣಗಳಲ್ಲಿ ಸಿಸಿಟಿವಿಗಳು ಮತ್ತು ಭದ್ರತಾ ವ್ಯವಸ್ಥೆ ಸುಸ್ಥಿತಿಯಲ್ಲಿರುವಂತೆ ತುರ್ತು ಗಮನಹರಿಸಬೇಕಿದೆ. ಕ್ರೀಡಾಪಟುಗಳ ಬೆಲೆಬಾಳುವ ವಸ್ತುಗಳ ರಕ್ಷಣೆಗಾಗಿ ಕಾಲೇಜು ಆಡಳಿತ ಮಂಡಳಿಗಳು ತಕ್ಷಣವೇ ಕೆಟ್ಟಿರುವ ಕ್ಯಾಮರಾಗಳನ್ನು ದುರಸ್ತಿಗೊಳಿಸಬೇಕು ಮತ್ತು ಪೊಲೀಸ್ ಇಲಾಖೆಯು ಕಳುವಾದ ಮೊಬೈಲ್ ಅನ್ನು ಪತ್ತೆಹಚ್ಚಲು ಶೀಘ್ರ ಕ್ರಮ ಕೈಗೊಂಡು ನ್ಯಾಯ ಒದಗಿಸಬೇಕೆಂದು ಈ ಮೂಲಕ ವಿನಂತಿಸುತ್ತೇನೆ.

–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.

ಮಕ್ಕಳ ಸುರಕ್ಷತೆಗೆ ಕಠಿಣ ಕಾನೂನಿನ ಅಗತ್ಯ

ಮಾನ್ಯರೆ,

ಇತ್ತೀಚಿನ ಹೈಕೋರ್ಟ್ ತೀರ್ಪು ಮಕ್ಕಳ ಅಶ್ಲೀಲ ಚಿತ್ರಗಳನ್ನು ಮೊಬೈಲ್‌ನಲ್ಲಿ ಸಂಗ್ರಹಿಸಿಡುವುದು ಕೂಡ ಪೋಕ್ಸೊ ಕಾಯ್ದೆಯಡಿ ಗಂಭೀರ ಅಪರಾಧವೆಂದು ಎಚ್ಚರಿಸಿರುವುದು ಸ್ವಾಗತಾರ್ಹ ನಡೆ. ಅಂಕಿಅಂಶಗಳ ಪ್ರಕಾರ ಭಾರತದಲ್ಲಿ ಸೈಬರ್ ಅಪರಾಧಗಳ ಪ್ರಮಾಣದಲ್ಲಿ ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಿದ್ದು ಅದರಲ್ಲಿ ಮುಗ್ಧ ಮಕ್ಕಳ ಮೇಲಿನ ದೌರ್ಜನ್ಯದ ಡಿಜಿಟಲ್ ರೂಪಗಳು. ಶೇ. 20ಕ್ಕಿಂತಲೂ ಹೆಚ್ಚಿವೆ. ಕೇವಲ ಚಿತ್ರಗಳನ್ನು ಪ್ರಸಾರ ಮಾಡುವುದಷ್ಟೇ ಅಲ್ಲ ಅವುಗಳನ್ನು ಹೊಂದುವ ವಿಕೃತ ಮನಸ್ಥಿತಿಯು ಸಮಾಜದ ನೈತಿಕ ಅಧಃಪತನವನ್ನು ತೋರಿಸುತ್ತದೆ. ಐಟಿ ಕಾಯ್ದೆ 2000ರ ಸೆಕ್ಷನ್ 67(ಬಿ) ಅಡಿಯಲ್ಲಿ ಇಂತಹ ಕೃತ್ಯಗಳಿಗೆ ಕಠಿಣ ಶಿಕ್ಷೆಯಿದೆ ಎಂಬ ಅರಿವು ಸಾಮಾನ್ಯ ಜನರಲ್ಲಿ ಮೂಡಬೇಕಿದೆ.

ಕೇವಲ ತಾಂತ್ರಿಕ ಕಾನೂನುಗಳಿಗಿಂತ ಹೆಚ್ಚಾಗಿ ಸಮಾಜದಲ್ಲಿ ಡಿಜಿಟಲ್ ಪಾಲನೆ ಮತ್ತು ಶಾಲೆಗಳಲ್ಲಿ ಲೈಂಗಿಕ ಶಿಕ್ಷಣದ ಮೂಲಕ ಜಾಗೃತಿ ಮೂಡಿಸುವುದು ಇಂದಿನ ತುರ್ತು ಅಗತ್ಯವಾಗಿದೆ. ತಂತ್ರಜ್ಞಾನವು ಮಕ್ಕಳನ್ನು ಶೋಷಿಸುವ ಸಾಧನವಾಗಬಾರದು ಬದಲಿಗೆ ಅವರ ರಕ್ಷಣಾ ಕವಚವಾಗಬೇಕು. ಸರ್ಕಾರವು ಇಂತಹ ಪ್ರಕರಣಗಳ ತನಿಖೆಗೆ ವಿಶೇಷ ಸೈಬರ್ ತಂಡಗಳನ್ನು ರಚಿಸಿ ಅಪರಾಧಿಗಳಿಗೆ ಶೀಘ್ರಗತಿಯಲ್ಲಿ ಶಿಕ್ಷೆಯಾಗುವಂತೆ ನೋಡಿಕೊಳ್ಳಬೇಕು.

–ಡಾ.ವಿಜಯಕುಮಾರ ಎಚ್.ಕೆ.

ಮನೆ ಮುಂದೆ ನೀರಿಡಿ...

ಮಾನ್ಯರೆ,

ಬೇಸಿಗೆಗಾಲ ಆರಂಭವಾಗುವುದೆ ತಡ ಪ್ರತಿಯೊಬ್ಬರಿಗೂ ಬಾಯಾರಿಕೆ ದ್ವಿಗುಣವಾಗುವುದಲ್ಲದೆ, ಅತಿ ಹೆಚ್ಚು ನೀರು ಕುಡಿಯುವ ವಾತಾವರಣ ಸೃಷ್ಟಿಸುತ್ತದೆ. ಬಿಸಿಲಿನ ಬೇಗೆ ಹೆಚ್ಚಾಗುವುದರಿಂದ ಎಂತವರಿಗೂ ಇಂತಹ ಸಮಯದಲ್ಲಿ ವಿವಿಧ ರೀತಿಯ ತಂಪು ಪಾನೀಯ ಕುಡಿಯಬೇಕು ಎಂಬ ಹಾಹಾಕಾರ ಮನೋಭಾವ ಹೊಂದಿರುತ್ತಾರೆ, ಮನುಷ್ಯರಾದವರು ನಮಗೆ ಹೀಗೆ ಅನಿಸಬೇಕಾದರೆ, ಸಮಾಜದಲ್ಲಿ ನಮ್ಮಂತೆಯೇ ಜೀವಿಸುವ ಪ್ರತಿಯೊಂದು ಪ್ರಾಣಿ ಪಕ್ಷಿಗಳ ಪಾಡು ಯಾವ ರೀತಿ ಇರಬಹುದೆಂದು ಊಹಿಸಲು ಸಾಧ್ಯವೇ?

ಇಂತಹ ಬಿಸಿಲಿಗೆ ಪ್ರಾಣಿ ಪಕ್ಷಿಗಳು ಸಹ ತಮ್ಮ ದಾಹವನ್ನು ನೀಗಿಸಿಕೊಳ್ಳಲು, ನೀರಿಗಾಗಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಂಚರಿಸುತ್ತವೆ, ಮಳೆ ಇಲ್ಲದ ಕಾರಣ ಈ ಬಿಸಿಲಿನ ಬೇಗೆಗೆ ಕೆರೆಕಟ್ಟೆಗಳಲ್ಲಿನ ನೀರು ಸಹ ಬತ್ತಿ ಹೋಗಿರುತ್ತದೆ. ಹೀಗೆ ನೀರಿಲ್ಲದೆ ಪ್ರಾಣಿ, ಪಕ್ಷಿಗಳು ಪರದಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ ಕನಿಷ್ಠಪಕ್ಷ ನಮ್ಮ ಸುತ್ತಮುತ್ತ ವಿವಿಧ ರೀತಿಯ ಪಕ್ಷಿಗಳು ಹಾರಾಡುತ್ತಿದ್ದರೆ, ಅವುಗಳನ್ನು ಗಮನಿಸಿ ಮನೆ ಮುಂದೆ, ಅಥವಾ ಮನೆಯ ಮೇಲೆ ಒಂದು ಚೆಂಬು ನೀರು ಇಟ್ಟರೆ ಅವುಗಳ ದಾಹವನ್ನು ನೀಗಿಸುವಂತಾಗುತ್ತದೆ. ಜೊತೆಗೆ ಬೇಸಿಗೆಕಾಲ ಮುಗಿಯುವವರೆಗೂ ದಿನನಿತ್ಯ ಮನೆ ಮುಂದೆ ನೀರು ಇಡುವ ಮುಖಾಂತರ ಮಾನವೀಯ ಮೌಲ್ಯವನ್ನು ನಾವು ತೋರಬೇಕಾಗಿದೆ. **– ಸಾಯಿ ಸಂದೇಶ್ ಬಿ.ಎಸ್, ಮೈಸೂರು.**

ಅರಿವು



ಜಿ. ಎಲ್. ತ್ರಿಪುರಾಂತಕ

ಮೊ: 96866–77284

ನೆನಪುಗಳು ಬುತ್ತಿಯಾಗಬೇಕು; ಬತ್ತಿಯಾಗಬಾರದು...!

ಮನುಷ್ಯ ಸದಾ ವರ್ತಮಾನದಲ್ಲಿಯೇ ಬದುಕುವುದಿಲ್ಲ. ದಿನದ ವೇಳೆಯಲ್ಲಿ ಕೆಲ ಅವಧಿ ಭೂತಕಾಲದಲ್ಲಿಯೂ, ಮತ್ತೆ ಕೆಲವು ಹೊತ್ತು ಭವಿಷ್ಯತ್ ಕಾಲದಲ್ಲಿಯೂ ಬದುಕುತ್ತಾನೆ. ಭವಿಷ್ಯತ್ ಕಾಲದಲ್ಲಿ ಭರವಸೆಯಿಂದ ಆನಂದದ ಕ್ಷಣಗಳನ್ನು ಊಹಿಸಿಕೊಳ್ಳುವಂತೆ ಆತಂಕದಿಂದ ಕಷ್ಟದ ಕ್ಷಣಗಳನ್ನು ಊಹಿಸಿಕೊಳ್ಳುವುದು ಸಹಜ. ಆದರೂ ಅವುಗಳಿಗೆ ಮೂರ್ತ ರೂಪವಿರುವುದಿಲ್ಲ. ಆದರೆ ಭೂತಕಾಲದ ಕ್ಷಣಗಳು ಹಾಗಿರುವುದಿಲ್ಲ, ಅವು ಮೂರ್ತ ರೂಪ ತಳೆದಿರುತ್ತವೆ. ಕೆಲವರು ವಾಸ್ತವಕ್ಕಿಂತ ಗತಿಸಿದ ವೈಭವವನ್ನೇ ನೆನೆದು ಸಂತೋಷಪಟ್ಟರೆ, ಅನೇಕರು ದುಃಖದ ಕ್ಷಣಗಳನ್ನು ನೆನೆದು ಕಣ್ಣೀರು ಹಾಕುತ್ತಾರೆ. ಈ ವಿಷಯದಲ್ಲಿ ಮನುಷ್ಯನಿಗೆ ಮರೆವು ಎಂಬುದು ಒಂದು ವರ ಎನ್ನಬಹುದು. ಗತಿಸಿದ್ದು ಮರೆತಿಲ್ಲವಾದರೆ ಎಲ್ಲವೂ ನೆನಪಿಗೆ ಬಂದು ಕಲಸು ಮೇಲೋಗರವಾಗಿ ಬದುಕು ಕ್ಷಣಕ್ಷಣವೂ ತಲ್ಲಣವಾಗಿಬಿಡುತ್ತದೆ.

ಸವಿನೆನಪುಗಳು ಬೇಕು ಸವಿಯಲು ಬದುಕು, ಕಹಿನೆನಪು ಸಾಕೊಂದು ಮಾಸಲಿ ಬದುಕು, ಬೆಂಬಿಡದ ಆ ನೆನಪು ಮರುಕಳಿಸಿ ದಿನವೆಲ್ಲ ಕಾಡುತಿದೆ ಮನವ ಎಂಬ ಚಿತ್ರಗೀತೆಯನ್ನು ರಾಮದಾಸ ನಾಯ್ಕ ಅವರು ರಚಿಸಿದ್ದು, ಅಪರಿಚಿತ ಸಿನಿಮಾದಲ್ಲಿ ಇದನ್ನು ಕೇಳಬಹುದು. ಈ ಚಿತ್ರದ ಸನ್ನಿವೇಶವನ್ನು ಹೊರತುಪಡಿಸಿ ಮನುಷ್ಯನ ಬದುಕಿಗೆ ಅನ್ವಯಿಸಿಕೊಂಡರೆ ನಿಜಕ್ಕೂ ಒಂದು ವಿಶೇಷ ಅರ್ಥವನ್ನೇ ಕಲ್ಪಿಸುತ್ತದೆ. ನೆನಪುಗಳು ಮನುಷ್ಯನಿಗೆ ಬುತ್ತಿಯಂತೆ ಇರಬೇಕು, ಬದುಕಿಗೆ ಒಂದು ಚೈತನ್ಯ ನೀಡುವ ಸ್ಫೂರ್ತಿಯ ಸೆಲೆಯಂತೆ ಇರಬೇಕೇ ವಿನಃ ವರ್ತಮಾನದ ಸಂತೋಷವನ್ನು ಹೊತ್ತಿ ಉರಿಸುವ ಬತ್ತಿಯಾಗಬಾರದು. ಪ್ರತಿಯೊಂದು ಪ್ರಾಣಿ ಪಕ್ಷಿಯ ಬದುಕಿನಲ್ಲಿ ಕಷ್ಟ–ಸುಖ, ಸಾವು–ನೋವುಗಳು ಇರುವಂತೆ ಮನುಷ್ಯನ ಬದುಕಿನಲ್ಲಿಯೂ ಇರುತ್ತವೆ. ಅವುಗಳನ್ನು ಸಮಚಿತ್ತದಿಂದ ಸ್ವೀಕರಿಸುವುದು ಜಾಣತನ. ಮನೆಯಲ್ಲಿ ಹಿಂದೆ ಆಗಿರುವ ಒಂದು ನೋವು, ಸಾವಿಗೋಸ್ಕರ ನಿತ್ಯವೂ ನೆನೆದು ಇರುವವರು ದಿನವೂ ಸಾಯುವಂತೆ ಮಾಡಬಾರದು. ಹಾಗಂದ ಮಾತ್ರಕ್ಕೆ ನಿಧನ ಹೊಂದಿ ಕಣ್ಮರೆಯಾದವರನ್ನು ಮರತೇ ಬಿಡಬೇಕು ಅಂತೇನಿಲ್ಲ. ಸದಾ ನೆನೆಸಿಕೊಂಡು ಇರುವ ಬದುಕನ್ನು, ಬರುವ ಬದುಕನ್ನು ನರಕ ಮಾಡಿಕೊಳ್ಳಬಾರದು.

ಕೆಲವರಿಗೆ ಒಂದು ಮಾನಸಿಕ ಕಾಯಿಲೆ ಇರುತ್ತದೆ. ಮನೆಯಲ್ಲಿ ಒಂದು ಸಮಾರಂಭ ನಡೆಯುತ್ತಿರಬೇಕಾದರೆ, ಹಬ್ಬಗಳ ದಿನದಂದು ಎಲ್ಲರೂ ಸಂತೋಷದಿಂದ ನಕ್ಕುನಲಿಯುತ್ತಿರಬೇಕಾದರೆ ಎಷ್ಟೋ ವರ್ಷಗಳ ಹಿಂದೆ ನಿಧನ ಹೊಂದಿದ ಹಿರಿಯರನ್ನು ನೆನೆದು, ಕಣ್ಣೀರು ಹಾಕಿ, ಇಡೀ ಸಂಭ್ರಮವನ್ನೇ ನಾಶಪಡಿಸಿಬಿಡುತ್ತಾರೆ. ಕೆಲವರಿಗೆ ನಕ್ಕು ಖುಷಿಪಟ್ಟು ಹಗುರಾದರೆ, ಮತ್ತೆ ಕೆಲವರು ಅಕಾಲದಲ್ಲಿ ಅತ್ತು ಒಂದು ರೀತಿಯ ವಿಕೃತಾನಂದವನ್ನು ಪಡೆಯತ್ತಾರೆ. ತಾವು ರೋಧಿಸುವುದಲ್ಲದೆ, ತವೊಟ್ಟಿಗೆ ಇರುವವರು ರೋಧಿಸಲಿ ಎಂಬುದು ಅವರ ಇರಾದೆಯಾಗಿರುತ್ತದೆ. ಒಬ್ಬರ ಮುಖದಲ್ಲಿ ನಗು ಮೂಡಿಸುವ ಮನೋಭಾವ ಇಲ್ಲದಿದ್ದರೂ ಒಬ್ಬರಿಗೆ ಅಳು ತರಿಸುವ ವಿಶೇಷ ಶಕ್ತಿ ಅವರಿಗೆ ಇರುತ್ತದೆ. ನಗುವು ಸಹಜದ ಧರ್ಮ, ನಗಿಸುವುದು ಪರಧರ್ಮ ಎಂಬುದು ಡಿವಿಜಿಯವರ ಕಗ್ಗದ ಮಾತು, ಆದರೆ ಕೆಲವರಿಗೆ ಅಳುವು ಸಹಜದ ಧರ್ಮ, ಅಳಿಸುವುದು ಪರಧರ್ಮ ಎನ್ನುವಂತೆ ಪಾಲಿಸುತ್ತಿರುತ್ತಾರೆ. ನಕ್ಕರೆ ಏನೋ ಖುಷಿ ಎನ್ನುವವರ ಮುಂದೆ ಅತ್ತರೇ ಏನೋ ಖುಷಿ ಎಂದು ಸಾಬೀತುಪಡಿಸುತ್ತಾರೆ.

ಮನುಷ್ಯ ಭಾವಜೀವಿ, ನಿಜ. ಅಂದ ಮಾತ್ರಕ್ಕೆ ಎಲ್ಲಾ ಸಮಯದಲ್ಲೂ ಭಾವಾತಿರೇಕವನ್ನು ಪ್ರದರ್ಶಿಸುವ ಅಗತ್ಯವಿಲ್ಲ. ಕೆಲವೊಮ್ಮೆ ಪ್ರಾಕ್ಟಿಕಲ್ ಆಗಿ ವರ್ತಿಸುವ ಅಗತ್ಯವಿರುತ್ತದೆ. ಬದಲಾವಣೆ ಜಗದ ನಿಯಮ ಎಂಬ ಮಾತು ಸರ್ವವೇದ್ಯವಾಗಿದೆ. ಬದಲಾವಣೆಗೆ ಮನುಷ್ಯ ಒಗ್ಗಿಕೊಳ್ಳಲೇಬೇಕು. ಅಪ್ಪ ಹಾಕಿದ ಆಲದ ಮರಕ್ಕೆ ನೇತು ಹಾಕಿಕೊಳ್ಳುವ ಅಗತ್ಯವಿಲ್ಲ. ಎಷ್ಟೋ ಬಾರಿ ಭೂತಕಾಲದ ನೆನಪುಗಳು ಮನುಷ್ಯನಿಗೆ ಒಂದು ಪ್ರೇರಕ ಶಕ್ತಿಯಾಗಿರದೆ, ಪ್ರೇತ ಶಕ್ತಿಯಾಗಿ ಅವನ ಬದುಕನ್ನು ಹೈರಾಣ ಮಾಡಿಬಿಡುತ್ತದೆ. ಎಷ್ಟೋ ಜನರಿಗೆ ಸಿಹಿ ಗಳಿಗೆಗಳನ್ನು ಸ್ಮರಿಸಿ ಖುಷಿ ಪಡುವ ಜಾಯಮಾನವೇ ಇರುವುದಿಲ್ಲ. ಅವರಿಗೆ ನೆನಪು ಎಂದರೆ ಅದು ಕಹಿಯಾಗಿರಬೇಕು ಎಂಬ ತಪ್ಪು ಕಲ್ಪನೆ ಇದೆ.

ಪ್ರಪಂಚದ ಅಪೂರ್ವ ಹಾಸ್ಯ ಕಲಾವಿದರಾದ ಚಾರ್ಲಿ ಚಾಪ್ಲಿನ್ ಅವರು ಹೀಗೆ ಹೇಳುತ್ತಾರೆ, ಒಂದೇ ಹಾಸ್ಯ ಪ್ರಸಂಗಕ್ಕೆ ನೀವು ಮೂರು ಬಾರಿ ನಗಲೂ ಆಗದಿದ್ದ ಮೇಲೆ ಒಂದು ನೋವಿಗೆ ಯಾಕೆ ಹಲವು ಬಾರಿ ಅಳುತ್ತೀರಿ ಬದುಕಿನಲ್ಲಿ ಯಾವುದೂ ಶಾಶ್ವತವಲ್ಲ, ನಮ್ಮ ನೋವುಗಳು ಸಹ. ನಿಮ್ಮ ಬದುಕಿನಲ್ಲಿ ವ್ಯರ್ಥವಾದ ದಿನ ಯಾವುದೆಂದರೆ ಅದು ನೀವು ನಗದೇ ಇರುವ ದಿನ. ಎಂತಹ ಅನುಭವದ ನುಡಿಗಳಲ್ಲವೇ



> “
> **ಅನೇಕ ಸ್ನೇಹ ಸಂಬಂಧಗಳಲ್ಲಿ ನೂರಾರು ಸಿಹಿ ಘಳಿಗೆಗಳು ಇರುತ್ತವೆ. ಆದರೆ ಯಾವುದೋ ಒಂದು ಸಂದರ್ಭದಲ್ಲಿ ಆದ ಕಹಿ ಘಟನೆಗೋಸ್ಕರ ಒಬ್ಬರ ಮುಖ ಒಬ್ಬರು ನೋಡದೇ ಇರುವಷ್ಟು ವೈರತ್ವ ಮನೆ ಮಾಡುತ್ತದೆ. ಅವರು ಎದುರಾದಾಗ ಸಿಹಿ ಘಳಿಗೆಗಳನ್ನು ನೆನೆಯದೇ ಒಂದೇ ಒಂದು ಕಹಿ ಘಳಿಗೆಯನ್ನು ನೆನೆದು ಹಗೆತನವನ್ನು ಇನ್ನೂ ವೃದ್ಧಿಸಿಕೊಳ್ಳುವ ಮನೋಭಾವ ಇರಿಸಿಕೊಂಡಿರುತ್ತಾರೆ. ಸಿಹಿ ಸಂದರ್ಭಗಳನ್ನು ಮರೆಯುವಷ್ಟು ಸುಲಭವಾಗಿಯೇ ಕಹಿ ಸಂದರ್ಭಗಳನ್ನು ಮರೆಯಬಹುದಲ್ಲವೇ? ದಾಂಪತ್ಯದಲ್ಲೂ ಅಷ್ಟೇ, ಪತಿ ಪತ್ನಿ ನಡುವೆ ಎಷ್ಟೋ ವರ್ಷಗಳ ಅನ್ಯೋನ್ಯ ದಾಂಪತ್ಯ ಏರ್ಪಾಡಾಗಿದ್ದರೂ, ಒಂದು ಕಹಿ ಘಟನೆ ಇಡೀ ದಾಂಪತ್ಯಕ್ಕೆ ಹುಳಿ ಹಿಂಡಿದಂತೆ ಆಗಿರುತ್ತದೆ. ಒಂದೇ ಒಂದು ತಪ್ಪು ಇಡೀ ಸಂಸಾರವನ್ನೇ ಆಪೋಶನ ತೆಗೆದುಕೊಂಡಿಬಿಡುವ ಸಂದರ್ಭ ಇರುತ್ತದೆ. ಹಾಗಾಗಿ ಅನ್ಯೋನ್ಯತೆ ಏರ್ಪಾಡಾಗಬೇಕಾದರೆ ಸಿಹಿ ಘಳಿಗೆಗಳ ಸ್ಮರಣೆ ಮುಖ್ಯವಾಗುತ್ತದೆ.**

ಇವು ಸಂತೋಷದ ಕ್ಷಣಗಳಿಗೆ ಆಯುಷ್ಯ ಕಡಿಮೆ, ದುಃಖದ ಗಳಿಗೆಗಳಿಗೆ ಆಯುಷ್ಯ ಜಾಸ್ತಿ. ನಲಿವು ಎಂಬುದು ಮನುಷ್ಯನ ಉತ್ಸಾಹವನ್ನು ವೃದ್ಧಿಸಿದರೂ ಅವುಗಳನ್ನು ಸ್ಮರಿಸುವ ಗೋಜಿಗೆ ಬಹುಪಾಲು ಜನ ಹೋಗುವುದಿಲ್ಲ. ಸ್ನೇಹಿತರ ವಲಯದಲ್ಲಿ ಇದ್ದಾಗ ಒಂದಷ್ಟು ಹಾಸ್ಯ ಪ್ರಸಂಗಗಳನ್ನು ನೆನೆದು ಸಂಭ್ರಮಿಸಬಹುದು. ಆದರೆ ಕುಟುಂಬ ವ್ಯವಸ್ಥೆಯಲ್ಲಿ ಹಾಸ್ಯವನ್ನು ನೆನೆದು ನಗುವುದು ಸಹ ಅಪರಾಧ ಎಂದು ಬಿಂಬಿಸುವ ಹಿರಿಯ ಜೀವಿ ಒಂದಿರುತ್ತದೆ. ಹಿರಿಯರು ಎಂಬ ಕಾರಣಕ್ಕೆ ಅವರ ಮಾತಿಗೆ ಬೆಲೆ ಕೊಡಬೇಕಾಗಿರುತ್ತದೆ. ಬೆಲೆ ಕೊಡುತ್ತಾರೆ ಎಂಬ ಕಾರಣಕ್ಕೆ ಅವರು ಸಂತೋಷದ ಕ್ಷಣಗಳನ್ನು ಕೊಂದು, ದುಃಖದ ಗಳಿಗೆಯನ್ನು ಮರುಸ್ಥಾಪಿಸಿ ಏನೋ ಒಂದು ರೀತಿಯ ಖುಷಿ ಪಡುತ್ತಾರೆ.

ಅಟ್ಟದ ಮೇಲೆ ಯಾವುದೋ ಒಂದು ವಸ್ತುವನ್ನು ಹುಡುಕುವಾಗ ಮತ್ತಾವುದೋ ವಸ್ತು ಕೈಗೆ ಸಿಗುತ್ತದೆ. ಹಾಗೆಯೇ ನೆನಪಿನ ಕಣಜದಲ್ಲಿ ಯಾವುದೋ ಒಂದು ಸಂಭ್ರಮದ ದಿನವನ್ನು ಹೆಕ್ಕಿ ತೆಗೆಯುವಾಗ ದುಃಖ ದಿನವೂ ನೆನಪಿಗೆ ಬರಬಹುದು. ಆದರೆ ಅದು ಕೈಗೆ ಸಿಕ್ಕಿತು ಎಂಬ ಕಾರಣಕ್ಕೆ ನಾವು ಹುಡುಕುತ್ತಿದ್ದ ವಸ್ತುವನ್ನು ಹುಡುಕದೇ ಬಿಡಬಾರದು. ಅಂದರೆ ಹೆಕ್ಕಿ ತೆಗೆದರೆ ಸ್ಮೃತಿಪಟಲದಲ್ಲಿ ಸಾವಿರಾರು ಖುಷಿಯ ಗಳಿಗೆಗಳು ನೆನಪಿಗೆ ಬರುತ್ತದೆ. ಅಂತಹ ಖುಷಿಯ ಗಳಿಗೆಗಳನ್ನು ಸ್ಮರಿಸಿ, ಹಂಚಿ ಮತ್ತಷ್ಟು ಖುಷಿ ಪಡಬೇಕು. ಯಾವುದೋ ಒಂದು ಕಹಿ ಘಟನೆ ನೆನಪಿಗೆ ಬಂದರೆ ಅದನ್ನು ಮಾತ್ರ ನುಂಗುವ ಹಾಗೆ ಒಬ್ಬರೇ ನುಂಗುವುದು ಕ್ಷೇಮಕರ. ಒಬ್ಬರನ್ನು ಸಂತೋಷ ಪಡಿಸುವ ಮನೋಭಾವ ಇರಬೇಕೆ ವಿನಃ, ಒಬ್ಬರಿಗೆ ದುಃಖ ತರಿಸುವ ಕೆಲಸ ಮಾಡಬಾರದು.

ಎಲ್ಲರ ಮನೆಯ ದೋಸೆನೂ ತೂತು ಎಂಬ ಗಾದೆ ಮಾತಿನಂತೆ ಎಲ್ಲರ ಮನೆಯಲ್ಲಿಯೂ ಒಂದಿಲ್ಲೊಂದು ಕಹಿಘಟನೆ ಘಟಿಸುತ್ತಲೇ ಇರುತ್ತದೆ. ಅದು ಪ್ರಪಂಚದ ಎಲ್ಲರ ಮನೆಯಲ್ಲಿಯೂ ಇರುತ್ತದೆ ಎಂದು ಭಾವಿಸಿದರೆ ಅದು ಜಾಣತನ. ನಮಗೆ ಮಾತ್ರ ಇಷ್ಟೊಂದು ಘೋರ ಅನ್ಯಾಯವಾಗಿ ನೋವಾಗಿದೆ ಎಂದು ಭಾವಿಸಿದರೆ ವಿನಾಕಾರಣ ನೋವು ತಿನ್ನಬೇಕಾಗುತ್ತದೆ. ಭಗವಂತ ಹಣ್ಣು ತಿನ್ನುವ ಅವಕಾಶ ಕೊಟ್ಟಾಗ, ಹಣ್ಣನ್ನು ತಿಂದು ಸಂಭ್ರಮಿಸಬೇಕೆ ವಿನಃ, ಹಣ್ಣಿನ ಸಿಪ್ಪೆಯನ್ನು ತಿಂದು ರೋಧಿಸಬಾರದು. ಹಳೆಯದನ್ನು ನೆನೆದು ದುಃಖ ಪಡಲು ಹತ್ತು ಕಾರಣಗಳಿದ್ದರೆ, ಖುಷಿಪಡಲು ನೂರಾರು ಕಾರಣಗಳಿರುತ್ತವೆ. ಅದನ್ನು ಅರಿತು ನಡೆಯುವುದು ಒಳ್ಳೆಯದು.

ಅನೇಕ ಸ್ನೇಹ ಸಂಬಂಧಗಳಲ್ಲಿ ನೂರಾರು ಸಿಹಿ ಘಳಿಗೆಗಳಿರುತ್ತವೆ. ಆದರೆ ಯಾವುದೋ ಒಂದು ಸಂದರ್ಭದಲ್ಲಿ ಆದ ಕಹಿ ಘಟನೆಗೋಸ್ಕರ ಒಬ್ಬರ ಮುಖ ಒಬ್ಬರು ನೋಡದೇ ಇರುವಷ್ಟು ವೈರತ್ವ ಮನೆ ಮಾಡುತ್ತದೆ. ಅವರು ಎದುರಾದಾಗ ಸಿಹಿ ಘಳಿಗೆಗಳನ್ನು ನೆನೆಯದೇ ಒಂದೇ ಒಂದು ಕಹಿ ಘಳಿಗೆಯನ್ನು ನೆನೆದು ಹಗೆತನವನ್ನು ಇನ್ನೂ ವೃದ್ಧಿಸಿಕೊಳ್ಳುವ ಮನೋಭಾವ ಇರಿಸಿಕೊಂಡಿರುತ್ತಾರೆ. ಸಿಹಿ ಸಂದರ್ಭ ಮರೆಯುವಷ್ಟು ಸುಲಭವಾಗಿಯೇ ಕಹಿ ಸಂದರ್ಭ ಮರೆಯಬಹುದಲ್ಲವೇ? ದಾಂಪತ್ಯದಲ್ಲೂ ಅಷ್ಟೇ, ಪತಿ ಪತ್ನಿ ನಡುವೆ ಎಷ್ಟೋ ವರ್ಷಗಳ ಅನ್ಯೋನ್ಯ ದಾಂಪತ್ಯ ಏರ್ಪಾಡಾಗಿದ್ದರೂ, ಒಂದು ಕಹಿ ಘಟನೆ ಇಡೀ ದಾಂಪತ್ಯಕ್ಕೆ ಹುಳಿ ಹಿಂಡಿದಂತೆ ಆಗಿರುತ್ತದೆ. ಒಂದೇ ಒಂದು ತಪ್ಪು ಇಡೀ ಸಂಸಾರವನ್ನೇ ಆಪೋಶನ ತೆಗೆದುಕೊಂಡಿಬಿಡುವ ಸಂದರ್ಭ ಇರುತ್ತದೆ. ಹಾಗಾಗಿ ಅನ್ಯೋನ್ಯತೆ ಏರ್ಪಾಡಾಗಬೇಕಾದರೆ ಸಿಹಿ ಘಳಿಗೆಗಳ ಸ್ಮರಣೆ ಮುಖ್ಯವಾಗುತ್ತದೆ.

ಕೆಲವರ ಬದುಕಿನಲ್ಲಿ ಅಷ್ಟೇನು ಸುಖ ಸಂತೋಷ ಇರುವುದಿಲ್ಲ. ಅದು ಸ್ವಯಂಕೃತದಿಂದಲೇ ಆಗಿರುತ್ತದೆ. ಅಂತಹ ಜನರಿಗೆ ಇತರರು ಸ್ನೇಹ ಸೌಹಾರ್ದತೆಯಿಂದ ಇರುವುದನ್ನು ನೋಡಿ ಸಹಿಸಲು ಆಗುತ್ತಿರುವುದಿಲ್ಲ. ಅವರು ಹಿಂದಿನ ಕೆಲವು ಕೆಟ್ಟ ಸನ್ನಿವೇಶಗಳನ್ನು ಅನಾವಶ್ಯಕವಾಗಿ ನೆನಪಿಸಿ ಅರ್ಥಾತ್ ಅವರಿಬ್ಬರ ನಡುವೆ ಬತ್ತಿ ಇಟ್ಟು ಅವರ ಸ್ನೇಹ ಸೌಹಾರ್ದತೆಯನ್ನು ಹಾಳುಮಾಡಿಬಿಡುತ್ತಾರೆ. ಅವರಿಗೆ ಅದರಿಂದ ಒಂದು ರೀತಿಯ ವಿಘ್ನ ಸಂತೋಷ ಉಂಟಾಗಿರುತ್ತದೆ. ಕೆಲವರು ಪರಸ್ಪರ ಪ್ರೀತಿ ವಿಶ್ವಾಸದಿಂದ ಇರುವುದನ್ನು ಸಹಿಸಿಕೊಳ್ಳಲು ಸಾಧ್ಯವಿರುವುದಿಲ್ಲ. ತಮ್ಮ ಸ್ವಾರ್ಥ ಸಾಧನೆಗೆ ಅನೇಕ ಸಂಬಂಧಗಳಲ್ಲಿ ಹುಳಿ ಹಿಂಡುತ್ತಾರೆ. ಅಂತಹ ಜನರಿಂದ ದೂರವಿದ್ದಷ್ಟು ಆರೋಗ್ಯಕರ.

ಮೈ ಆಟೋಗ್ರಾಫ್ ಚಿತ್ರದ ಒಂದು ಗೀತೆ ಹೀಗಿದೆ. ಇದನ್ನು ಆಲಿಸಿ ಅರಿತರೆ ಬದುಕಿನಲ್ಲಿ ಎಷ್ಟೋ ಬದಲಾವಣೆ ಮಾಡಿಕೊಳ್ಳಬಹುದಾದ ಅವಕಾಶವಿದೆ. ಬದಲಾವಣೆ ಮಾಡಿಕೊಳ್ಳುವ ಅವಶ್ಯಕತೆಯೂ ಇದೆ.

ಮನಸು ಎಂಬ ಕನ್ನಡಿಯು
ಒಡೆದು ಹೋಗಬಾರದು..
ಬಾಳು ಒಂದು ಗೋಳು ಅಂತಾ
ಓಡಿ ಹೋಗಬಾರದು.
ಯಾರಿಗಿಲ್ಲ ನೋವಿಲ್ಲಾ
ಯಾರಿಗಿಲ್ಲ ಸಾವಿಲ್ಲಾ
ಕಾಲಕಳೆದ ಹಾಗೆ ಎಲ್ಲಾ
ಮಾಯವಾಗುವಂತದು.
ಉಳಿಪೆಟ್ಟು ಬೀಳುವ ಕಲ್ಲೇ
ಶಿಲೆಯಾಗಿ ನಿಲ್ಲುವುದು.
ದಿನನೋವ ನುಂಗುವ ಜೀವವೇ
ನೆಲೆಯಾಗಿ ನಿಲ್ಲುವುದು.
ಯಾರಿಗಿಲ್ಲ ಅಲೆದಾಟ
ಯಾರಿಗಿಲ್ಲ ಪರದಾಟ
ನಮ್ಮ ಪ್ರತಿ ಕನಸು
ಇಲ್ಲಿ ನನಸಾಗೋ
ಒಳ್ಳೇ ಕಾಲವು ಮುಂದೆ ಇದೆ.
ಮನವೇ ಓ ಮನವೇ
ನೀ ಕುಗ್ಗದಿರು.
ಬೆಟ್ಟಾ ಬಯಲಿರಲಿ..
ನೀ ನುಗ್ಗುತಿರು..
ಅರಳುವ ಹೂವುಗಳೇ ಆಲಿಸಿರಿ..
ಬಾಳೊಂದು ಹೋರಾಟ
ಮರೆಯದಿರಿ..

ಹೂರಣ: ಕಹಿ ನೆನಪುಗಳ ಮರೆಯಬೇಕು;
ಸಿಹಿ ನೆನಪುಗಳು ಮೆರೆಯಬೇಕು!

6 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಶಾಸಕ ಹರೀಶ್‌ಗೌಡರಿಂದ ಚಾಲನೆ



ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೆ.ಹರೀಶ್‌ಗೌಡ ಗುದ್ದಲಿಪೂಜೆ ನೆರವೇರಿಸಿದರು.

ಮೈಸೂರು, ಮಾ,.15(ಎಂಕೆ)– ಮುಖ್ಯಮಂತ್ರಿ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ (ಸಿಎಂಐಡಿಪಿ) ಚಾಮರಾಜ ವಿಧಾನಸಭಾ ಕ್ಷೇತ್ರಕ್ಕೆ ಮಂಜೂರಾಗಿರುವ 50 ಕೋಟಿ ರೂ. ಅನುದಾನ ಹಾಗೂ ಮೈಸೂರು ನಗರಪಾಲಿಕೆ 24.10 ಅನುದಾನದಡಿಯಲ್ಲಿ ವಾರ್ಡ್ ನಂ.5ರ ವ್ಯಾಪ್ತಿಯ ಮಹದೇಶ್ವರ ಬಡಾವಣೆಯಲ್ಲಿ ಹಮ್ಮಿಕೊಂಡಿರುವ 6 ಕೋಟಿ ರೂ.ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೆ.ಹರೀಶ್‌ಗೌಡ ಭಾನುವಾರ ಗುದ್ದಲಿ ಪೂಜೆ ನೆರವೇರಿಸಿದರು.

ಕಿಡಿಗಣ್ಣಮ್ಮ ಬಡಾವಣೆ, ರಾಘವೇಂದ್ರ ಸ್ವಾಮಿ ಮಠ, ಮಹದೇಶ್ವರ ಚಿತ್ರಮಂದಿರದ ಅಕ್ಕಪಕ್ಕ, ವಿಜಯನಗರ ರೈಲ್ವೇ ಬಡಾವಣೆ, ಸುಭಾಷ್ ನಗರದ ಲಕ್ಷ್ಮೀದೇವಿ ದೇವಸ್ಥಾನದ ಬಳಿಯ ಅಡ್ಡರಸ್ತೆಗಳ ಕಾಮಗಾರಿ, ಚರಂಡಿ ಅಭಿವೃದ್ಧಿ, ಡಕ್ ನಿರ್ಮಾಣ ಸೇರಿದಂತೆ ವಿಜಯನಗರ ರೈಲ್ವೇ ಪಾರ್ಕ್‌ಗೆ ಗ್ರಿಲ್ ಮತ್ತು ಪೇಂಟಿಂಗ್ ಮಾಡುವ ಕಾಮಗಾರಿಗೆ ಚಾಲನೆ ನೀಡಲಾಯಿತು.

ನಗರಪಾಲಿಕೆ ಮಾಜಿ ಸದಸ್ಯ ಶಿವಮಾದು, ಇಂದಿರಾಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ದೇವರಾಜ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಡಿ.ನಾಗಭೂಷಣ್, ಕೆಪಿಸಿಸಿ ಸದಸ್ಯೆ ರತ್ನಮ್ಮ, ಹಿಂದುಳಿದ ವರ್ಗದ ನಗರಾಧ್ಯಕ್ಷ ಎನ್.ಆರ್. ನಾಗೇಶ್, ಚಾಮರಾಜ ಕ್ಷೇತ್ರದ ಯುವ ಕಾಂಗ್ರೆಸ್ ಅಧ್ಯಕ್ಷ ನಿಶಾಂತ್ ಪಟೇಲ್, ವಾರ್ಡ್ ಅಧ್ಯಕ್ಷ ಸುರೇಶ್, ಮುಖಂಡರಾದ ತನುಜಾ ಮಹೇಶ್, ಮಾಯಮ್ಮ, ರೇಖ, ಮರಿದೊಳ್ಳಯ್ಯ, ವೆಂಕಟೇಶ್, ಅರುಣ್, ಮಂಜು, ರಾಘು, ನಾಗಣ್ಣ ಮತ್ತಿತರರು ಉಪಸ್ಥಿತರಿದ್ದರು.

ಗುಡುಮಾದನಹಳ್ಳಿ ಫಲವತ್ತಾದ ಜಾಗ, ಇಲ್ಲಿ ನಿಮ್ಹಾನ್ಸ್ ಆಸ್ಪತ್ರೆ ನಿರ್ಮಾಣ ಬೇಡ

- ಬಲವಂತವಾಗಿ ಭೂಮಿ ಸ್ವಾಧೀನಕ್ಕೆ ಮುಂದಾದರೆ ಉಗ್ರ ಹೋರಾಟ: ಕರ್ನಾಟಕ ರಾಜ್ಯ ರೈತ ಸಂಘದಿಂದ ಎಚ್ಚರಿಕೆ
- ಕೆಎಸ್ಐಸಿ ಜಾಗದಲ್ಲಿ ಕ್ರೀಡಾಂಗಣದ ವಿರುದ್ಧ ನಡೆದ ಹೋರಾಟದಂತೆ ನಿಮ್ಹಾನ್ಸ್ ವಿರುದ್ಧ ಹೋರಾಟ ಮಾಡಬೇಕಾಗುತ್ತೆ

ಮೈಸೂರು,ಮಾ.15(ಜಿಎ)–ಮೈಸೂರು ತಾಲೂಕಿನ ಗುಡುಮಾದನಹಳ್ಳಿ ಫಲವತ್ತಾದ ಭೂಮಿಯಾಗಿದ್ದು, ನಿಮ್ಹಾನ್ಸ್ ಆಸ್ಪತ್ರೆ ನಿರ್ಮಾಣ ಮಾಡುವುದು ಬೇಡ. ಬೇರೆ ಕಡೆ ಆಸ್ಪತ್ರೆ ನಿರ್ಮಾಣ ಮಾಡಿ ಎಂದು ಆಗ್ರಹಿಸಿರುವ ಕರ್ನಾಟಕ ರಾಜ್ಯ ರೈತ ಸಂಘ, ರೈತರ ಜಮೀನನ್ನು ಬಲವಂತವಾಗಿ ಸ್ವಾಧೀನ ಪಡಿಸಿಕೊಳ್ಳಲು ಮುಂದಾದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಗುವುದಾಗಿ ಎಚ್ಚರಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ, ಟಿ.ನರಸೀಪುರದ ರೇಷ್ಮೆ ನೂಲು ತೆಗೆಯುವ ಕಾರ್ಖಾನೆ ಆವರಣದಲ್ಲಿ ಕ್ರೀಡಾಂಗಣ ನಿರ್ಮಿಸಬೇಕೆಂಬ ಸರ್ಕಾರದ ನಿರ್ಧಾರದ ವಿರುದ್ಧ ತೀವ್ರ ಹೋರಾಟ ನಡೆದ ಕಾರಣ ಅದನ್ನು ಕೈಬಿಡಲಾಗಿದೆ. ಆದರೆ ಈಗ ಗುಡುಮಾದನಹಳ್ಳಿಯಲ್ಲಿ ನಿಮ್ಹಾನ್ಸ್ ಘಟಕ ನಿರ್ಮಿಸಬೇಕೆಂಬ ನಿರ್ಧಾರದ ವಿರುದ್ಧವೂ ಇದೇ ರೀತಿ ಮತ್ತೊಂದು ಸಂಘರ್ಷಕ್ಕೆ ಎಡೆ ಮಾಡಿಕೊಡುವ ಲಕ್ಷಣ ಕಾಣಿಸುತ್ತಿದೆ ಎಂದರು.

ಬಂಡೀಪಾಳ್ಯ ಬಳಿಯ ಗುಡುಮಾದನಹಳ್ಳಿಯ ಸುಮಾರು 20 ಎಕರೆ ಪ್ರದೇಶದಲ್ಲಿ ನಿಮ್ಹಾನ್ಸ್ ಘಟಕ ನಿರ್ಮಿಸಿ ಮಾನಸಿಕ ಸಮಸ್ಯೆಗಳಿಗೆ ಚಿಕಿತ್ಸೆ ನೀಡಬೇಕೆಂಬುದು ಸರ್ಕಾರದ ಉದ್ದೇಶವಾಗಿದೆ. ಆದರೆ ಈ ಜಾಗ ಫಲವತ್ತಾದ ಭೂಮಿ ಆಗಿದೆ. ಜೊತೆಗೆ ಇದು ಸದಾ ನೀರು ನಿಲ್ಲುವ ಜಾಗವೂ ಆಗಿರುವ ಕಾರಣ ಇಲ್ಲಿ ನಿಮ್ಹಾನ್ಸ್ ಘಟಕ ಸ್ಥಾಪನೆ ಸರಿಯಲ್ಲ. ಈ ಮಧ್ಯೆ ಮಾ.16ರಂದು ಸೋಮವಾರ ಜಿಲ್ಲಾಡಳಿತ ಪೊಲೀಸರ ರಕ್ಷಣೆಯೊಂದಿಗೆ ಜಾಗ ವಶಕ್ಕೆ ಪಡೆಯಲು ಮುಂದಾಗಲಿರುವ ಸುಳಿವು ದೊರೆತಿದ್ದು, ಈ ಕ್ರಮಕ್ಕೆ ಮುಂದಾದಲ್ಲಿ ರೈತರು ತೀವ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಗುಡುಮಾದನಹಳ್ಳಿ ಸರ್ವೆ ನಂ. 60, 68 ಮತ್ತು ೮ರಲ್ಲಿರುವ ಜಮೀನಿನ ಪೈಕಿ 20 ಎಕರೆ ವಿಸ್ತೀರ್ಣವನ್ನು ನಿಮ್ಹಾನ್ಸ್ ಸಂಸ್ಥೆಗೆ ರಾಜ್ಯ ಸರ್ಕಾರ ನೀಡಿದೆ. ಈ ಸರ್ವೆ ನಂಬರ್‌ನಲ್ಲಿ 60–70 ವರ್ಷಗಳಿಂದಲೂ ಸುಮಾರು ೮೦ ರೈತ ಕುಟುಂಬಗಳು ವ್ಯವಸಾಯ ಮಾಡುತ್ತಿದ್ದು, ತೆಂಗು, ಅಡಿಕೆ ಬೆಳೆದಿದ್ದಾರೆ. ವರ್ಷಕ್ಕೆ 2 ಫಸಲು ಭತ್ತ ಬೆಳೆಯುತ್ತಿದ್ದಾರೆ. ಗ್ರಾಮದ ಹೈನುಗಾರಿಕೆ ಪೂರಕವಾಗಿ ಹುಲ್ಲನ್ನು ಬೆಳೆಯುತ್ತಿದ್ದಾರೆ. ರೈತರ ಸ್ವಾಧೀನದಲ್ಲಿರುವ ಈ ಜಮೀನನ್ನು ಹಿಂದು ಮುಂದು ನೋಡದೇ ಸರ್ಕಾರ ಆಸ್ಪತ್ರೆ ನಿರ್ಮಾಣ ಮಾಡಲು ನಿಮ್ಹಾನ್ಸ್‌ಗೆ ನೀಡಿರುವುದು ಸರಿಯಾದ ಕ್ರಮವಲ್ಲ ಎಂದು ಕಿಡಿಕಾರಿದರು. ದಳವಾಯಿ ಕೆರೆಯಿಂದ 6 ತಿಂಗಳು ಸತತವಾಗಿ ವ್ಯವಸಾಯಕ್ಕೆ ನೀರಿನ ಸೌಲಭ್ಯವಿದೆ. ವರುಣಾ ನಾಲೆಯ ನೀರಿನ ಸೌಲಭ್ಯವೂ ಇದ್ದು ವರ್ಷಪೂರ್ತಿ ಇಲ್ಲಿ ವ್ಯವಸಾಯ ಮಾಡಲಾಗುತ್ತಿದ್ದು, ಸುಮಾರು 400ಕ್ಕಿಂತಲೂ ಹೆಚ್ಚು ಹಸುಗಳಿದ್ದು, ಈ ಗ್ರಾಮದ ರೈತ ಕುಟುಂಬದ ಮೂಲಧಾರ ಹೈನುಗಾರಿಕೆ. ರೈತ ಕುಟುಂಬಗಳಿಗೆ ಯಾವುದೇ ಮಾಹಿತಿ ನೀಡದೆ ಏಕಾಏಕಿ ನಿಮ್ಹಾನ್ಸ್ ಸಂಸ್ಥೆಗೆ ಜಮೀನನ್ನು ವರ್ಗಾವಣೆ ಮಾಡಿರುವುದು ರೈತ ವಿರೋಧಿಯಾಗಿದೆ. ಜಿಲ್ಲಾಡಳಿತ ರೈತರ ಸ್ವಾಧೀನವನ್ನು ತಪ್ಪಿಸಲು ಮುಂದಾದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಅನಿವಾರ್ಯವಾಗುವುದೆಂದು ತಿಳಿಸಿದರು.



ನಾಗೇಂದ್ರ

ಮೈಸೂರು ಜಿಲ್ಲೆಯಲ್ಲಿ ಬೆಳೆಯುವ ವರ್ಜಿನಿಯಾ ತಂಬಾಕು ಉತ್ಕೃಷ್ಟವಾಗಿದ್ದು, ಬೆಲೆಯಲ್ಲಿ ತೀವ್ರ ಕುಸಿತದಿಂದಾಗಿ ಬೆಳೆಗಾರರು ತುಂಬಾ ಸಂಕಷ್ಟಕ್ಕೀಡಾಗಿದ್ದಾರೆ. ಬೆಲೆ ದೊರಕಿಸಲು ಬೀದಿಗಿಳಿದು ಹೋರಾಟ ಮಾಡುತ್ತಿದ್ದಾರೆ. ಕೇಂದ್ರ ಮತ್ತು ರಾಜ್ಯದ ಮಂತ್ರಿಗಳನ್ನು ಸಂಸತ್ ಸದಸ್ಯರನ್ನು ತಮ್ಮ ರಕ್ಷಣೆಗೆ ಬರುವಂತೆ ಪರಿ–ಪರಿಯಾಗಿ ಬೇಡಿಕೊಳ್ಳುತ್ತಿದ್ದಾರೆ. ಈ ಸಂಬಂಧ ಸಭೆಗಳು ನಡೆದಿವೆಯೇ ಹೊರತು ಕೇಂದ್ರ ಸರ್ಕಾರವಾಗಲೀ, ರಾಜ್ಯ ಸರ್ಕಾರವಾಗಲೀ ರೈತರ ನೆರವಿಗೆ ಬಂದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿ, ಐಟಿಸಿ ಕಂಪನಿ ಏಕಸ್ವಾಮ್ಯತೆ ಮುಂದುವರಿಸಿದಲ್ಲಿ ಗೋಬ್ಯಾಕ್ ಐಟಿಸಿ ಚಳವಳಿ ಹಮ್ಮಿಕೊಳ್ಳಬೇಕಾಗುತ್ತದ ಎಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಮಂಡಕಳ್ಳಿ ಮಹೇಶ್, ಹೊಸಕೋಟೆ ಬಸವರಾಜ್, ನಾಗನಹಳ್ಳಿ ಚಂದ್ರಶೇಖರ್ ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಬಸ್‌ನಲ್ಲಿ ಪ್ರಯಾಣಿಸುವಾಗ 1,29,732 ರೂ. ಮೌಲ್ಯದ ಚಿನ್ನಾಭರಣ, 2,500 ನಗದು ಕಳವು

ಮೈಸೂರು,ಮಾ.15(ಪಿಎಂ)– ನಗರ ಸಾರಿಗೆ ಬಸ್‌ನಲ್ಲಿ ಪ್ರಯಾಣಿಸುವಾಗ ಯುವತಿಯೊಬ್ಬರ ಬ್ಯಾಗ್‌ನಿಂದ ಸುಮಾರು 13.14 ಗ್ರಾಂ ಚಿನ್ನದ ಕಿವಿಯೋಲೆಗಳು, ಸುಮಾರು 2.37 ಗ್ರಾಂ ಚಿನ್ನದ ಉಂಗುರ ಹಾಗೂ 2,500 ನಗದು ಕಳ್ಳತನವಾಗಿರುವ ಸಂಬಂಧ ದೇವರಾಜ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆಭರಣ ಮತ್ತು ನಗದು ಕಳೆದುಕೊಂಡ ಯುವತಿ ನೀಡಿದ ದೂರಿನನ್ವಯ ಮಾ.14ರಂದು ಎಫ್‌ಐಆರ್ ದಾಖಲಾಗಿದೆ. ನಾನು ಮೈಸೂರಿನ ಪಿಜಿಯೊಂದರಲ್ಲಿ ವಾಸವಾಗಿದ್ದು, ಖಾಸಗಿ ಕಂಪನಿ ಯೊಂದರಲ್ಲಿ ಆಫೀಸ್ ಅಡ್ಮಿನ್ ಆಗಿ ಕಾರ್ಯ ನಿರ್ವಹಿಸುತ್ತಿದ್ದೇನೆ. ಫೆ.23ರಂದು ಸಂಜೆ ನಮ್ಮ ಗ್ರಾಮದಲ್ಲಿನ ಹಬ್ಬದಲ್ಲಿ ಭಾಗವಹಿಸಲು ಹೊರಟ್ಟಿದ್ದೆ. ಅದಕ್ಕಾಗಿ ಅಕ್ಷಯ ಭಂಡಾರ್‌ನಿಂದ ನಗರ ಬಸ್ ನಿಲ್ದಾಣಕ್ಕೆ ಬಸ್‌ನಲ್ಲಿ ಪ್ರಯಾಣಿಸುವಾಗ ಬ್ಯಾಗ್‌ನಲ್ಲಿಟ್ಟಿದ್ದ ಆಭರಣ ಹಾಗೂ ನಗದು ಕಳವಾಗಿದೆ ಎಂದು ಯುವತಿ ತಿಳಿಸಿದ್ದಾರೆ.

ಇಂದು ಕುಕ್ಕರಹಳ್ಳಿಕೆರೆ ಪ್ರದೇಶದ ಸುತ್ತಮುತ್ತಲ ಪರಿಸರ ಸಂರಕ್ಷಣೆಗೆ ಆಗ್ರಹಿಸಿ ಪ್ರತಿಭಟನೆ



ಮೈಸೂರು,ಮಾ.15(ಪಿಎಂ)– ಪರಿಸರ ಸಂರಕ್ಷಿಸಿ ಹೋರಾಟ ಸಮಿತಿ ವತಿಯಿಂದ ಕುಕ್ಕರಹಳ್ಳಿ ಕೆರೆ ಪ್ರದೇಶದ ಸುತ್ತಮುತ್ತಲಿನ ಪರಿಸರವನ್ನು ರಕ್ಷಿಸಿ, ಇಲ್ಲಿ ಯಾವುದೇ ವಾಣಿಜ್ಯ ಮತ್ತು ಬಹು ಮಹಡಿ ಕಟ್ಟಡ ನಿರ್ಮಾಣಕ್ಕೆ ಅವಕಾಶ ನೀಡಬಾರದು ಎಂದು ಒತ್ತಾಯಿಸಿ ಮಾ.16ರಂದು ಬೆಳಗ್ಗೆ 11 ಗಂಟೆಗೆ ಮಾನಸ ಗಂಗೋತ್ರಿಯ ಆವರಣದಲ್ಲಿ ರುವ ಕ್ರಿಕೆಟ್ ಮೈದಾನದ ಎದುರು ಇರುವ ಪ್ರದೇಶದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಸಾರ್ವಜನಿಕರು, ಪರಿಸರ ಪ್ರೇಮಿಗಳು ಹಾಗೂ ನಗರದ ನಿವಾಸಿಗಳು ಈ ಪ್ರತಿಭಟನೆಯಲ್ಲಿ ಭಾಗವಹಿಸುವ ಜೊತೆಗೆ ನಮ್ಮ ಹೋರಾಟಕ್ಕೆ ಬೆಂಬಲ ನೀಡಬೇಕೆಂದು ಪ್ರಕಟಣೆಯಲ್ಲಿ ಕೋರಲಾಗಿದೆ.

ಬ್ರಾಹ್ಮಣ ಕುಟುಂಬಕ್ಕೆ ಉಚಿತ ಒಂಟಿಕೊಪ್ಪಲು ಪಂಚಾಂಗ ವಿತರಣೆ

ಅರ್ಚಕರಿಂದ ದೇಶದಲ್ಲಿ ಅಶಾಂತಿ ತೊಲಗಿ ಶಾಂತಿ ನೆಲೆಸಲು ಸಾಧ್ಯ



ಯುಗಾದಿ ಹಬ್ಬದ ಅಂಗವಾಗಿ ಶಾಸಕ ಕೆ.ಹರೀಶ್‌ಗೌಡರು, ಬ್ರಾಹ್ಮಣ ಕುಟುಂಬದವರಿಗೆ ಉಚಿತ ಒಂಟಿಕೊಪ್ಪಲ್ ಪಂಚಾಂಗ ವಿತರಣೆ ಮಾಡಿದರು.

ಮೈಸೂರು, ಮಾ.15(ವಿವಿಹೆಚ್)– ಪ್ರತಿನಿತ್ಯ ದೇವರ ಸ್ಮರಿಸುವ ಮೂಲಕ ದೇಶದಲ್ಲಿ ಅಶಾಂತಿ ತೊಲಗಿ ಶಾಂತಿ ನೆಲೆಯೂರುವಂತೆ ಮಾಡುವಲ್ಲಿ ಅರ್ಚಕರ ಪಾತ್ರ ಬಹಳ ದೊಡ್ಡದಿದೆ ಎಂದು ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅಭಿಪ್ರಾಯ ಪಟ್ಟಿದ್ದಾರೆ.

ನಗರದ ಎನ್.ಎಸ್.ರಸ್ತೆಯಲ್ಲಿರುವ ಸದ್ವಿದ್ಯಾ ಶಿಕ್ಷಣ ಸಂಸ್ಥೆ ಆವರದಲ್ಲಿ ಭಾನುವಾರ ಯುಗಾದಿ ಹಬ್ಬದ ಅಂಗವಾಗಿ ಆಯೋಜಿಸಿದ್ದ ಬ್ರಾಹ್ಮಣ ಕುಟುಂಬದವರಿಗೆ ಉಚಿತ ಒಂಟಿಕೊಪ್ಪಲ್ ಪಂಚಾಂಗ ವಿತರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ದೇವರ ಕೃಪೆಗೆ ಪಾತ್ರರಾಗುವಂತೆ ಭಗವಂತನ ಮುಂದೆ ಪಠಿಸುವ ಮಂತ್ರಗಳಿಂದ ಈ ದೇಶ ಹಾಗೂ ಪ್ರಮುಖವಾಗಿ ನಮ್ಮ ಮೈಸೂರು ಶಾಂತಿ ಯುತವಾಗಿದೆ. ಯಾರಿಗೆ ಕಷ್ಟ ಬಂದರೂ ಭಗವಂತನನ್ನು ನೆನೆಯುತ್ತಾರೆ. ಅಂತಹ ದೇವರ ಧ್ಯಾನವನ್ನು ಪ್ರತಿನಿತ್ಯ ಮಾಡುತ್ತಾ ಸರ್ವಜನಾಂಗದ ಏಳಿಗೆಗಾಗಿ ಅರ್ಚಕರು ಪ್ರಾರ್ಥಿಸುತ್ತಾರೆ ಎಂದರು.

ಯುಗಾದಿಗೆ ಹೊಸ ಸಂವತ್ಸರಕ್ಕೆ ಕಾಲಿಡುತ್ತಿದ್ದೇವೆ. ಬೇರೆಡೆಗಳಲ್ಲೆಲ್ಲಾ ಜ.1ರಂದು ನೂತನ ವರ್ಷಾಚರಣೆ ಮಾಡುತ್ತಾರೆ. ಸೂರ್ಯ ತನ್ನ ಪಥವನ್ನು ಬದಲಾಯಿಸುವ ದಿನ ಹೊಸವರ್ಷ ಆರಂಭವಾಗಲಿದೆ. ಅದನ್ನು ಯುಗಾದಿ ಎಂದು ನಮ್ಮ ಪೂರ್ವಜರು ಆಚರಿಸುತ್ತಾ ಬಂದಿದ್ದು, ನಾವು ಅದನ್ನು ಮುಂದುವರಿಸಬೇಕಿದೆ ಎಂದರು.

ಕಳೆದ 5 ವರ್ಷಗಳಿಂದ ಯುಗಾದಿ ವರ್ಷಾಚರಣೆ ಸಂಬಂಧ ಚಾಮರಾಜ ಕ್ಷೇತ್ರದ ವಿಪ್ರ ಸಮುದಾಯಗಳಿಗೆ ಒಂಟಿಕೊಪ್ಪಲ್ ಪಂಚಾಂಗ ವಿತರಿಸುತ್ತಿದ್ದೇವೆ. ಇದನ್ನು ಮುಂದುವರೆಸಿಕೊಂಡು ಹೋಗಲಾಗುವುದು ಎಂದೂ ಅವರು ತಿಳಿಸಿದರು.

ಈ ವೇಳೆ ಇತಿಹಾಸ ತಜ್ಞ ಶೆಲ್ವಪಿಳ್ಳೆ ಅಯ್ಯಂಗಾರ್, ಮೇಲುಕೋಟೆ ವಂಗಿಪುರ ಮಠದ ಇಳೈ ಆಳ್ವಾರ್, ಅಮೃತೇಶ್ವರ ದೇವಸ್ಥಾನದ ಪ್ರಧಾನ ಅರ್ಚಕರಾದ ಮೈಕುಮಾರ್, ಸದ್ವಿದ್ಯಾ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಎಂ.ಡಿ.ಗೋಪಿನಾಥ್, ಹಿರಿಯ ಸಮಾಜ ಸೇವಕ ಕೆ.ರಘು ರಾಮ್ ವಾಜಪೇಯಿ, ಮೈಸೂರು ಬ್ರಾಹ್ಮಣ ಯುವ ವೇದಿಕೆ ಪ್ರಧಾನ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ಅಜಯ್ ಶಾಸ್ತ್ರಿ ಉಪಸ್ಥಿತರಿದ್ದರು.

ಕಳ್ಳತನ, ಅಕ್ರಮ ಸಾಗಾಟದಿಂದ ವಶಪಡಿಸಿಕೊಳ್ಳಲಾದ

138 ಟನ್ ಶ್ರೀ ಗಂಧದ ಮರಗಳ ಹರಾಜು



ಅಶೋಕಪುರಂನಲ್ಲಿರುವ ಅರಣ್ಯ ಭವನದ ಆವರಣದಲ್ಲಿರುವ ಶ್ರೀಗಂಧದ ಕೋಠಿ.

ಮೈಸೂರು, ಮಾ.15(ಎಂಟಿವೈ)– ಮೈಸೂರು ಜಿಲ್ಲೆಯ ವಿವಿಧೆಡೆ ಕಳ್ಳತನ, ಅಕ್ರಮ ಸಾಗಾಟ ಪ್ರಕರಣದಲ್ಲಿ ವಶ ಪಡಿಸಿಕೊಂಡಿದ್ದ 138 ಟನ್ ಶ್ರೀಗಂಧದ ಮರವನ್ನು ಅರಣ್ಯ ಇಲಾಖೆ ಬಹಿರಂಗ ಹರಾಜು ಹಾಕುತ್ತಿದ್ದು, ಹಲವು ವರ್ಷಗಳ ಬಳಿಕ ದೊಡ್ಡ ಮಟ್ಟದ ಶ್ರೀಗಂಧ ಮರಗಳನ್ನು ಹರಾಜು ಹಾಕಿ ಇಲಾಖೆಗೆ ಆದಾಯ ತರಲು ಮುಂದಾಗಿದೆ.

ಅರಣ್ಯ ಇಲಾಖೆ ಹಾಗೂ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಳೆದ 12 ವರ್ಷಗಳ ಅವಧಿಯಲ್ಲಿ ದಾಖಲಾಗಿದ್ದ ಶ್ರೀಗಂಧ ಮರ ಕಳುವು, ಅಕ್ರಮ ಸಾಗಾಟ ಪ್ರಕರಣದಲ್ಲಿ ಕಳ್ಳರಿಂದ ವಶಪಡಿಸಿಕೊಳ್ಳಲಾಗಿದ್ದ ಶ್ರೀಗಂಧದ ಮರಗಳನ್ನು ಅಶೋಕಪುರಂನಲ್ಲಿನ ಅರಣ್ಯ ಭವನದ 'ಸರ್ಕಾರಿ ಶ್ರೀಗಂಧದ ಕೋಠಿ'ಯಲ್ಲಿ ಸುರಕ್ಷಿತವಾಗಿ ಸಂಗ್ರಹಿಸಲಾಗಿತ್ತು. ಡಿಸಿಎಫ್ ನ್ಯಾಯಾಲಯ ಹಾಗೂ ವಿವಿಧ ನ್ಯಾಯಾಲಯಗಳಲ್ಲಿ ಇತ್ಯರ್ಥವಾದ ಶ್ರೀಗಂಧದ ಮರಗಳ ಕಳವು, ಸಾಗಾಟ ಪ್ರಕರಣಗಳಿಗೆ ಸಂಬಂಧಿಸಿದಂತೆ ಒಟ್ಟು 138 ಟನ್ ಶ್ರೀಗಂಧದ ಮರವನ್ನು ಏಕಕಾಲದಲ್ಲಿ ಬಹಿರಂಗವಾಗಿ ಹರಾಜು ಮಾಡುವ ಪ್ರಕ್ರಿಯೆ ನಡೆಸಿ, ಆ ಮೂಲಕ ಬಾರಿ ಮೊತ್ತದ ಆದಾಯ ಗಳಿಸುವತ್ತ ಕ್ರಮ ಕೈಗೊಂಡಿದೆ.

ಗಂಧದ ಕೋಠಿ: ರಾಜ್ಯದಲ್ಲಿ ಅರಣ್ಯ ಇಲಾಖೆಗೆ ಸೇರಿದ ಮೂರು ಸರ್ಕಾರಿ ಶ್ರೀಗಂಧದ ಕೋಠಿ ಇದ್ದು, ಅವುಗಳಲ್ಲಿ ಕಳ್ಳತನ ಪ್ರಕರಣದಲ್ಲಿ ವಶಪಡಿಸಿಕೊಂಡ ಹಾಗೂ ವಿವಿಧೆಡೆ ನಿಯಮಾನುಸಾರ ಕಡಿದ ಗಂಧದ ಮರಗಳ ತುಂಡನ್ನು ಶ್ರೀಗಂಧದ ಕೋಠಿಯಲ್ಲಿ ಸಂಗ್ರಹಿಸಿಡಲಾಗುತ್ತದೆ. ರಾಜ್ಯದಲ್ಲಿ ಮೈಸೂರು, ಶಿವಮೊಗ್ಗ, ಧಾರವಾಡದಲ್ಲಿ ಶ್ರೀಗಂಧದ ಕೋಠಿಯಿದ್ದು, ಇದೀಗ ಮೈಸೂರಿನ ಕೋಠಿಯಲ್ಲಿ ಹತ್ತಾರು ವರ್ಷಗಳಿಂದ ಇರುವ ಶ್ರೀಗಂಧದ ಮರವನ್ನು ಹರಾಜು ಮಾಡುವ ಮೂಲಕ ವಿಲೇವಾರಿ ಮಾಡಲು ಉದ್ದೇಶಿಸಲಾಗಿದೆ.

ಆನ್‌ಲೈನ್ ಮೂಲಕ ಹರಾಜು: ಸರ್ಕಾರಿ ದರ ಒಂದೂವರೆ ಕೋಟಿ ರೂ. ಮೌಲ್ಯದ 138 ಟನ್ ಗಂಧದ ಮರ ಹಾಗೂ ಅದರ ವಿವಿಧ ಭಾಗವನ್ನು ಹರಾಜು ಪ್ರಕ್ರಿಯೆಗೆ ಒಳಪಡಿಸಲಾಗಿದೆ. ಮಾ.25ರಂದು ಬೆಳಗ್ಗೆ 11ರಿಂದ ಮಧ್ಯಾಹ್ನ 2 ಗಂಟೆವರೆಗೆ ಇ–ಹರಾಜು ನಡೆಯಲಿದ್ದು, ಅದಕ್ಕಾಗಿ ಬಿಡ್‌ದಾರರು ಮಾ.12ರಿಂದ 17ರವರೆಗೆ ಬೆಳಗ್ಗೆ 10.30ರಿಂದ ಸಂಜೆ 4.30ರೊಳಗೆ ವೀಕ್ಷಣೆಗೆ ಅವಕಾಶ ನೀಡಲಾಗುತ್ತದೆ. ಅಲ್ಲದೆ, ಮಾ.17ರಂದು ಸಂಜೆ 4 ಗಂಟೆಗೆ ಹರಾಜು ಪೂರ್ವ ಸಭೆ ಆಯೋಜಿಸಿ, ಷರತ್ತು, ನಿಯಮದ ಬಗ್ಗೆ ಮಾಹಿತಿ ನೀಡಲಾಗುತ್ತದೆ.


ಒಂದು ಮರದಲ್ಲಿ 21 ವಿಭಾಗ: ಶ್ರೀಗಂಧದ ಮರವೊಂದನ್ನು 21 ಬಗೆಯಾಗಿ ವಿಂಗಡಿಸಲಾಗಿದ್ದು, ಪ್ರತಿಯೊಂದು ಭಾಗವೂ ಬೇಡಿಕೆ ಹೊಂದಿದೆ. ವಿಲಾಯತ್ ಬುದ್, ಚಿನಾ ಬುದ್, ಪಂಜಮ್, ಘೊಟ್ಲಾ, ಘಟಬಾದ್ಲಾ, ಬಗಾರ್ಡ್‌ಡ್, ರೋಟ್–1 ಕ್ಲಾಸ್, ರೂಟ್–2 ಕ್ಲಾಸ್, ರೂಟ್–3 ಕ್ಲಾಸ್, ಜಪೋಕಲ್–1 ಕ್ಲಾಸ್, ಜಪೋಕಲ್–2 ಕ್ಲಾಸ್, ಐನ್‌ಬಗರ್, ಚೆರಿಯಾ, ಐನ್‌ಚಿಲ್ಟಾ, ಹಟ್ರಿ ಚಿಲ್ಟಾ, ಮಿಲ್ವಾ ಚಿಲ್ಟಾ, ಬಸೋಲಾ ಬುಕ್ಕಿ, ಸಾವ್ ಡಸ್ಟ್, ವೈಟ್ ಚಿಪ್ಸ್, ಬಾರ್ಕ್ ವೇಸ್ಟ್ ಸೇರಿದಂತೆ ವಿವಿಧ ಭಾಗಗಳಾಗಿ ವಿಂಗಡಿಸಲಾಗುತ್ತದೆ.

ಆನ್‌ಲೈನ್ ಮೂಲಕ ಹರಾಜು

"ವಿವಿಧ ಪ್ರಕರಣಗಳಲ್ಲಿ ವಶಕ್ಕೆ ಪಡೆಸಿದ್ದ ಹಾಗೂ ನ್ಯಾಯಾಲಯದಲ್ಲಿ ಇತ್ಯರ್ಥವಾಗಿರುವ ಪ್ರಕರಣಗಳಿಗೆ ಸಂಬಂಧಿಸಿದ 138 ಟನ್ ಶ್ರೀಗಂಧದ ಮರ ಹಾಗೂ ಮರದ ಭಾಗಗಳಲ್ಲಿ ಇ–ಹರಾಜು ನಡೆಸಲು ಉದ್ದೇಶಿಸಲಾಗಿದೆ. ಸರ್ಕಾರಿ ದರ 1.50 ಕೋಟಿ ರೂ. ದರ ನಿಗಧಿ ಮಾಡಲಾಗಿದೆ. ಆದರೆ ಹರಾಜು ಪ್ರಕ್ರಿಯೆಯಲ್ಲಿ 2ರಿಂದ 3 ಕೋಟಿ ರೂ.ಗೆ ಬಿಡ್ ಕೂಗುವ ಸಾಧ್ಯತೆ ಇದೆ. ಶ್ರೀಗಂಧ ಬಳಸಿ ವಿವಿಧ ವಸ್ತು ತಯಾರಿಸುವ ಕಂಪನಿಗಳು ಬಿಡ್ ಕೂಗಲು ಮುಂದೆ ಬಂದಿದ್ದಾರೆ. ಈ ಹಿಂದೆ ವರ್ಷಕ್ಕೊಮ್ಮೆ ಶ್ರೀಗಂಧದ ಕೋಠಿಯಲ್ಲಿರುವ ಗಂಧದ ಮರವನ್ನು ಹರಾಜು ಮಾಡಲಾಗುತ್ತಿತ್ತು. ಆದರೆ ಕಾರಣಾಂತರದಿಂದ ಕಳೆದ 10 ವರ್ಷದಿಂದ ಹರಾಜು ಪ್ರಕ್ರಿಯೆ ನಡೆದಿಲ್ಲ. ಡಿಸಿಎಫ್ ಕೋರ್ಟ್, ಜಿಲ್ಲಾ ನ್ಯಾಯಾಲಯದಲ್ಲಿ ಇತ್ಯರ್ಥವಾದ ಪ್ರಕರಣಗಳಿಗೆ ಸಂಬಂಧಿಸಿದ ಶ್ರೀಗಂಧದ ಮರ ಹರಾಜು ನಡೆಸಲಾಗುತ್ತಿದೆ. ಶ್ರೀಗಂಧದ ಕೋಠಿಯಲ್ಲಿ ಅರ್ಧ ಕೆಜಿಯಿಂದ 3 ಕೆಜಿವರೆಗೂ ಶ್ರೀಸಾಮಾನ್ಯರು ಶ್ರೀಗಂಧದ ಮರವನ್ನು ಖರೀದಿಸಬಹುದಾಗಿದೆ. ಕೆಜಿಗೆ 8 ಸಾವಿರದಿಂದ 12 ಸಾವಿರ ರೂ. ವರೆಗೆ ದರ ನಿಗಧಿ ಮಾಡಲಾಗಿದೆ. ಎರಡು ದಿನದ ಹಿಂದಷ್ಟೇ ಪಶುಪತಿ ದೇವಾಲಯದವರು 50 ಕೆಜಿ ಶ್ರೀಗಂಧದ ಮರವನ್ನು ಖರೀದಿಸಿದ್ದಾರೆ. **– ಕೆ.ಪರಮೇಶ್, ಡಿಸಿಎಫ್, ಮೈಸೂರು**

ಮೈಸೂರು ಮಿತ್ರ 46
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಚುಂಚಶ್ರೀ ಕ್ಷಮೆ ಯಾಚಿಸಿದ ಶಾಸಕ ರಮೇಶ್ ಬಂಡಿಸಿದ್ದೇಗೌಡ




ಚುಂಚ ಶ್ರೀ ಶಾಸಕ ರಮೇಶ್

ಮಂಡ್ಯ, ಮಾ.15– ಆದಿಚುಂಚನಗಿರಿಯ ಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ವಿರುದ್ಧ ತಾವು ನೀಡಿದ್ದ ಹೇಳಿಕೆಗೆ ಶಾಸಕ ಎ.ಬಿ.ರಮೇಶ್ ಬಂಡಿಸಿದ್ದೇಗೌಡ ಕ್ಷಮೆ ಯಾಚಿಸಿದ್ದಾರೆ.

ಶ್ರೀರಂಗಪಟ್ಟಣದಲ್ಲಿ ನಿನ್ನೆ ನಡೆದ ಕಾರ್ಯಕ್ರಮವೊಂದರಲ್ಲಿ ಆದಿಚುಂಚನಗಿರಿ ಸ್ವಾಮೀಜಿ ಬಗ್ಗೆ ತಾವು ಆಡಿದ ಮಾತಿಗೆ ಪರ ವಿರೋಧ ಚರ್ಚೆ ನಡೆಯುತ್ತಿರುವ ಹಿನ್ನಲೆಯಲ್ಲಿ ಭಾನುವಾರ ಮಾಧ್ಯಮ ದವರನ್ನು ಭೇಟಿಯಾಗಿ ಚುಂಚಶ್ರೀ ವಿರುದ್ಧ ನೀಡಿದ್ದ ಹೇಳಿಕೆಗೆ ಕ್ಷಮೆ ಕೋರಿದರು.

ನಾನು ಯಾವಾಗ ಏನು ಮಾತನಾಡಿದರೂ ಕಾಂಟ್ರವರ್ಸಿ ಆಗುತ್ತದೆ. ನಾನು ಮಠ ಸರಿಯಿಲ್ಲವೆಂದು ಹೇಳಿಲ್ಲ. ಭೈರವೈಕ್ಯ ಶ್ರೀಬಾಲಗಂಗಾಧರನಾಥ ಸ್ವಾಮೀಜಿ ಬಿಟ್ಟುಹೋದ ಸಂಸ್ಥೆ ಚೆನ್ನಾಗಿ ನಡೆಯ ಬೇಕೆಂಬ ಭಾವನೆಯಲ್ಲಿ ನೀವೂ ಹಾಗೆಯೇ ಇರಿ ಎಂದು ಶ್ರೀನಿರ್ಮಲಾನಂದನಾಥ ಸ್ವಾಮೀಜಿ ಅವರಿಗೆ ಮನವಿ ಮಾಡಿದ್ದೆ ಎಂದು ಹೇಳಿದರು.

ಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಬಗ್ಗೆ ಮಾತನಾಡುವ ದೊಡ್ಡ ವ್ಯಕ್ತಿ ನಾನಲ್ಲ. ಮಾತನಾಡುವ ಸಂದರ್ಭದಲ್ಲಿ ಸಣ್ಣ ಪದ ವ್ಯತ್ಯಾಸ ಆಗುತ್ತೆ. ಒಕ್ಕಲಿಗರ ಸಂಘದ ಅನೇಕರು ಮಾತನಾಡಿದ್ದಾರೆ. ಅವರ ಮನಸ್ಸಿಗೆ ನೋವಾಗಿದ್ದರೆ ವಿಷಾದ ವ್ಯಕ್ತಪಡಿಸುತ್ತೇನೆ. ಶ್ರೀನಿರ್ಮಲಾನಂದನಾಥ ಸ್ವಾಮೀಜಿ ಅವರ ಮನಸ್ಸಿಗೆ ನೋವಾಗುವ ರೀತಿ ನಡೆದುಕೊಂಡಿಲ್ಲ. ನನ್ನ ಮಾತಿನಿಂದ ನೋವಾಗಿದ್ದರೆ ಕ್ಷಮೆ ಯಾಚಿಸುತ್ತೇನೆ ಎಂದರು.

ನಾನು ಯಾರ ಮನಸ್ಸಿಗೂ ನೋವುಂಟು ಮಾಡಬೇಕೆಂದು ಆ ರೀತಿ ಹೇಳಿಲ್ಲ. ಜನರೊಂದಿಗೆ ಇರುವುದೇ ನನ್ನ ವೃತ್ತಿ. ನಾನು ಮಠದ ಸದ್ಭಕ್ತ. ಜನರು ಯಾರು ಕೂಡ ಅನ್ಯಥಾ ಭಾವಿಸಬಾರದು. ಮಠಕ್ಕೆ ಸೇವೆ ಮಾಡಿದವರು ಸದ್ಯದಲ್ಲೆ ಬರುತ್ತಾರೆ ಅವಾಗ ಮಾತನಾಡೋಣ ಎಂದು ಸಮಜಾಯಿಷಿ ನೀಡಿದರು.

ಚುಂಚಶ್ರೀ ಬಗ್ಗೆ ಮಾತನಾಡುವಾಗ ಶಾಸಕರಿಗೆ ವಿವೇಚನೆ ಇರಬೇಕಿತ್ತು



ಸಚ್ಚಿದಾನಂದ

ಮಂಡ್ಯ: ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಡಾ.ನಿರ್ಮಲಾನಂದನಾಥ ಮಹಾಸ್ವಾಮೀಜಿ ಅವರ ಬಗ್ಗೆ ಮಾತನಾಡುವಾಗ ಎಚ್ಚರಿಕೆ ಜತೆಗೆ ವಿವೇಚನೆ ಇರಬೇಕಿತ್ತು ಈ ನಿಟ್ಟಿನಲ್ಲಿ ಶಾಸಕ ಎ.ಬಿ.ರಮೇಶ ಬಂಡಿಸಿದ್ದೇಗೌಡ ನೀಡಿರುವ ಹೇಳಿಕೆ ಅವರಿಗೆ ಶೋಭೆ ತರುವಂತದ್ದಲ್ಲ ಎಂದು ಬಿಜೆಪಿ ಯುವ ನಾಯಕ ಇಂಡುವಾಳು ಸಚ್ಚಿದಾನಂದ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಒಕ್ಕಲಿಗ ಸೇರಿದಂತೆ ಎಲ್ಲ ಸಮುದಾಯ ಒಟ್ಟಿಗೆ ಕರೆದುಕೊಂಡು ಹೋಗುವ ಕೆಲಸವನ್ನು ಚುಂಚಶ್ರೀ ಮಾಡುತ್ತಿದ್ದಾರೆ. ರಾಷ್ಟ್ರೀಯ ಧರ್ಮ ಪರಿಷತ್ ಸಲಹೆಗಾರರಾಗಿ ಶ್ರೀಗಳು ಉತ್ತಮ ಕೆಲಸ ಮಾಡುತ್ತಿದ್ದಾರೆ. ಪ್ರಧಾನಮಂತ್ರಿ ನರೇಂದ್ರಮೋದಿ, ಕೇಂದ್ರ ಗೃಹಸಚಿವ ಅಮಿತ್ ಷಾ, ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಸೇರಿದಂತೆ ಹಲವು ಗಣ್ಯಾತಿಗಣ್ಯರು ಪಕ್ಷಾತೀತವಾಗಿ ಶ್ರೀಗಳ ಕಾರ್ಯವೈಖರಿಯನ್ನು ಮೆಚ್ಚಿದ್ದಾರೆ. ಕೈನ ಒಂದು ಬೆರಳು ಬೇರೆಯವರ ಬಗ್ಗೆ ತಪ್ಪು ಮಾತನಾಡಿದರೆ ಉಳಿದ ನಾಲ್ಕು ತಮ್ಮ ಕಡೆಯೆ ತೋರಿಸುತ್ತದೆ ಎನ್ನುವುದನ್ನು ಶಾಸಕರು ನೆನಪು ಮಾಡಿಕೊಳ್ಳಬೇಕು. ಸಾಧು ಸಂತರ ಬಗ್ಗೆ ಮಾತನಾಡಬೇಕಾದರೆ ಎಚ್ಚರಿಕೆ ಇರಬೇಕು ಎಂದು ಸಲಹೆ ನೀಡಿದ್ದಾರೆ.

ಇನ್ನು ಶಾಸಕ ರಮೇಶ ಬಂಡಿಸಿದ್ದೇಗೌಡ ಅವರು ತಮ್ಮ ಭಾಷಣದಲ್ಲಿ ಮಠ ಸಂಪರ್ಕ ಕಡಿಮೆ ಎಂದಿದ್ದಾರೆ. ಹಾಗಿದ್ದ ಮೇಲೆ ಮಠಗಳ ಸಾಮಾಜಿಕ ಸೇವೆಯ ಬಗ್ಗೆ ಅವರಿಗೆ ಏನು ಮಾಹಿತಿ ಇರುತ್ತದೆ. ಜವಾಬ್ದಾರಿಯುತ ಸ್ಥಾನದಲ್ಲಿದ್ದು ಬಹಿರಂಗ ಸಭೆಯಲ್ಲಿ ಹೇಳಿಕೆ ನೀಡುವ ಮುನ್ನ ಯೋಚಿಸಬೇಕು. ಆದರೆ ಶಾಸಕ ವರ್ತನೆ ಅವರಿಗೆ ಮಠದ ಮೇಲಿರುವ ಭಾವನೆಯನ್ನು ತೋರಿಸುತ್ತದೆ. ಚುಂಚನಗಿರಿ ಮಠದ ಹಳಿ ತಪ್ಪಿಲ್ಲ. ಕೆಲ ದಿನದ ಹಿಂದಷ್ಟೇ ರೈತರ ಬಗ್ಗೆ ನಾಲಗೆ ಹರಿಬಿಟಿದ್ದ ಶಾಸಕ ರಮೇಶ ಬಂಡಿಸಿದ್ದೇಗೌಡ ಅವರು ಯಾವ ಆತಂಕಕ್ಕೆ ಒಳಗಾಗಿದ್ದಾರೋ ಗೊತ್ತಿಲ್ಲ. ಕಾಲಭೈರವೇಶ್ವರ ಅವರಿಗೆ ಒಳ್ಳೆಯ ಬುದ್ದಿ ಕೊಡಲಿ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಿರುಗನಹಳ್ಳಿ ಗ್ರಾಮದ ರೈತರಿಗೆ ಮೇವು ಕತ್ತರಿಸುವ ಯಂತ್ರ ವಿತರಣೆ



ಮೇವು ಕತ್ತರಿಸುವ ಯಂತ್ರಗಳನ್ನು ಕೃಷಿ ಸಚಿವ ಚೆಲುವರಾಯಸ್ವಾಮಿ ವಿತರಿಸಿದರು.

ನಾಗಮಂಗಲ: ತಾಲೂಕಿನ ಹೊಣಕೆರೆ ಹೋಬಳಿ ಬೋಗಾದಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ತಿರುಗನಹಳ್ಳಿ ಗ್ರಾಮದ ರೈತರಿಗೆ ರಿಯಾಯಿತಿ ದರದಲ್ಲಿ ಮೇವು ಕತ್ತರಿಸುವ ಯಂತ್ರಗಳನ್ನು ಕೃಷಿ ಸಚಿವ ಸಚಿವ ಚೆಲುವರಾಯಸ್ವಾಮಿ ವಿತರಿಸಿದರು.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರದಲ್ಲಿ ನಾಡಿನ ರೈತರಿಗೆ ಗರಿಷ್ಠ ಪ್ರಮಾಣದ ಸವಲತ್ತುಗಳನ್ನು ನೀಡುತ್ತಿದೆ. ಇಲಾಖೆಯ ಯೋಜನೆಗಳನ್ನು ಸದ್ಬಳಕೆ ಮಾಡಿಕೊಂಡು ರೈತರು ಆರ್ಥಿಕವಾಗಿ ಸದೃಢವಾಗಬೇಕು ಎಂದು ಸಲಹೆ ನೀಡಿದರು.

ರಾಜ್ಯ ಸರ್ಕಾರ 5 ಗ್ಯಾರಂಟಿ ಯೋಜನೆಗಳಿಗಷ್ಟೇ ಸೀಮಿತವಾಗಿಲ್ಲ ನಾಡಿನ ರೈತರು ಹಾಗೂ ಮಹಿಳೆಯರು ಸೇರಿದಂತೆ ಎಲ್ಲಾ ವರ್ಗದ ಜನ ಸಾಮಾನ್ಯರ ಶ್ರೇಯೋಭಿವೃದ್ಧಿಗೆ ಹಲವಾರು ಜನಪರ ಕಾರ್ಯಕ್ರಮಗಳನ್ನು ರೂಪಿಸಿದೆ. ಮೂರು ವರ್ಷದಿಂದ ತಾಲೂಕಿನ ಅರ್ಹ ಫಲಾನುಭವಿ ರೈತರಿಗೆ 3.10 ಕೋಟಿ ರೂ ವೆಚ್ಚದಲ್ಲಿ 668 ಮೇವು ಕತ್ತರಿಸುವ ಯಂತ್ರಗಳನ್ನು ವಿತರಿಸಲಾಗಿದೆ ಎಂದರು. ಕರ್ನಾಟಕ ಹೊರತು ಪಡಿಸಿ ದೇಶದ ಯಾವುದೇ ರಾಜ್ಯದಲ್ಲಿಯೂ ಅಲ್ಲಿನ ಸರ್ಕಾರಗಳು ಇಷ್ಟು ದೊಡ್ಡ ಪ್ರಮಾಣದ ಸಹಕಾರವನ್ನು ಜನರಿಗೆ ಕೊಟ್ಟಿಲ್ಲ ನಮ್ಮ ರಾಜ್ಯದಲ್ಲಿಯೂ ಕೂಡ ಸ್ವಾತಂತ್ರ್ಯ ನಂತರ ಯಾವುದೇ ಸರ್ಕಾರ ಕೊಟ್ಟಿರಲಿಲ್ಲ ಎಂದರು

ಕಾರ್ಯಕ್ರಮದಲ್ಲಿ ಉಪ ಕೃಷಿ ನಿರ್ದೇಶಕ ಬಾಲು ಪ್ರಕಾಶ್, ಸಹಾಯಕ ಕೃಷಿ ನಿರ್ದೇಶಕ ಆರ್ ಹರೀಶ್, ಮನ್‌ಮುಲ್ ನಿರ್ದೇಶಕ ಲಕ್ಷ್ಮೀ ನಾರಾಯಣ, ನಾಗಣ್ಣ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

ವಿ.ಸಿ.ನಾಲೆ ಅಭಿವೃದ್ಧಿಗೆ ನೂರು ಕೋಟಿ ರೂ. ಮಂಜೂರು



ಸುದ್ದಿಗೋಷ್ಠಿಯಲ್ಲಿ ಶಾಸಕ ರವಿಕುಮಾರ್ ಗಣಿಗ ಮಾತನಾಡಿದರು.

ಮಂಡ್ಯ: ಜಿಲ್ಲೆಯ ವಿ.ಸಿ.ನಾಲೆ ಅಭಿವೃದ್ಧಿಗೆ ನೂರು ಕೋಟಿ ಬಿಡುಗಡೆ ಮಾಡಲು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ಆಗಿದೆ ಎಂದು ಶಾಸಕ ರವಿಕುಮಾರ್ ಗಣಿಗ ತಿಳಿಸಿದ್ದಾರೆ.

ವಿ.ಸಿ. ನಾಲೆ ಅಭಿವೃದ್ಧಿಗೆ ಶೀಘ್ರದಲ್ಲೇ ಟೆಂಡರ್ ಕರೆಯಲಾಗುವುದು ಎರಡೂವರೆ ವರ್ಷದಲ್ಲಿ 100 ಕೋಟಿ ಹಣವನ್ನು ಕಾಮಗಾರಿಗೆ ವ್ಯಯಮಾಡಲಾಗಿದೆ. ಇನ್ನು ನೂರು ಕೋಟಿ ಹಣವು ನಾಲಾ ಅಭಿವೃದ್ಧಿಗಾಗಿ ಹಂತ–ಹಂತವಾಗಿ ಬಿಡುಗಡೆ ಯಾಗಲಿದ್ದು, ಇದಕ್ಕೆ ಬೇಡಿಕೆ ಸಲ್ಲಿಸಲಾಗಿದೆ. ಜೊತೆಗೆ ಬಸರಾಳು ಭಾಗದ ಹೇಮಾವತಿ ನಾಲೆ ಅಭಿವೃದ್ಧಿಗೆ ಡಿಪಿಆರ್ ಆಗಿದೆ. 350 ಕೋಟಿ ವೆಚ್ಚದಲ್ಲಿ ಬಸರಾಳು ಭಾಗದ ನಾಲಾ ಅಭಿವೃದ್ಧಿ ಕಾಮಗಾರಿ ಆಗಲಿದೆ ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಮಂಡ್ಯ ನಗರಕ್ಕೆ ಹೊಸರೂಪ ಕೊಡಲು ಮುಂದಾಗಿದ್ದು, ಡೆಲ್ಟಾ ಮೂಲಕ ಮಹಾನಗರ ಪಾಲಿಕೆ ಮಾದರಿಯಲ್ಲಿ ಬೆಸಗರಹಳ್ಳಿ ರಾಮಣ್ಣ ವೃತ್ತದಿಂದ ಗೌರಿಶಂಕರ ಕಲ್ಯಾಣ ಮಂಟಪದವರೆಗೆ ಉತ್ತಮ ರೀತಿಯ ರಸ್ತೆ, ಫುಟ್‌ಪಾತ್ ಸೈಕಲ್ ಹಬ್ ನಿರ್ಮಿಸಲಾಗುವುದು. ಜೊತೆಗೆ ಬನ್ನೂರು ರಸ್ತೆಯನ್ನು ಸಂಪೂರ್ಣ ಅಭಿವೃದ್ಧಿ ಮಾಡಲಾಗುವುದು. ಹೊಸಹಳ್ಳಿ ವೃತ್ತದ ಅಭಿವೃದ್ಧಿಗೆ 1.5 ಕೋಟಿ ಬಿಡುಗಡೆಯಾಗಿದೆ. ನಗರಸಭೆ ಮೂಲಕ ಹಣ ಬಿಡುಗಡೆಯಾಗಿ ವಿದೇಶಿ ಮಾದರಿಯಲ್ಲಿ ವೃತ್ತವನ್ನು ಅಭಿವೃದ್ಧಿ ಪಡಿಸಲಾಗುವುದು. ವಿ.ವಿ.ರಸ್ತೆಗೆ 4 ಕೋಟಿ ವೆಚ್ಚದಲ್ಲಿ ನಗರಸಭೆ ಮತ್ತು ಡೆಲ್ಟಾ ಮೂಲಕ ಸಂಪೂರ್ಣ ಅಭಿವೃದ್ಧಿಪಡಿಸಿ, ವಾಹನ ನಿಲ್ದಾಣ ಮುಕ್ತ ರಸ್ತೆಯನ್ನಾಗಿ ಪರಿವರ್ತಿಸಲಾಗುವುದು ಎಂದು ಹೇಳಿದರು.

ಮೈಷುಗರ್ ಹೊಸ ಕಾರ್ಖಾನೆ ನಿರ್ಮಿಸುವ ಬದಲು ಹೀಗಿರುವ ಕಾರ್ಖಾನೆಗೆ ಹೊಸ ಬಾಯ್ಲರ್ ಅಳವಡಿಸಲಾಗುವುದು. ಇದಕ್ಕೆ 60 ಕೋಟಿ ಖರ್ಚಾಗಲಿದ್ದು, ಟೆಂಡರ್ ಸಹ ಕರೆಯಲಾಗಿದೆ. ಇದಿಷ್ಟೇ ಅಲ್ಲದೇ 33 ಕೋಟಿ ವೆಚ್ಚದಲ್ಲಿ ಕಾರ್ಮಿಕ ವಸತಿ ಶಾಲೆಯನ್ನು ಬಜೆಟ್‌ನಲ್ಲಿ ಮಂಜೂರು ಮಾಡಿಸಲಾಗಿದೆ

ಅಮೃತ್1 ಯೋಜನೆಯಡಿ ನಗರದ 24 ವಾರ್ಡ್‌ಗೆ ಕುಡಿಯುವ ನೀರು ಸೌಲಭ್ಯವನ್ನು ಶೀಘ್ರ ಒದಗಿಸಲಾಗುವುದು. 150 ಕೋಟಿ ವೆಚ್ಚದಲ್ಲಿ ನಗರದ 24 ವಾರ್ಡ್‌ಗೆ ಶಾಶ್ವತ ನೀರಿನ ವ್ಯವಸ್ಥೆ ಮಾಡುವುದು ನನ್ನ ಗುರಿ ಎಂದು ಹೇಳಿದರು.



ಕೆರೆತೊಣ್ಣೂರು ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಎನ್.ಎಸ್. ಇಂದ್ರೇಶ್ 5 ಲಕ್ಷ ರೂ. ದೇಣಿಗೆ ನೀಡಿದರು.

ದೊಡ್ಡಕೆರೆಯಲ್ಲಿ ಈಜಲು ಹೋಗಿದ್ದ ಬಾಲಕ ಸಾವು

ಮಳವಳ್ಳಿ, ಮಾ.15–ಕೆರೆಯಲ್ಲಿ ಈಜಲು ಹೋಗಿದ್ದ ಬಾಲಕ ಮೃತಪಟ್ಟು ಮತ್ತೊಬ್ಬ ಬಾಲಕ ಪ್ರಾಣಾಪಾಯದಿಂದ ಪಾರಾಗಿರುವ ಘಟನೆ ಪಟ್ಟಣದ ಸಮೀಪದ ದೊಡ್ಡಕೆರೆಯಲ್ಲಿ ನಡೆದಿದೆ.

ಪಟ್ಟಣದ ಗಂಗಾಮತಸ್ಥ ಬೀದಿಯ ಬಸಂತ್‌ಕುಮಾರ್ ಎಂಬುವರ ಪುತ್ರ ಕೇಶವ (12) ಮೃತ ಬಾಲಕ. ಗಂಗಾಮತಸ್ಥ ಬೀದಿಯ ಸರ್ಕಾರಿ ಶಾಲೆಯಲ್ಲಿ 6ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ಮೃತ ಕೇಶವ ಶನಿವಾರ ಮಧ್ಯಾಹ್ನ ತರಗತಿ ಮುಗಿಸಿ ತನ್ನ ಐವರು ಸಹಪಾಠಿಗಳೊಂದಿಗೆ ಈಜಲು ಹೋಗಿದ್ದಾಗ ಕೇಶವ, ಹನುಮಂತು ಇಬ್ಬರು ಕೆಸರಿನಲ್ಲಿ ಸಿಲುಕಿಕೊಂಡಿದ್ದಾರೆ. ಘಟನೆಯಿಂದ ಗಾಬರಿಗೊಂಡ ಇತರೆ ಸಹಪಾಠಿಗಳು ಸ್ಥಳದಿಂದ ಪರಾರಿಯಾಗಿದ್ದಾರೆ.

ಕಿರುಚಾಟ ಕೇಳಿಸಿಕೊಂಡ ಕೆರೆ ಸಮೀಪದ ಅಂಗಡಿಯ ಕೆಲಸಗಾರರು ಇಬ್ಬರು ಬಾಲಕರನ್ನು ರಕ್ಷಿಸಿ ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಬರುವಷ್ಟರಲ್ಲಿ ಕೇಶವ ಸಾವನ್ನಪ್ಪಿದ್ದು, ಮತ್ತೊಬ್ಬ ಬಾಲಕ ಹನುಮಂತು ಪ್ರಾಣಾಪಾಯದಿಂದ ಪಾರಾಗಿದ್ದಾನೆ.

ಕ್ಷೇತ್ರ ಶಿಕ್ಷಣಾಧಿಕಾರಿ ಉಮಾ, ಕ್ಷೇತ್ರ ಸಮನ್ವಯಾಧಿಕಾರಿ ಶ್ರೀನಿವಾಸ್, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಮಹದೇವು ಆಸ್ಪತ್ರೆಗೆ ಭೇಟಿ ನೀಡಿ ಮಾಹಿತಿ ಪಡೆದುಕೊಂಡರು. ಮೃತ ಬಾಲಕನ ಪೋಷಕರ ಆಕ್ರಂದನ ಮುಗಿಲು ಮುಟ್ಟಿತ್ತು. ಈ ಸಂಬಂಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶೌಚಾಲಯದಲ್ಲಿ ಮೊಬೈಲ್ ಇಟ್ಟು ವೀಡಿಯೋ: ಸಪ್ಲೇಯರ್ ಬಂಧನ


ಶ್ರೀರಂಗಪಟ್ಟಣ, ಮಾ.15– ಶೌಚಾಲಯದಲ್ಲಿ ಮೊಬೈಲ್ ಇಟ್ಟು ವೀಡಿಯೋ ಮಾಡಿರುವ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೊಲೀಸರು ಖಾಸಗಿ ಹೋಟೆಲ್‌ನ ಸಪ್ಲೇಯರನ್ನು ಬಂಧಿಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ರಾಜಸ್ಥಾನ ಮೂಲದ ಹರೀಶ್ ಪಟ್ಟಣದ ಗಂಜಾಂ ರಸ್ತೆಯ ಹೈವೆ ಸೇತುವೆ ಬಳಿ ಇರುವ ಶರವಣ ಹೋಟೆಲ್‌ನಲ್ಲಿ ಸಪ್ಲೇಯರ್ ಆಗಿ ಕೆಲಸ ಮಾಡುತ್ತಿದ್ದ. ಈತ ಪುರುಷರು ಮತ್ತು ಮಹಿಳೆಯರ ಶೌಚಾಲಯದ ನಡುವೆ ಇರುವ ಗೋಡೆಯ ಮೇಲೆ ಮೊಬೈಲ್ ವೀಡಿಯೋ ಆನ್ ಮಾಡಿ ಮಹಿಳೆಯರು ಶೌಚಾಲಯಕ್ಕೆ ಹೋದಾಗ ಅವರ ಖಾಸಗಿ ಭಾಗಗಳ ವೀಡಿಯೋ ಮಾಡುತ್ತಿದ್ದ ಎನ್ನಲಾಗಿದೆ.

ಈ ಬಗ್ಗೆ ಮಹಿಳೆಯೊಬ್ಬರು ಪರಿಶೀಲಿಸಿ ಹೋಟೆಲ್ ಮಾಲೀಕನಿಗೆ ದೂರು ನೀಡಿದ್ದಾರೆ. ನಂತರ ಮಾಹಿತಿ ತಿಳಿದ ಪೊಲೀಸರು ಹೋಟೆಲ್‌ಗೆ ಆಗಮಿಸಿ ಶೌಚಾಲಯದ ಬಳಿ ಮೊಬೈಲ್ ಇಟ್ಟ ವ್ಯಕ್ತಿಯನ್ನು ವಿಚಾರಿಸಿದಾಗ ನಿತ್ಯ ಇಂತಹ ಕೆಲಸ ಮಾಡಿರುವುದು ಬಹಿರಂಗವಾಗಿದೆ. ಪೊಲೀಸರು ಆರೋಪಿ ಹರೀಶ್ ಹಾಗೂ ಆತನ ಮೊಬೈಲ್ ವಶಕ್ಕೆ ಪಡೆದು ಪ್ರಕರಣ ದಾಖಲಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಕಾರು–ಬೈಕ್ ಡಿಕ್ಕಿ: ಸವಾರರಿಬ್ಬರು ಸ್ಥಳದಲ್ಲೇ ಸಾವು

ನಾಗಮಂಗಲ, ಮಾ.15–ಕಾರು ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಬೈಕ್‌ನಲ್ಲಿದ್ದ ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಚಾಮರಾಜನಗರ–ಜೇವರ್ಗಿ ರಾಷ್ಟ್ರೀಯ ಹೆದ್ದಾರಿಯ ಪಟ್ಟಣದ ಟಿ.ಬಿ.ಬಡಾವಣೆಯ ಉಪ್ಪಾರಹಳ್ಳಿ ಗೇಟ್ ಬಳಿ ಸಂಭವಿಸಿದೆ.



ತಾಲೂಕಿನ ದೇವಾಲಪುರ ಹೋಬಳಿ ಕಲಸಗೆರೆ ಗ್ರಾಮದ ಶಿವಲಿಂಗೇಗೌಡರ ಪುತ್ರ ಗಂಗರಾಜು (61) ಮತ್ತು ಆನಂದ್ ಎಂಬುವರ ಪುತ್ರ ಜಯ ಶಂಕರ್ (33) ಘಟನೆಯಲ್ಲಿ ಮೃತಪಟ್ಟವರು. ತಾಲೂಕಿನ ಕಾಚೇನಹಳ್ಳಿಯಲ್ಲಿ ನಡೆಯುತ್ತಿದ್ದ ಗ್ರಾಮ ದೇವತೆ ಹಬ್ಬಕ್ಕೆಂದು ಕಲಸಗೆರೆ ಗ್ರಾಮದಿಂದ ಗಂಗ ರಾಜು ಮತ್ತು ಜಯಶಂಕರ್ ಬೈಕ್ (ಕೆಎ05, ಜೆ ಸಿ–1808)ನಲ್ಲಿ ತೆರಳುತ್ತಿದ್ದಾಗ ಬೆಳ್ಳೂರು ಕಡೆಯಿಂದ ನಾಗಮಂಗಲಕ್ಕೆ ಬರುತ್ತಿದ್ದ ಕಾರು (ಕೆಎ13, ಎಂಬಿ–3714)ಮುಖಾಮುಖಿ ಡಿಕ್ಕಿ ಹೊಡೆದು ಈ ಅಪಘಾತ ಸಂಭವಿಸಿದೆ.

ಡಿಕ್ಕಿಯ ರಭಸಕ್ಕೆ ಬೈಕ್ ಸಂಪೂರ್ಣ ಜಖಂಗೊಂಡಿದ್ದು, ಗಂಗರಾಜು ಮತ್ತು ಜಯಶಂಕರ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಘಟನೆ ಸಂಭವಿಸುತ್ತಿದ್ದಂತೆ ಚಾಲಕ ಕಾರು ಬಿಟ್ಟು ಪರಾರಿಯಾಗಿದ್ದಾನೆ.

ಸುದ್ದಿ ತಿಳಿಯುತ್ತಿದ್ದಂತೆ ಪಟ್ಟಣ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಶಿವಕುಮಾರ್ ನೇತೃತ್ವದ ಪೊಲೀಸ್ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಇಬ್ಬರ ಮೃತದೇಹಗಳ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಕುಟುಂಬಸ್ಥರಿಗೆ ಶವಗಳನ್ನು ಹಸ್ತಾಂತರಿಸಲಾಯಿತು.

ಒಂದನೇ ಪುಟದಿಂದ

ಪಂಚ ರಾಜ್ಯಗಳ ಚುನಾವಣೆ ಫಿಕ್ಸ್

ಪ್ರಕ್ರಿಯೆಗಳನ್ನು ಕಲಿಯಲು, 20 ರಾಷ್ಟ್ರಗಳ ಚುನಾವಣಾ ಆಯೋಗಗಳು ಭಾರತಕ್ಕೆ ಬರುತ್ತವೆ ಎಂದು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಇದೇ ವೇಳೆ ತಿಳಿಸಿದ್ದಾರೆ.

ಹೆಚ್ಚಲಿದೆ ಚುನಾವಣೆ ಕಾವು: ಈಗಾಗಲೇ ತಮಿಳುನಾಡು, ಪಶ್ಚಿಮ ಬಂಗಾಳ ಸೇರಿದಂತೆ ಎಲ್ಲಾ ಐದು ರಾಜ್ಯಗಳಲ್ಲೂ ಚುನಾವಣಾ ಕಣ ರಂಗೇರಿದೆ. ಇದೀಗ ದಿನಾಂಕ ಘೋಷಣೆಯಾಗಿರುವುದರಿಂದ ಚುನಾವಣೆ ಕಾವು ಹೆಚ್ಚಲಿದೆ. ಈ ಪಂಚ ರಾಜ್ಯ ಚುನಾವಣೆ ಇಡೀ ದೇಶದ ರಾಜಕೀಯ ದಿಕ್ಕನ್ನೇ ಬದಲಿಸುವ ಸಾಮರ್ಥ್ಯ ಹೊಂದಿದೆ ಎಂದು ವಿಶ್ಲೇಷಿಸಲಾಗಿದೆ. ಚುನಾವಣಾ ದಿನಾಂಕ ಘೋಷಣೆಯಾಗುತ್ತಿದ್ದಂತೇ ರಾಷ್ಟ್ರೀಯ ಮತ್ತು ಪ್ರಾದೇಶಿಕ ರಾಜಕೀಯ ಪಕ್ಷಗಳು ಚುರುಕುಗೊಂಡಿವೆ. ವ್ಯಾಪಕ ಪ್ರಚಾರ, ಮತದಾರರ ಓಲೈಕೆಗೆ ಕಸರತ್ತು ಶುರುಮಾಡಿವೆ.

ಪಶ್ಚಿಮ ಬಂಗಾಳದಲ್ಲಿ, ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ತೃಣಮೂಲ ಕಾಂಗ್ರೆಸ್(ಟಿಎಂಸಿ) ಸತತ ನಾಲ್ಕನೇ ಅವಧಿಗೆ ಅಧಿಕಾರ ಹಿಡಿಯಲು ಪ್ರಯತ್ನಿಸುತ್ತಿದ್ದರೆ, ಈ ಪಕ್ಷವನ್ನು ಅಧಿಕಾರದಿಂದ ಕೆಳಗಿಳಿಸಲು ಬಿಜೆಪಿ ರಣತಂತ್ರ ಹೆಣೆದಿದೆ. ಒಟ್ಟು 294 ವಿಧಾನಸಭಾ ಸ್ಥಾನಗಳನ್ನು ಹೊಂದಿರುವ ಪಶ್ಚಿಮ ಬಂಗಾಳ ಉಭಯ ಪಕ್ಷಗಳಿಗೂ ಪ್ರತಿಷ್ಠೆಯಾಗಿ ಪರಿಣಮಿಸಿದೆ.

ಇನ್ನು ದಕ್ಷಿಣದ ತಮಿಳುನಾಡಿನಲ್ಲಿ, ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರ ಡಿಎಂಕೆ ನೇತೃತ್ವದ ಜಾತ್ಯತೀತ ಪ್ರಗತಿಪರ ಮೈತ್ರಿಕೂಟ ಮತ್ತು ಬಿಜೆಪಿ–ಎಐಎಡಿಎಂಕೆ ಮೈತ್ರಿಕೂಟದ ನಡುವೆ ಭಾರೀ ಪೈಪೋಟಿ ನಡೆದಿದೆ. ರಾಜ್ಯದಲ್ಲಿ ಒಟ್ಟು 234 ವಿಧಾನಸಭಾ ಕ್ಷೇತ್ರಗಳಿದ್ದು, ಈ ಬಾರಿ ನಟ ಮತ್ತು ರಾಜಕಾರಣಿ ವಿಜಯ್ ಅವರ ಟಿವಿಕೆ ಪಕ್ಷವೂ ಅದೃಷ್ಟ ಪರೀಕ್ಷೆಗೆ ಇಳಿಯಲಿದೆ. ಕೇರಳದಲ್ಲಿ ಎಡ ಪ್ರಜಾಸತ್ತಾತ್ಮಕ ರಂಗ, ಕಾಂಗ್ರೆಸ್ ನೇತೃತ್ವದ ಸಂಯುಕ್ತ ಪ್ರಜಾಸತ್ತಾತ್ಮಕ ರಂಗ ಸೆಣೆಸಲಿದ್ದು, ಸತತ ಮೂರನೇ ಬಾರಿಗೆ ಅಧಿಕಾರಕ್ಕೇರಲು ಪ್ರಯತ್ನ ಆರಂಭಿಸಿದೆ. ಈ ಬಾರಿ ಬಿಜೆಪಿ ಪಕ್ಷವೂ ಕೇರಳದಲ್ಲಿ ಉತ್ತಮ ಸಾಧನೆ ಮಾಡುವ ವಿಶ್ವಾಸ ಹೊಂದಿದೆ. ಇತ್ತೀಚಿಗೆ ಕೇಂದ್ರ ಸರ್ಕಾರವು ಕೇರಳ ರಾಜ್ಯದ ಹೆಸರನ್ನು ಕೇರಳಂ ಎಂದು ಮರುನಾಮಕರಣ ಮಾಡುವ ಮೂಲಕ ಮತದಾರರ ಮನಮುಟ್ಟಲು ಪ್ರಯತ್ನಿಸಿದೆ.

ಪಂಚರಾಜ್ಯ ಚುನಾವಣೆ ಪ್ರಮುಖಾಂಶಗಳು

ಒಟ್ಟು ಕ್ಷೇತ್ರಗಳು	824
ಒಟ್ಟು ಮತದಾರರು	17.4 ಕೋಟಿ
ಪಶ್ಚಿಮ ಬಂಗಾಳ	6.44 ಕೋಟಿ
ತಮಿಳುನಾಡು	5.67 ಕೋಟಿ
ಕೇರಳ	2.70 ಕೋಟಿ
ಅಸ್ಸಾಂ	2.50 ಕೋಟಿ
ಪುದುಚೇರಿ	9.44 ಲಕ್ಷ

ನಟ ವಿಜಯ್‌ಗೆ ಡಿಸಿಎಂ ಸ್ಥಾನದ ಆಫರ್!

ಚೆನ್ನೈ: ತಮಿಳುನಾಡು ರಾಜಕೀಯದಲ್ಲಿ ಮಹತ್ವದ ಬೆಳವಣಿಗೆಗಳಾಗುತ್ತಿದ್ದು, ಈ ಬಾರಿ ಡಿಎಂಕೆಯನ್ನು ಮಣಿಸಲೇಬೇಕೆಂಬ ಪಣ ತೊಟ್ಟಿರುವ ಬಿಜೆಪಿ, ತನ್ನ ಮೈತ್ರಿಕೂಟವನ್ನು ವಿಸ್ತರಿಸಿಕೊಳ್ಳಲು ಮುಂದಾಗಿದೆ.



ವಿಜಯ್

ಈಗಾಗಲೇ ಡಿಎಂಕೆ ಪಕ್ಷದ ಎದುರಾಳಿಯಾಗಿರುವ ಎಐಎಡಿಎಂಕೆ ಜೊತೆ ಮೈತ್ರಿ ಮಾಡಿಕೊಂಡಿರುವ ಬಿಜೆಪಿ ಈಗ, ಚಿತ್ರ ನಟ ವಿಜಯ್ ಅವರ ತಮಿಳಗ ವೆಟ್ರಿ ಕಳಗಂ(ಟಿವಿಕೆ) ಪಕ್ಷವನ್ನೂ ತನ್ನತ್ತ ಸೆಳೆಯಲು ತಂತ್ರ ರೂಪಿಸಿದೆ. ಈಗಾಗಲೇ ಟಿವಿಕೆ ಜೊತೆಗೆ ಹಿಂಬಾಗಿಲ ಮೂಲಕ ಮಾತುಕತೆ ನಡೆಸುತ್ತಿದ್ದು, ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟ ಗೆದ್ದರೆ ತಮಿಳುನಾಡು ಉಪಮುಖ್ಯಮಂತ್ರಿ ಹುದ್ದೆಯನ್ನು ಟಿವಿಕೆ ಮುಖ್ಯಸ್ಥ ವಿಜಯ್ ಅವರಿಗೆ ನೀಡುವ ಆಫರ್ ಇಟ್ಟಿರುವುದಾಗಿ ಪಕ್ಷದ ಮೂಲಗಳು ತಿಳಿಸಿವೆ. ಪ್ರಸ್ತಾವಿತ ಸೀಟು ಹಂಚಿಕೆ ಒಪ್ಪಂದದ ಭಾಗವಾಗಿ, ಟಿವಿಕೆಗೆ ಸುಮಾರು 80 ಸ್ಥಾನಗಳನ್ನು ನೀಡಿದೆ. ಏತನ್ಮಧ್ಯೆ, ಎರಡೂ ಪಕ್ಷಗಳ ನಡುವಿನ ಮಾತುಕತೆಗಳು ಚುನಾವಣೆಗೆ ಮುಂಚಿತವಾಗಿ ಅಂತಿಮ ಹಂತಕ್ಕೆ ಬಂದಿವೆ ಎಂದು ಮೂಲಗಳಿಂದ ತಿಳಿದುಬಂದಿದ್ದು, ಇದು ಕಾರ್ಯರೂಪಕ್ಕೆ ಬಂದರೆ, ತಮಿಳುನಾಡಿನ ಚುನಾವಣಾ ಲೆಕ್ಕಾಚಾರಗಳು ಸಂಪೂರ್ಣ ಬದಲಾಗಲಿದೆ. ಬೇರೆ ರಾಜ್ಯದ ಉಪಮುಖ್ಯಮಂತ್ರಿ ಯೊಬ್ಬರು ಸಂಧಾನಕಾರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಹೇಳಲಾಗುತ್ತಿದೆ.

ಜೀವಂತವಾಗಿದ್ದರೆ ಹುಡುಕಿ ಕೊಲ್ತೇವೆ: ಇರಾನ್ ಪ್ರತಿಜ್ಞೆ

ಇರಾನ್ ಹೀಗೆ ಅಬ್ಬರಿಸಿದೆ. ಮಕ್ಕಳನ್ನು ಕೊಲ್ಲುವ ಈ ಅಪರಾಧಿ ಜೀವಂತವಾಗಿದ್ದರೆ, ನಾವು ಅವನನ್ನು ಪೂರ್ಣ ಬಲದಿಂದ ಬೆನ್ನಟ್ಟಿ ಹುಡುಕುತ್ತೇವೆ ಮತ್ತು ಕೊಂದೇ ತೀರುತ್ತೇವೆ ಎಂದು ಇರಾನ್‌ನ ಕ್ರಾಂತಿಕಾರಿ ಪಡೆಗಳು ಹೇಳಿಕೆಯಲ್ಲಿ ತಿಳಿಸಿವೆ. ಸಾಮಾಜಿಕ ಮಾಧ್ಯಮದಲ್ಲಿ ಸದ್ಯ ಬೆಂಜಮಿನ್ ನೆತನ್ಯಾಹು ಎಲ್ಲಿದ್ದಾರೆ ಎಂಬ ಬಗ್ಗೆ ವ್ಯಾಪಕ ಚರ್ಚೆಯಾಗುತ್ತಿರುವ ಬೆನ್ನಲ್ಲೇ ಇರಾನ್ ಈ ಪ್ರತಿಕ್ರಿಯೆ ನೀಡಿದೆ. ಇತ್ತ ನೆತನ್ಯಾಹು ಅವರು ಕೆಲವು ದಿನಗಳಿಂದ ಸಾರ್ವಜನಿಕವಾಗಿ ಕಾಣಿಸಿ ಕೊಂಡಿಲ್ಲ ಎಂದು ವರದಿಯಾಗಿದೆ.

ಎಐ ವಿಡಿಯೋ ಚರ್ಚೆ: ಬೆಂಜಮಿನ್ ನೆತನ್ಯಾಹು ಅವರ ಮಾರ್ಚ್ 12ರ ವಿಡಿಯೋದ ಬಗ್ಗೆ ಹಲವಾರು ಸಾಮಾಜಿಕ ಮಾಧ್ಯಮ ಬಳಕೆದಾರರು ಕಳವಳ ವ್ಯಕ್ತಪಡಿಸಿದ್ದಾರೆ. ವಿಡಿಯೋದಲ್ಲಿ ಬೆಂಜಮಿನ್ ಅವರ ಒಂದು ಕೈಯಲ್ಲಿ ಆರು ಬೆರಳುಗಳಿರುವಂತೆ ಕಂಡು ಬಂದಿದ್ದು, ಇದು ಎಐ ಬಳಸಿಕೊಂಡು ರಚಿಸಿರುವ ವಿಡಿಯೋ ಆಗಿರಬಹುದು ಎಂಬ ಅನುಮಾನ ಹುಟ್ಟು ಹಾಕಿದೆ. ಫೆ.28 ರಂದು ಇರಾನ್ ಮೇಲೆ ಅಮೆರಿಕ ಮತ್ತು ಇಸ್ರೇಲ್ ವೈಮಾನಿಕ ದಾಳಿಗಳು ಪ್ರಾರಂಭವಾದ ನಂತರ, 76 ವರ್ಷದ ನೆತನ್ಯಾಹು, ತಮ್ಮ ಮೊದಲ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡುತ್ತಿದ್ದರು. ಆ ವೇಳೆ ಇಸ್ರೇಲಿ ಮಿಲಿಟರಿಯ ಕಾರ್ಯಾಚರಣೆಗಳನ್ನು ಸಮರ್ಥಿಸಿಕೊಂಡು, ಇರಾನ್‌ನ ಹೊಸ ಸರ್ವೋಚ್ಚ ನಾಯಕ ಮೊಜ್ತಾಬಾ ಖಮೇನಿ ಅವರನ್ನೂ ಕೊಲ್ಲುವುದಾಗಿ ಪರೋಕ್ಷ ಬೆದರಿಕೆ ಹಾಕಿದ್ದರು.

ನಾವು ತೆಗೆದುಕೊಳ್ಳುತ್ತಿರುವ ಕ್ರಮಗಳನ್ನು ನಾನು ವಿವರಿಸುವುದಿಲ್ಲ. ಆದರೆ, ನಾವು ಇರಾನ್ ಸರ್ಕಾರವನ್ನು ದುರ್ಬಲಗೊಳಿಸಲು ಮತ್ತು ಅದರ ಪತನಕ್ಕೆ ಕಾರಣವಾಗುವ ಪರಿಸ್ಥಿತಿಗಳನ್ನು ಸೃಷ್ಟಿಸುತ್ತಿದ್ದೇವೆ. ಆದಾಗ್ಯೂ, ಇರಾನ್ ಆಡಳಿತವನ್ನು ವಾಸ್ತವವಾಗಿ ಉರುಳಿಸಲಾಗುತ್ತದೆ ಎಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಏಕೆಂದರೆ, ಆಡಳಿತ ಬದಲಾವಣೆಯು ಅಂತಿಮವಾಗಿ ದೇಶದ ಜನರಿಂದಲೇ ಸಂಭವಿಸುತ್ತದೆ, ಹೊರಗಿನ ಒತ್ತಡದಿಂದ ಮಾತ್ರವಲ್ಲ ಎಂದು ನೆತನ್ಯಾಹು ಹೀಬ್ರೂ ಭಾಷೆಯಲ್ಲಿ ಹೇಳಿದ್ದರು.

ಅಮೆರಿಕದ ಸಂಪ್ರದಾಯವಾದಿ ರಾಜಕೀಯ ನಿರೂಪಕಿ ಕ್ಯಾಂಡೇಸ್ ಓವೆನ್ ಸೇರಿದಂತೆ ಹಲವರು ನೆತನ್ಯಾಹು ಅವರನ್ನು ಅಡ್ಡಹೆಸರಿನಿಂದ ಉಲ್ಲೇಖಿಸಿ, 'ಬೀಬಿ ಎಲ್ಲಿದ್ದಾರೆ' ಎಂದು ಪ್ರಶ್ನಿಸಿದ್ದರು. ಅವರ ಕಚೇರಿಯು ಅವರ ನಕಲಿ ಎಐ ವಿಡಿಯೋಗಳನ್ನು ಏಕೆ ಬಿಡುಗಡೆ ಮಾಡುತ್ತಿದೆ ಮತ್ತು ಅಳಿಸುತ್ತಿದೆ ಮತ್ತು ಇದು ಶ್ವೇತಭವನದಲ್ಲಿ ವ್ಯಾಪಕ ಭೀತಿಯನ್ನು ಏಕೆ ಉಂಟುಮಾಡುತ್ತಿದೆ ಅವರು ಶನಿವಾರ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.


ಬೆಂಜಮಿನ್ ನೆತನ್ಯಾಹು ಅವರ ಕಚೇರಿ ಅವರ ಸಾವಿನ ವರದಿಗಳನ್ನು ನಿರಾಕರಿಸಿದ್ದು, ಅವರು 'ಆರೋಗ್ಯವಾಗಿದ್ದಾರೆ'. ಇವು ನಕಲಿ ಸುದ್ದಿಗಳು; ಪ್ರಧಾನಿ ಚೆನ್ನಾಗಿದ್ದಾರೆ ಎಂದು ಅವರ ಕಚೇರಿ ಟರ್ಕಿಯ ಅನಡೋಲು ಏಜೆನ್ಸಿಗೆ ನೆತನ್ಯಾಹು ಅವರನ್ನು ಹತ್ಯೆ ಮಾಡಲಾಗಿದೆ ಎಂದು ಸಾಮಾಜಿಕ ಮಾಧ್ಯಮದಲ್ಲಿನ ಚರ್ಚೆಗೆ ಪ್ರತಿಕ್ರಿಯಿಸಿದೆ. ಆದಾಗ್ಯೂ, ನೆತನ್ಯಾಹು ಅವರ ಕಚೇರಿ ಅಥವಾ ಅವರ ಸಹಾಯಕರು ಇಲ್ಲಿಯವರೆಗೆ ಯಾವುದೇ ಅಧಿಕೃತ ಹೇಳಿಕೆ ನೀಡಿಲ್ಲ.

ಮತ್ತೊಂದು ಜಲಮಾರ್ಗ ಮುಚ್ಚಲು ಚಿಂತನೆ: ಹಾರ್ಮುಜ್ ಜಲಸಂಧಿಯನ್ನು ಮುಚ್ಚಿ ಜಾಗತಿಕ ಮಟ್ಟದಲ್ಲಿ ತೈಲಬಿಕ್ಕಟ್ಟು ಉಂಟಾಗುವಂತೆ ಮಾಡಿರುವ ಇರಾನ್, ಈಗ ಮತ್ತೊಂದು ಜಲಮಾರ್ಗ ಮುಚ್ಚಲು ಸಿದ್ಧತೆ ನಡೆಸುತ್ತಿದೆ. ಬಾಬ್ ಎಲ್–ಮಂಡೇಬ್ ಕೂಡ ಮುಚ್ಚಲು ಮುಂದಾಗಿದೆ. ಟೆಹರಾನ್ ಮೇಲಿನ ದಾಳಿಗೆ ಪ್ರತಿಯಾಗಿ ಯೆಮೆನ್ ಹೌತಿ ಬಂಡುಕೋರರು ಇದನ್ನು ಮುಚ್ಚಿ ಜಾಗತಿಕ ವ್ಯಾಪಾರವನ್ನು ನಿಯಂತ್ರಿಸುವುದಾಗಿ ಎಚ್ಚರಿಸಿದ್ದಾರೆ. ಟೆಹರಾನ್ ಬೆಂಬಲಿತ, ಶಸ್ತ್ರಸಜ್ಜಿತ ಮತ್ತು ಪೋಷಿಸಲ್ಪಟ್ಟ ಉಗ್ರಗಾಮಿ ಗುಂಪು ಯೆಮೆನ್ ಮೂಲದ ಹೌತಿಗಳು ಸಂಘರ್ಷದಲ್ಲಿ ಇರಾನ್ ಜೊತೆ ಸೇರಿ ಬಾಬ್ ಎಲ್–ಮಂಡೇಬ್ ಜಲಸಂಧಿ ಯನ್ನು ಮುಚ್ಚಲು ಪ್ರಯತ್ನಿಸಲಿದೆ ಎನ್ನಲಾಗಿದೆ. ಈ ಜಲಸಂಧಿ ಮುಚ್ಚಿದರೆ ಜಾಗತಿಕ ವ್ಯಾಪಾರಕ್ಕೆ ಭಾರಿ ಅಡ್ಡಿ ಉಂಟಾಗುವ ಆತಂಕ ಎದುರಾಗಿದೆ.

ಯುದ್ಧನೌಕೆ ರವಾನಿಸಲು ಟ್ರಂಪ್ ಕರೆ: ಮಧ್ಯಪ್ರಾಚ್ಯದಲ್ಲಿ ಸಂಘರ್ಷ ಮುಂದುವರಿದಂತೆ ಹೊರ್ಮುಜ್ ಜಲಸಂಧಿಯಲ್ಲಿ ಹಡಗುಗಳ ಸಾರಿಗೆ ಸುರಕ್ಷಿತಗೊಳಿಸಲು ಯುದ್ಧನೌಕೆಗಳನ್ನು ರವಾನಿಸುವಂತೆ ಮಿತ್ರರಾಷ್ಟ್ರಗಳಿಗೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕರೆ ನೀಡಿದ್ದಾರೆ. ಈ ಮೊದಲು ಹೊರ್ಮುಜ್ ಜಲಸಂಧಿ ಮೂಲಕ ತೈಲ ನೌಕೆಗಳು ಸಾಗಲು ಅಡ್ಡಿಪಡಿಸಿದರೆ ಇರಾನ್‌ನ ಖಾರ್ಗ್ ದ್ವೀಪದಲ್ಲಿರುವ ತೈಲ ಘಟಕಗಳನ್ನು ಗುರಿಯಾಗಿಸಿ ದಾಳಿ ನಡೆಸುವುದಾಗಿ ಟ್ರಂಪ್ ಬೆದರಿಕೆ ಒಡ್ಡಿದ್ದರು. ಇದಕ್ಕೆ ಪ್ರತಿದಾಳಿ ನಡೆಸುವುದಾಗಿ ಇರಾನ್ ಎಚ್ಚರಿಸಿದೆ. ಅಲ್ಲದೆ ಯುಎಇನಲ್ಲಿರುವ ಮೂರು ಪ್ರಮುಖ ಬಂದರುಗಳಲ್ಲಿ ನಾಗರಿಕರನ್ನು ಸ್ಥಳಾಂತರಿಸುವಂತೆ ಬೆದರಿಕೆ ಒಡ್ಡಿದೆ. ಯುಎಇ ನೆಲೆಯನ್ನು ಬಳಸಿಕೊಂಡು ಅಮೆರಿಕ ತನ್ನ ವಿರುದ್ಧ ದಾಳಿ ನಡೆಸುತ್ತಿದ್ದು, ತಕ್ಕ ಪರಿಣಾಮ ಎದುರಿಸಬೇಕಾದಿತು ಎಂದು ತಿರುಗೇಟು ನೀಡಿದೆ. ದುಬೈ ಸಮೀಪದಿಂದ ಅಮೆರಿಕ ದಾಳಿ ನಡೆಸಿರು ವುದು ತುಂಬಾ ಅಪಾಯಕಾರಿ ನಿಲುವಾಗಿದೆ ಎಂದು ಹೇಳಿದೆ. ಅಲ್ಲದೆ ಅಮೆರಿಕದ ಮೂಲಸೌಕರ್ಯಗಳ ಮೇಲೆ ಪ್ರತಿದಾಳಿ ನಡೆಸುವುದಾಗಿ ಇರಾನ್ ಮಿಲಿಟರಿ ಎಚ್ಚರಿಸಿದೆ. ಈ ಮಧ್ಯೆ ತೈಲ ಬೆಲೆ, ಪೂರೈಕೆಗಳ ಬಗ್ಗೆ ಜಾಗತಿಕ ಆತಂಕ ಹೆಚ್ಚುತ್ತಿರುವ ಮಧ್ಯೆ, ಹೊರ್ಮುಜ್ ಜಲಸಂಧಿಯನ್ನು ಮುಕ್ತ ಹಾಗೂ ಸುರಕ್ಷಿತವಾಗಿರಿಸಿಕೊಳ್ಳಲು ಯುದ್ಧನೌಕೆಗಳನ್ನು ರವಾನಿಸುವಂತೆ ಚೀನಾ, ಫ್ರಾನ್ಸ್, ಜಪಾನ್, ದಕ್ಷಿಣ ಕೊರಿಯಾ, ಬ್ರಿಟನ್ ಹಾಗೂ ಇತರೆ ದೇಶಗಳಿಗೆ ಟ್ರಂಪ್ ಮನವಿ ಮಾಡಿದ್ದಾರೆ. ಈ ನಡುವೆ ವಿವಿಧ ಆಯ್ಕೆಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ಬ್ರಿಟನ್ ಪ್ರತಿಕ್ರಿಯಿಸಿದೆ.

ಡಾ.ಬನ್ನಂಜೆ ಗೋವಿಂದಾಚಾರ್ಯರು ದೊಡ್ಡ ವಿದ್ವಾಂಸರು ಮಾತ್ರವಲ್ಲ ದಾರ್ಶನಿಕರೂ ಹೌದು

ಬನ್ನಂಜೆ 90ರ ವಿಶ್ವನಮನ ಕಾರ್ಯಕ್ರಮದಲ್ಲಿ ವಿಶ್ರಾಂತ ಕುಲಪತಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ ಸ್ಮರಣೆ



ಮೈಸೂರಿನ ಕುವೆಂಪುನಗರದ ವೀಣೆ ಶೇಷಣ್ಣ ಭವನದ ರಮಾ ಗೋವಿಂದ್ ಕಲಾವೇದಿಕೆ ಸಭಾಂಗಣದಲ್ಲಿ ಭಾನುವಾರ 'ಆತ್ಮನಿವೇದನೆ' ಕೃತಿ ಬಿಡುಗಡೆ ಮಾಡಲಾಯಿತು.

ಮೈಸೂರು, ಮಾ.15(ಪಿಎಂ)– ಡಾ.ಬನ್ನಂಜೆ ಗೋವಿಂದಾಚಾರ್ಯರು ದೊಡ್ಡ ವಿದ್ವಾಂಸರು ಮಾತ್ರವಲ್ಲದೆ ದಾರ್ಶನಿಕರೂ ಆಗಿದ್ದರು ಎಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ ಸ್ಮರಿಸಿದರು.

ಮೈಸೂರಿನ ಕುವೆಂಪುನಗರದ ವೀಣೆ ಶೇಷಣ್ಣ ಭವನದ ರಮಾ ಗೋವಿಂದ್ ಕಲಾವೇದಿಕೆ ಸಭಾಂಗಣದಲ್ಲಿ ಪರಂಪರೆ ಮೈಸೂರು ಹಾಗೂ ಬನ್ನಂಜೆ ಗೋವಿಂದಾಚಾರ್ಯ ಪ್ರತಿಷ್ಠಾನ ಬೆಂಗಳೂರು ಜಂಟಿ ಆಶ್ರಯದಲ್ಲಿ ಬನ್ನಂಜೆ ಗೋವಿಂದಾಚಾರ್ಯರನ್ನು ಕುರಿತು ಭಾನುವಾರ ಹಮ್ಮಿಕೊಂಡಿದ್ದ 'ಬನ್ನಂಜೆ 90ರ ವಿಶ್ವನಮನ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬನ್ನಂಜೆ ಗೋವಿಂದಾಚಾರ್ಯ ಅವರ ಜ್ಞಾನದ ಆಳ ಮತ್ತು ವಿಸ್ತಾರ ದೊಡ್ಡದು. ಅನೇಕ ವಿಷಯಗಳಲ್ಲಿ ಅವರಿಗಿದ್ದ ಪ್ರಬುದ್ಧತೆ ಮತ್ತು ಧಾರಣಾಶಕ್ತಿ ಅಮೂಲ್ಯವಾದುದು ಮತ್ತು ವಿಸ್ಮಯ ಕೂಡ. ಕನ್ನಡ, ಸಂಸ್ಕೃತ, ಪ್ರಾಕೃತ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಅವರಿಗಿದ್ದ ತಳಸ್ಪರ್ಶಿಯಾದ ಜ್ಞಾನ ಅದ್ಭುತವಾದುದು. ಇಂತಹ ಜ್ಞಾನ ಹೊಂದಿದ ಭಾರತದ ಅಪರೂಪದ ವಿದ್ವಾಂಸದಲ್ಲಿ ಬನ್ನಂಜೆ ಸಹ ಒಬ್ಬರು ಎಂದರು.

ಬನ್ನಂಜೆಯವರು ಆಧುನಿಕ ಕಾಲದಲ್ಲಿ ಪ್ರಾಚೀನ ಪರಂಪರೆಯನ್ನು ತಮ್ಮ ವೈಚಾರಿಕ ದೃಷ್ಟಿಕೋನದಲ್ಲಿ ಹೇಳುತ್ತಿದ್ದವರು. ಪ್ರಾಚೀನ ಸಾಹಿತ್ಯ ಹಾಗೂ ಋಷಿ ಪರಂಪರೆಯ ಮೌಲ್ಯಗಳನ್ನು ಸಮಕಾಲೀನಗೊಳಿಸಿ ಇಂದಿನ ಸಂದರ್ಭಕ್ಕೆ ಅವುಗಳ ಪ್ರಸ್ತುತತೆಯನ್ನು ತಮ್ಮ ಉಪನ್ಯಾಸ, ಬರಹಗಳಲ್ಲಿ ಪ್ರತಿಬಿಂಬಿಸುತ್ತಿದ್ದರು. ಉಪನಿಷತ್‌ಗಳ ಕುರಿತು ಅವರು ಮಾಡಿದ ಪ್ರವಚನಗಳಂತೂ ಪ್ರಸಿದ್ಧಿ ಹೊಂದಿವೆ. ಅನೇಕರು ಅವರ ಉಪನ್ಯಾಸ ಕೇಳಿ ಬೆರಗುಗೊಂಡಿದ್ದಾರೆ ಎಂದು ತಿಳಿಸಿದರು.

ಅವರ ಸಂಸ್ಕೃತ ವಿದ್ವತ್ತು ತುಂಬ ವಿಶಿಷ್ಟವಾದುದು. ಅವರು ವ್ಯಾಖ್ಯಾನ, ಸೂತ್ರಗಳ ರಚನೆಯಲ್ಲಿ ಮಹತ್ತರ ಕೆಲಸ ಮಾಡಿದ್ದಾರೆ. ಸೂತ್ರ, ಭಾಷ್ಯ ಹಾಗೂ ವ್ಯಾಖ್ಯಾನ ಬರೆದು ವಿಶಿಷ್ಟ ಛಾಪು ಮೂಡಿಸಿದ್ದಾರೆ. 150ಕ್ಕೂ ಹೆಚ್ಚು ಕೃತಿಗಳನ್ನು ಅವರು ರಚಿಸಿದ್ದಾರೆ. ಅವರ 'ಸತ್ತರುದ್ರಿಯರು' ಪ್ರಾಚೀನ ಸಂಪ್ರದಾಯದ ರೀತಿಯಲ್ಲಿ ಬರೆದಂತಹ ಅಪೂರ್ವ ಕೃತಿ. ಸ್ವ ಅಧ್ಯಯನ ಎನ್ನುವುದು ಅವರ ಮೂಲ ಪ್ರವೃತ್ತಿಯಾಗಿತ್ತು. ಯಾವುದನ್ನು ಸ್ವ ಅಧ್ಯಯನ ಮಾಡದೇ ಒಪ್ಪುತ್ತಿರಲಿಲ್ಲ. ಇಂತಹ ಮಹಾನುಭಾವ ನಮ್ಮ ಕಾಲದಲ್ಲಿ ನಮ್ಮೊಡನೆ ಇದ್ದರು ಎಂಬುದೇ ಹೆಮ್ಮೆ ಹಾಗೂ ಸೌಭಾಗ್ಯ ಎಂದರು.

ಅವರ 90ರ ವಿಶ್ವನಮನ ಕಾರ್ಯಕ್ರಮ ಮಾಡಬೇಕೆಂಬುದು ವೀಣಾ ಬನ್ನಂಜೆಯವರ ಕಲ್ಪನೆಯಾಗಿದ್ದು, ಅವರು ಅಪ್ಪ ಎಲ್ಲೆಲ್ಲಿ ಉಪನ್ಯಾಸ ಮಾಡಿದಾರೋ ಅಂತಹ ಸ್ಥಳಗಳಲ್ಲಿ ವರ್ಷಪೂರ್ತಿ ಕಾರ್ಯಕ್ರಮ ಹಮ್ಮಿಕೊಳ್ಳಬೇಕೆಂಬ ಇಂಗಿತ ವ್ಯಕ್ತಪಡಿಸಿದರು. ಅಂತೆಯೇ ಕಳೆದ ವರ್ಷ ಆಗಸ್ಟ್ ತಿಂಗಳಲ್ಲಿ ಕಾರ್ಯಕ್ರಮ ಪ್ರಾರಂಭ ಮಾಡಿದೆವು. ಮುಂದಿನ ತಿಂಗಳು ಚಿಕ್ಕಮಗಳೂರಿನಲ್ಲಿ ಈ ಕಾರ್ಯಕ್ರಮ ಆಯೋಜಿಸಲಿದ್ದೇವೆ ಎಂದರು.

ಬನ್ನಂಜೆಯವರ ಜೊತೆಗಿನ ಒಟನಾಟ ಕುರಿತು ಮಾತನಾಡಿದ ಗಂಜೀಫಾ ಕಲೆಯ ಖ್ಯಾತ ಕಲಾವಿದ ರಘುಪತಿ ಭಟ್, ನಾನು ಬನ್ನಂಜೆ ಅವರ ಜೊತೆ ಸುಮಾರು ವರ್ಷಗಳ ಕಾಲ ಒಡನಾಟದಲ್ಲಿದ್ದೆ. ಕಷ್ಟ ಸುಖಗಳನ್ನು ಅವರೊಂದಿಗೆ ಹಂಚಿಕೊಳ್ಳುತ್ತಿದ್ದೆ. ಚಿತ್ರಕಲೆ ಹಾಗೂ ಆಧ್ಯಾತ್ಮ ವಿಚಾರಗಳ ಬಗ್ಗೆ ಚರ್ಚೆ ಮಾಡುತ್ತಿದ್ದೆ. ದುಃಖದ ವಿಚಾರ ಎಂದರೆ ಅವರನ್ನು ಕೊನೆ ಬಾರಿಗೆ ನೋಡಿದಾಗ ಅವರು ಕೈನೋವಿನಿಂದ ಬಳಲುತ್ತಿದ್ದರು ಎಂದು ನೊಂದು ನುಡಿದರು.

ನಾನು ಚಿತ್ರಗಳನ್ನು ಬರೆಯಬೇಕಾದರೆ ಬನ್ನಂಜೆಯವರು ಯೋಗ ಭಂಗಿಗಳನ್ನು ಹಾಕಿ ತೋರಿಸುತ್ತಿದ್ದರು. ಅವರನ್ನು ನಾನು ಮೊದಲು ಭೇಟಿ ಮಾಡಿದ್ದು 1989ರಲ್ಲಿ ಇರಬೇಕು. ಆಗ ನಾನು ತರಂಗದಲ್ಲಿ ಭೈರಪ್ಪನವರ ಕಾದಂಬರಿಯೊಂದಕ್ಕೆ ಚಿತ್ರ ಬರೆಯುತ್ತಿದ್ದೆ. ಸ್ವತಃ ಬನ್ನಂಜೆಯವರು ಕಲಾವಿದರೂ ಆಗಿದ್ದರು ಎಂದು ಸ್ಮರಿಸಿದರು.

ಇದಕ್ಕೂ ಮುನ್ನ ಬನ್ನಂಜೆ ಗೋವಿಂದಾಚಾರ್ಯರು ನಿವೇದಿಸಿದ ಆತ್ಮಕಥನ 'ಆತ್ಮನಿವೇದನೆ' (ನಿರೂಪಣೆ–ಬನ್ನಂಜೆ ಗೋವಿಂದಾಚಾರ್ಯರು, ಬರಹ–ವೀಣಾ ಬನ್ನಂಜೆ/ಎರಡನೇ ಮುದ್ರಣ) ಬಿಡುಗಡೆ ಮಾಡಲಾಯಿತು. ಪ್ರಾರಂಭದಲ್ಲಿ 'ಬನ್ನಂಜೆಯವರ ಹಾಡುಗಬ್ಬ' ಶೀರ್ಷಿಕೆಯಡಿ ಕವಿತಾ ಉಡುಪ ಹಾಗೂ ಸುಮಾ ಶಾಸ್ತ್ರಿ ಗಾಯನ ಕಾರ್ಯಕ್ರಮ ನಡೆಸಿಕೊಟ್ಟರು. ಹಿರಿಯ ಸಂಸ್ಕೃತ ವಿದ್ವಾಂಸ ವಿದ್ವಾನ್ ಡಾ.ಹೆಚ್.ವಿ. ನಾಗರಾಜ ರಾವ್ ಅಧ್ಯಕ್ಷತೆ ವಹಿಸಿದ್ದರು. ಆಕಾಶವಾಣಿ ನಿವೃತ್ತ ನಿರ್ದೇಶಕಿ ಜಯಶ್ರೀ ಶ್ಯಾನಭಾಗ್, ಸಂಸ್ಕೃತ ವಿದ್ವಾಂಸ ಗ.ನಾ.ಭಟ್ಟ, ವೀಣಾ ಬನ್ನಂಜೆ ಮತ್ತಿತರರು ಹಾಜರಿದ್ದರು.

ಅಭಿನಂದನೆ



ಮೈಸೂರು ಜಿಲ್ಲಾ ಗಾಣಿಗರ ಸಂಘದ ವತಿಯಿಂದ ರಾಜ್ಯ ಗಾಣಿಗ ಅಭಿವೃದ್ಧಿ ನಿಗಮ ಮಂಡಳಿಗೆ ನೂತವಾಗಿ ಆಯ್ಕೆಯಾಗಿರುವ ಮೈಸೂರಿನ ಮಾಜಿ ಮೇಯರ್ ಅನಂತು ಅವರನ್ನು ಸನ್ಮಾನಿಸಿ, ಅಭಿನಂದಿಸಲಾಯಿತು. ಈ ವೇಳೆ ನಗರಪಾಲಿಕೆ ಮಾಜಿ ಸದಸ್ಯ ಎಸ್.ಎಂ.ನಂದಕುಮಾರ್, ಗಾಣಿಗ ಸಮುದಾಯದ ಮುಖಂಡರಾದ ಯೋಗೇಶ್, ಸ್ವಾಮಿ, ರಘು, ವೆಂಕಟೇಶ್, ಪಾರ್ಥಸಾರಥಿ, ಮಹೇಶ್, ಬ್ಯಾಂಕ್ ವಿಜಯ್ ಕುಮಾರ್, ಚಂದ್ರಶೇಖರ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಮಹಿಳೆಯರ ಸ್ಥಾನಮಾನಕ್ಕೆ ಹೆಚ್ಚಿನ ಆದ್ಯತೆ ನೀಡಿ



ನಾಪೋಕ್ಲು ಕೊಡವ ಸಮಾಜದಲ್ಲಿ ಆಯೋಜಿಸಲಾಗಿದ್ದ ಪೊಮ್ಮಕ್ಕಳ ನಾಳ್ ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು.

ನಾಪೋಕ್ಲು, ಮಾ.15– ಸಮಾಜದಲ್ಲಿ ಮಹಿಳೆಯರ ಸ್ಥಾನಮಾನದ ಸುಧಾರಣೆಗೆ ಹೆಚ್ಚಿನ ಒತ್ತು ನೀಡಬೇಕಾಗಿದೆ ಎಂದು ಮೈಸೂರಿನ ಪ್ರಾದೇಶಿಕ ಭವಿಷ್ಯ ನಿಧಿ ಕಾರ್ಯಾಲಯದ ಮುಂಡಂಡ ಮೈನಾ ಮುತ್ತಮ್ಮ ತಿಳಿಸಿದ್ದಾರೆ.

ಇಲ್ಲಿನ ಕೊಡವ ಸಮಾಜದ ಮೊಮ್ಮಕ್ಕಡ ಪರಿಷತ್ ವತಿಯಿಂದ ಭಾನುವಾರ ಕೊಡವ ಸಮಾಜದ ಹರದಾಸ ಅಪ್ಪನೆರವಂಡ ಅಪ್ಪಚ್ಚ ಕವಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಪೊಮ್ಮಕ್ಕಳ ನಾಳ್ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಮಾಜದ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ ಪ್ರಮುಖವಾಗಿದ್ದರೂ ಶೋಷಣೆಗೆ ಒಳಗಾಗುತ್ತಿರುವ ಮಹಿಳೆಯರ ಸ್ಥಾನಮಾನದ ಬಗ್ಗೆಯೂ ಗಮನಹರಿಸಬೇಕು ಎಂದರು.

ಮಹಿಳೆಯರು ಮಕ್ಕಳಿಗೆ ಸಂಸ್ಕೃತಿಯನ್ನು ಕಲಿಸಿ. ಉತ್ತಮ ಕೌಶಲ್ಯಗಳನ್ನು ಕಲಿಸಲು ಮಹಿಳೆಯರು ಮುಂದಾಗಬೇಕು ಇಂದು ಉದ್ಯೋಗ ಅನಿವಾರ್ಯವಾಗಿದ್ದು ಉತ್ತಮ ಶಿಕ್ಷಣದಿಂದ ಮಾತ್ರ ಉದ್ಯೋಗಾವಕಾಶವನ್ನು ಪಡೆದುಕೊಳ್ಳಲು ಸಾಧ್ಯ ಎಂದರು. ಆದರ್ಶ ಶಿಕ್ಷಕಿ ಸಾವಿತ್ರಿಬಾಯಿ ಪುಲೆ ರೀತಿಯಲ್ಲೇ ಮಹಿಳೆಯರು ಜಾಗೃತರಾಗಿ ಸಮಾಜ ಸುಧಾರಣೆಗೆ ತಮ್ಮದೇ ಆದ ಕೊಡುಗೆಗಳನ್ನು ನೀಡಬೇಕು ಎಂದರು.

ಸಮಾಜದಲ್ಲಿ ಮಹಿಳೆಯರು ವಿವಿಧ ಸವಾಲುಗಳನ್ನು ಎದುರಿಸುತ್ತಿದ್ದಾರೆ. ಅಂತಹ ಸವಾಲುಗಳನ್ನು ಮೆಟ್ಟಿನಿಂತು ಮಹಿಳೆಯರು ಸಾಧನೆ ಮಾಡಬೇಕಾಗಿದೆ ಎಂದು ರಾಷ್ಟ್ರ ಪ್ರಶಸ್ತಿ ವಿಜೇತೆ ಕೊಟ್ಟು ಕತ್ತಿರ ಯಶೋಧ ಪ್ರಕಾಶ್ ಹೇಳಿದರು. ಸಂಸಾರವನ್ನು ಸಮತೋಲನದಲ್ಲಿ ಸಾಗಿಸುವ ಜವಾಬ್ದಾರಿ ಮಹಿಳೆಯರದ್ದಾಗಿದೆ. ಸಮಾಜದಲ್ಲಿ ಹತ್ತು ಹಲವು ಸವಾಲುಗಳನ್ನು ಎದುರಿಸುತ್ತಿರುವ ಮಹಿಳೆಯರು ಅವುಗಳನ್ನು ಧನಾತ್ಮಕ ಮನೋಭಾವದಿಂದ ಸ್ವೀಕರಿಸಿ ಮುನ್ನಡೆಯಬೇಕು ಎಂದು ಹೇಳಿದರು

ನಿವೃತ್ತ ಬ್ಯಾಂಕು ಉದ್ಯೋಗಿ ಮೂವೇರ ಮೀನ ಕಾರ್ಯಪ್ಪ ಮಾತನಾಡಿ ಮಹಿಳೆಯರು ಸ್ವಂತ ವ್ಯಕ್ತಿತ್ವವನ್ನು ಬಳಸಿಕೊಳ್ಳಬೇಕು. ಮಹಿಳೆ ತಾನು ತನ್ನ ಕುಟುಂಬದ ನಿರ್ವಹಣೆಯನ್ನು ಸರಿಯಾಗಿ ಮಾಡಿದರೆ ಸಮಾಜದ ಸುಧಾರಣೆ ಮಾಡಿದಂತೆ. ಕುಟುಂಬ ನಿರ್ವಹಣೆಯ ಜೊತೆಗೆ ಮಕ್ಕಳಿಗೆ ಉತ್ತಮ ಶಿಕ್ಷಣ ಸಂಸ್ಕಾರ ಸಂಸ್ಕೃತಿಯನ್ನು ನೀಡುವ ಜವಾಬ್ದಾರಿ ಮಹಿಳೆಯರದ್ದು ಎಂದರು..

ನಾಪೋಕ್ಲು ಕೊಡವ ಸಮಾಜ ಪೊಮ್ಮಕಡ ಪರಿಷತ್ ಅಧ್ಯಕ್ಷೆ ಬಾಳೆಯಡ ನಿಶಾ ಮೇದಪ್ಪಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ರಾಷ್ಟ್ರಪ್ರಶಸ್ತಿ ವಿಜೇತ ಕೊಟ್ಟು ಕತ್ತಿರ ಯಶೋಧ ಪ್ರಕಾಶ್ ನಿವೃತ್ತ ಲೆಫ್ಟಿನೆಂಟ್ ಕರ್ನಲ್ ತೊತ್ಯಂಡ ಸಬಿತರನ್ನು ಮೊಮ್ಮಕ್ಕಡ ಪರಿಷತ್ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು..

ಅರೆಯಡ ಸರಸು ಪೆಮ್ಮಯ್ಯ ಪ್ರಾರ್ಥಿಸಿ ಕೋಟೆರ ಝಾನ್ಸಿ ವೇದಪ್ಪ ಸ್ವಾಗತಿಸಿದರು ಅತಿಥಿಗಳ ಪರಿಚಯ ನಾಯಕಡ ಜುಬಿ ತಿಮ್ಮಯ್ಯ. ಪೆಮ್ಮಂಡ ಕೌಶಿ ದಿನೇಶ್. ಕಾಂಡಂಡ ಪ್ರತಿಜಾ ಅಚ್ಚಪ್ಪ. ಮುಕ್ಕಾಟಿರ ರೇಷ್ಮಾ ಮೋಹನ್. ಮಾಡಿದರು. ಬಿದ್ದಾಟಂಡ ಮಮತಾ ಚಿಣ್ಣಪ್ಪ, ಕದ್ದನಿಯಂಡ ವಂದನಾ ಚಿನ್ನಪ್ಪ ಕಾರ್ಯಕ್ರಮ ನಿರೂಪಿಸಿದರು. ಕಲಿಯಂಡ ಗೀತಾ ಗಿರೀಶ್ ವಂದಿಸಿದರು. ಈ ಸಂದರ್ಭ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು..

ಮಹಿಳೆಯರ ಪ್ರತಿಭೆಗೆ ಸೂಕ್ತ ವೇದಿಕೆ ಸಿಕ್ಕಿಲ್ಲ

ಸಾಹಿತಿ ಪೂಜಾರಿರ ಕೃಪಾ ದೇವರಾಜ್ ಅಭಿಮತ



ಮೂರ್ನಾಡು ಗೌಡ ಮಹಿಳಾ ಒಕ್ಕೂಟ ಆಯೋಜಿಸಿದ್ದ ಮಹಿಳಾ ದಿನಾಚರಣೆಯಲ್ಲಿ ಸಾಹಿತಿ ಪೂಜಾರಿರ ಕೃಪಾ ದೇವರಾಜ್ ಮಾತನಾಡಿದರು.

ನಾಪೋಕ್ಲು, ಮಾ.15 (ದುಗ್ಗಳ)– ಮಹಿಳೆಯರ ನಡುವೆ ಒಗ್ಗಟ್ಟು, ಆತ್ಮವಿಶ್ವಾಸ ಮತ್ತು ನಾಯಕತ್ವ ಬೆಳೆಯಲು ಮಹಿಳಾ ಒಕ್ಕೂಟ ಶಕ್ತಿಯುತ ವೇದಿಕೆ ಆಗಬೇಕು ಎಂದು ಕವಿ ಮತ್ತು ಸಾಹಿತಿ ಪೂಜಾರಿರ ಕೃಪಾ ದೇವರಾಜ್ ಹೇಳಿದರು.

ಮೂರ್ನಾಡು ಗೌಡ ಮಹಿಳಾ ಒಕ್ಕೂಟ ವತಿಯಿಂದ ಮೂರ್ನಾಡು ಪ್ರಕೃತಿ ಕಾಂಪ್ಲೆಕ್ಸ್‌ನಲ್ಲಿ ವಿಶ್ವ ಮಹಿಳಾ ದಿನಾಚರಣೆ ಮತ್ತು ಗೌಡ ಮಹಿಳಾ ಒಕ್ಕೂಟ ಉದ್ಘಾಟಿಸಿ ಮಾತನಾಡಿದ ಅವರು, ಇತಿಹಾಸ ನೋಡಿದರೆ ಮಹಿಳೆಯರು ಯಾವಾಗಲೂ ಸಮಾಜದ ನಿರ್ಮಾಣದಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. ಆದರೆ ಹಲವಾರು ಸಂದರ್ಭಗಳಲ್ಲಿ ಅವರ ಪ್ರತಿಭೆ ಹಾಗೂ ಸಾಮರ್ಥ್ಯಕ್ಕೆ ಸರಿಯಾದ ವೇದಿಕೆ ದೊರಕಿಲ್ಲ. ಅಂತಹ ಸಮಯದಲ್ಲಿ ಈ ಮಹಿಳಾ ಒಕ್ಕೂಟ ಮಹಿಳೆಯರಿಗೆ ಒಂದು ಹೊಸ ದಾರಿ ತೋರಿಸುವ ವೇದಿಕೆಯಾಗಲಿದೆ ಎಂದು ತಿಳಿಸಿದರು.

ಮನೋರಂಜನೆ ಕ್ರೀಡೆಯನ್ನು ಉದ್ಘಾಟಿಸಿದ ಹಾಕತ್ತೂರ್ ಮುಖ್ಯ ಶಿಕ್ಷಕರಾದ ತೆಕ್ಕಡೆ ಕುಮಾರಸ್ವಾಮಿ ಮಾತನಾಡಿ, ಕ್ರೀಡೆಗಳು ಕೇವಲ ಗೆಲುವಿಗಾಗಿ ಅಲ್ಲ; ಒಗ್ಗಟ್ಟು, ಸ್ನೇಹ ಮತ್ತು ಆತ್ಮವಿಶ್ವಾಸವನ್ನು ಹೆಚ್ಚಿಸಲು ಸಹಾಯ ಮಾಡುತ್ತವೆ ಎಂದರು.

ಮುಖ್ಯ ಭಾಷಣಕಾರರಾಗಿ ಮಾತಾಡಿದ ರಾಜ್ಯ ಕೃಷಿ ಪ್ರಶಸ್ತಿ ಪುರಸ್ಕೃತರಾದ ಕಟ್ಟೆಮನೆ ಪ್ರೇಮಗಣೇಶ್ ಮಾತನಾಡಿ ಮಹಿಳೆಯರು ಎಲ್ಲ ಕ್ಷೇತ್ರದಲ್ಲೂ ಶ್ರಮಿಸುತ್ತಿದ್ದರೂ ಹಲವಾರು ಬಾರಿ ಅವರ ಶ್ರಮಕ್ಕೆ ಸಿಗ ಬೇಕಾದ ಗೌರವ ಸಿಗುತ್ತಿಲ್ಲ ಇಂತಹ ಸಮಯದಲ್ಲಿ ಮಹಿಳಾ ಒಕ್ಕೂಟಗಳು ಶಕ್ತಿಯುತ ವೇದಿಕೆಯಾಗಬೇಕು ಎಂದರು

ಸಂಘದ ಅಭಿವೃದ್ಧಿಗೆ ಕಾರಣಕರ್ತರಾದ ಮೆರ್ಕಜ್ಜೆ ಲೋಹಿತ್ ಸೋಮಯ್ಯ ಹಾಗೂ ಮೆರ್ಕಜ್ಜೆ ಕೃತಿಕಾ ಪ್ರಮೋದ್ ಅವರನ್ನು ಸನ್ಮಾನಿಸಲಾಯಿತು.

ಗೌಡ ಮಹಿಳಾ ಒಕ್ಕೂಟದ ಅಧ್ಯಕ್ಷೆ ಕಲ್ಲುಮುಟ್ಲು ಜಶ್ಮಿ ಚಿಂತು ಅಧ್ಯಕ್ಷತೆ ವಹಿಸಿದ್ದರು. ತೆಕ್ಕಡೆ ಭವ್ಯ ಮಹಿಳಾ ದಿನಾಚರಣೆಯ ಬಗ್ಗೆ ಮಾತನಾಡಿದರು. ಮೂರ್ನಾಡ್ ಗೌಡ ಸಮಾಜದ ಅಧ್ಯಕ್ಷರು ಆದ ಪಾಣತ್ತಲೆ ಹರೀಶ್, ಕಾರ್ಯದರ್ಶಿ ಮೆರ್ಕಜ್ಜೆ ಲೋಹಿತ್ ಸೋಮಯ್ಯ ಸೇರಿದಂತೆ ಸಮಾಜ ಬಾಂಧವರು ಉಪಸ್ಥಿತರಿದ್ದರು.

ತೆಕ್ಕಡೆ ಆಶಾ, ಕಲ್ಲುಮುಟ್ಲು ಲತಾ, ಜಯ ಮಾಲಾ ಪ್ರಾರ್ಥನೆ ನೆರವೇರಿಸಿ. ಮುಕ್ಕಾಟಿ ಚುಷ್ಮಾ ಸ್ವಾಗತಿಸಿದರು, ಅಂಚೆಮನೆ ದಮಯಂತಿ ಅವರು ಕಾರ್ಯಕ್ರಮವನ್ನು ನಿರೂಪಿಸಿದರು. ಬೈಲೋಳಿ ಮೇನಕಾ ಅವರು ವಂದಿಸಿದರು.

ಮಾ.21, ಸಿಎನ್‌ಸಿಯಿಂದ ವಿಚಾರ ಸಂಕಿರಣ

ಮಡಿಕೇರಿ, ಮಾ.15–ವಿಶ್ವ ಜನಾಂಗೀಯ ತಾರತಮ್ಯ ನಿರ್ಮೂಲನಾ ದಿನವಾದ ಮಾ.21 ರಂದು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆಯ ವತಿಯಿಂದ ಮಡಿಕೇರಿ ಹೊರ ವಲಯದ ಕ್ಯಾಪಿಟಲ್ ವಿಲೇಜ್ ನಲ್ಲಿ ವಿಚಾರ ಸಂಕಿರಣ ನಡೆಯಲಿದೆ ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ತಿಳಿಸಿದ್ದಾರೆ.



ಎನ್.ಯು.ನಾಚಪ್ಪ

ಪ್ರಕೃತಿ ಆರಾಧಕ ಕೊಡವರಿಗಾಗಿ ಸಂವಿಧಾನದ ಅಡಿಯಲ್ಲಿ "ಭೂ–ರಾಜಕೀಯ ಸ್ವಾಯತ್ತೆ" ಮತ್ತು "ವಿಶೇಷ ಸ್ಥಾನಮಾನ"ಕ್ಕಾಗಿ ಹಮ್ಮಿಕೊಂಡಿರುವ "ಕೊಡವ ಕ್ವೆಸ್ಟ್" ವಿಚಾರ ಸಂಕಿರಣದಲ್ಲಿ ಶಾಸನ ರೂಪಿಸುವವರು, ನ್ಯಾಯವಾದಿಗಳು ಹಾಗೂ ಶಿಕ್ಷಣ ತಜ್ಞರು ಚರ್ಚಿಸಲಿದ್ದಾರೆ ಎಂದು ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಇದೀಗ ಕೊಡವರ ಹಕ್ಕುಗಳು, ಸ್ವಯಂ ಆಡಳಿತ ಮತ್ತು ಸ್ವಾಯತ್ತತೆಯನ್ನು ಎತ್ತಿ ತೋರಿಸುವ ಉದ್ದೇಶದಿಂದ ಸಿಎನ್‌ಸಿ ಆಯೋಜಿಸಿರುವ ಈ ವಿಚಾರ ಸಂಕಿರಣವು ಒಂದು ಮಹತ್ವದ ಹೆಜ್ಜೆಯಾಗಿದೆ. ರಾಷ್ಟ್ರೀಯ ಜನಗಣತಿಯಲ್ಲಿ ಕೊಡವರಿಗಾಗಿ ಪ್ರತ್ಯೇಕ ಕೋಡ್ ಮತ್ತು ಕಾಲಮ್ ಅನ್ನು ಕೋರುವ ಮೂಲಕ, ಸಾಂವಿಧಾನಿಕ ಹಕ್ಕುಗಳಿಗೆ ಬಲವಾದ ಅಡಿಪಾಯವನ್ನು ಸ್ಥಾಪಿಸುವ ಗುರಿ ಸಿಎನ್‌ಸಿ ಹೊಂದಿದೆ..ವಿಚಾರಣ ಸಂಕಿರಣದ ಮೂಲಕ ವಿಶ್ವ ಜನಾಂಗೀಯ ತಾರತಮ್ಯ ನಿರ್ಮೂಲನಾ ದಿನವನ್ನು ಅರ್ಥಪೂರ್ಣಗೊಳಿಸಲಾಗುವುದು ಎಂದು ಎನ್.ಯು.ನಾಚಪ್ಪ ತಿಳಿಸಿದ್ದಾರೆ.

ಡಿಪೋ ವ್ಯವಸ್ಥಾಪಕರಿಗೆ ಎಐಟಿಯುಸಿ ಅಭಿನಂದನೆ



ನೂತನ ಡಿಪೋ ವ್ಯವಸ್ಥಾಪಕ ರಾಮ್ ಚಂದ್ ದರ್ಶನ್ ಅವರನ್ನು ಎಐಟಿಯುಸಿ ಪದಾಧಿಕಾರಿಗಳು ಅಭಿನಂದಿಸಿದರು.

ಮಡಿಕೇರಿ, ಮಾ.15–ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಪುತ್ತೂರು ವಿಭಾಗದ ಮಡಿಕೇರಿ ಘಟಕದ ಡಿಪೋ ವ್ಯವಸ್ಥಾಪಕರಾಗಿ ಅಧಿಕಾರ ವಹಿಸಿಕೊಂಡ ರಾಮ್ ಚಂದ್ ದರ್ಶನ್ ಅವರನ್ನು ಯುನೈಟೆಡ್ ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್ (ಎಐಟಿಯುಸಿ) ಸಂಘಟನೆಯ ಜಿಲ್ಲಾಧ್ಯಕ್ಷ ಹೆಚ್.ಎಂ.ಸೋಮಪ್ಪ ಹಾಗೂ ಪದಾಧಿಕಾರಿಗಳು ಭೇಟಿಯಾಗಿ ಅಭಿನಂದಿಸಿದರು.

ಕೆಎಸ್‌ಆರ್‌ಟಿಸಿ ಮಡಿಕೇರಿ ಘಟಕದ ಎಟಿಸಿ ಪದಾಧಿಕಾರಿಗಳು ಹಾಗೂ ಸಿಬ್ಬಂದಿಗಳು ಹಾಜರಿದ್ದರು. ರಾಮ್ ಚಂದ್ ದರ್ಶನ್ ಅವರು ಈ ಹಿಂದೆ ಪಿರಿಯಾಪಟ್ಟಣ ಘಟಕದಲ್ಲಿ ಘಟಕ ವ್ಯವಸ್ಥಾಪಕರಾಗಿ ಸೇವೆ ಸಲ್ಲಿಸಿದ್ದರು.

ಆಧುನಿಕತೆಯಿಂದ ಪ್ರಕೃತಿಯೊಂದಿಗಿನ ಬಾಳು ಕಣ್ಮರೆ



ವಾರ್ಷಿಕ ವಿಶೇಷ ಶಿಬಿರ ಸಮಾರೋಪ ಸಮಾರಂಭದಲ್ಲಿ ವಿನೋದ ಮುಡಗದ್ದೆ ಮಾತನಾಡಿದರು.

ವಿರಾಜಪೇಟೆ: ಆಧುನಿಕತೆಯ ಭರಾಟೆಯಲ್ಲಿ ಪ್ರಕೃತಿಯೊಂದಿಗೆ ಬಾಳಿಬದುಕುತ್ತಿದ್ದ ಪದ್ಧತಿ ಕಣ್ಮರೆಯಾಗುತ್ತಿದೆ ಎಂದು ಮಡಿಕೇರಿ ಆಕಾಶವಾಣಿ ಉದ್ಘೋಷಕ ವಿನೋದ ಮುಡಗದ್ದೆ ವಿಷಾದ ವ್ಯಕ್ತಪಡಿಸಿದ್ದಾರೆ.

ಕೊಡಗು ವಿಶ್ವವಿದ್ಯಾನಿಲಯ, ರಾಷ್ಟ್ರೀಯ ಸೇವಾ ಯೋಜನೆ ಘಟಕ, ಸಂತ ಅನ್ನಮ್ಮ ಪದವಿ ಕಾಲೇಜು ಆಶ್ರಯದಲ್ಲಿ ಕೊಲ್ತೋಡು ನಾಂಗಾಲ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ವಾರ್ಷಿಕ ವಿಶೇಷ ಶಿಬಿರ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಸೇವೆ ಎಂಬುದು ಜೀವನದ ಅವಿಭಾಜ್ಯ ಅಂಗ ಸೇವಾ ಮನೋಭಾವ ಮತ್ತು ಪರಿಸರ ಜಾಗೃತಿ ವಿದ್ಯಾರ್ಥಿಗಳ ಜೀವನದಲ್ಲಿ ಜಾಗೃತವಾಗಬೇಕು ಎಂದರು.

ಕುಪ್ಪಂಡ ಗೋಪಾಲ್ ಸುಬ್ಬಯ್ಯ ಮಾತನಾಡಿದರು. ಎನ್‌ಎಸ್‌ಎಸ್ ಘಟಕದ ಶಿಬಿರಾಧಿಕಾರಿ ಬಿ.ಎಸ್. ಶಾಂತಿಭೂಷಣ್ ಶಿಬಿರದ ವರದಿ ವಾಚಿಸಿದರು. ಕಾರ್ಯಕ್ರಮ ಉದ್ದೇಶಿಸಿ ಸಂತ ಅನ್ನಮ್ಮ ಪದವಿ ಕಾಲೇಜಿನ ಪ್ರಾಂಶುಪಾಲ ತೃಪ್ತಿ ಬೋಪಣ್ಣ ಮತ್ತು ಸ.ಹಿ.ಪ್ರಾ. ಶಾಲೆಯ ಮುಖ್ಯೋಪಾಧ್ಯಾಯ ಫ್ರಾನ್ಸಿ ಲೋಬೋ ಮಾತನಾಡಿದರು. ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷ ಆಶಾ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಆಶಾ, ಸಂತ ಅನ್ನಮ್ಮ ಪದವಿ ಕಾಲೇಜಿನ ಕನ್ನಡ ಉಪನ್ಯಾಸಕ ಪ್ರತಿಮಾ ರೈ ಸ್ವಾಗತಿಸಿದರು, ಮುತ್ತಪ್ಪ ವಂದಿಸಿದರು.

ನಗರಸಭೆ ಮಾಜಿ ಉಪಾಧ್ಯಕ್ಷ, ಲಿಯಾಕತ್ ಅಲಿ ನಿಧನ

ಮಡಿಕೇರಿ: ನಗರಸಭೆಯ ಮಾಜಿ ಉಪಾಧ್ಯಕ್ಷ ಲಿಯಾಕತ್ ಅಲಿ (69)ಅವರು ಇಂದು ಬೆಳಗ್ಗೆ ನಿಧನರಾಗಿದ್ದಾರೆ. ಮೃತರು ಪತ್ನಿ, ಇಬ್ಬರು ಪುತ್ರರು, ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.



ಭಾನುವಾರ ಸಂಜೆ 4 ಗಂಟೆಗೆ ಮೃತರ ಅಂತ್ಯಕ್ರಿಯೆ ಜರುಗಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೊಡಗಿನ ಹಿರಿಯ ಕಲಾವಿದರಾಗಿದ್ದ ಲಿಯಾಕತ್, ಉತ್ತಮ ಗಾಯಕರಾಗಿದ್ದರು. ಗೋಕಾಕ್ ಚಳುವಳಿ ಸೇರಿದಂತೆ ಕನ್ನಡ ಚಳವಳಿಯಲ್ಲಿ ಕೂಡ ಲಿಯಾಕತ್ ಸಕ್ರಿಯರಾಗಿದ್ದು, ಕನ್ನಡಪರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು. ಲಿಯಾಕತ್ ಅಲಿ ಅಗಲಿಕೆಗೆ ಕಸಾಪ ಸೇರಿದಂತೆ ವಿವಿಧ ಸಂಘ ಸಂಸ್ಥೆಗಳು ಸಂತಾಪ ಸೂಚಿಸಿವೆ.

ನಿವೃತ್ತ ಶುಶ್ರೂಷಕ ಅಧೀಕ್ಷಕಿ ಬಂಗಾಡುಮನೆ ವಸಂತಿಗೆ ಚಿನ್ನ, ಬೆಳ್ಳಿ ಪದಕ

ಮಡಿಕೇರಿ, ಮಾ.15–ಥೈಲ್ಯಾಂಡ್‌ನ ರಚ್ಚುಪುರಿ ಸ್ಟೇಡಿಯಂನಲ್ಲಿ ಇತ್ತೀಚೆಗೆ ನಡೆದ ಅಂತರಾಷ್ಟ್ರೀಯ ಮಟ್ಟದ 30ನೇ ಥೈಲ್ಯಾಂಡ್ ಮಾಸ್ಟರ್ಸ್ ಅಥ್ಲೆಟಿಕ್‌ನಲ್ಲಿ 60 ವಯೋ ಮಿತಿಯ ವಿಭಾಗದಲ್ಲಿ ಮಡಿಕೇರಿಯ ನಿವೃತ್ತ ಶುಶ್ರೂಷಕಿ ಅಧೀಕ್ಷಕಿ ಬಂಗಾಡುಮನೆ ವಸಂತಿ ಅವರು ಚಿನ್ನ ಮತ್ತು ಬೆಳ್ಳಿಯ ಪದಕವನ್ನು ಗೆದ್ದು ಜಿಲ್ಲೆಗೆ ಕೀರ್ತಿ ತಂದಿದ್ದಾರೆ.

ಕ್ರೀಡಾಕೂಟದಲ್ಲಿ ಕೊಡಗು ಜಿಲ್ಲೆಯಿಂದ ಬಂಗಾಡುಮನೆ ವಸಂತಿ ಸೇರಿದಂತೆ ಇಬ್ಬರು ಕ್ರೀಡಾಪಟುಗಳು ಪಾಲ್ಗೊಂಡಿದ್ದರು.

ಭಾರತ, ಫಿಲಿಫೈನ್ಸ್, ಯುಎಸ್‌ಎ, ನೆದರ್ ಲ್ಯಾಂಡ್, ಇಸ್ರೇಲ್, ಮಲೇಶಿಯಾ, ಸಿಂಗಾಪುರ್, ಶ್ರೀಲಂಕಾ, ಥೈಲ್ಯಾಂಡ್ ಸೇರಿದಂತೆ 10 ದೇಶಗಳ ಒಟ್ಟು 1024 ಮಂದಿ ಕ್ರೀಡಾಪಟುಗಳು ಭಾಗವಹಿಸಿದ್ದರು.



ಚಿನ್ನ ಬೆಳ್ಳಿ ಪದಕ ವಿಜೇತೆ ಬಂಗಾಡುಮನೆ ವಸಂತಿ

ಚಾ.ನಗರ ಜಿಲ್ಲೆಯಲ್ಲಿ ಗೃಹ ಬಳಕೆ ಸಿಲಿಂಡರ್‌ಗಳ ಕೊರತೆ ಇಲ್ಲ

ಸಮಸ್ಯೆಯಾದಲ್ಲಿ ಸಹಾಯವಾಣಿ ಸಂಪರ್ಕಿಸಿ: ಡಿಸಿ

ಚಾಮರಾಜನಗರ, ಮಾ.15 – ಜಿಲ್ಲೆಯಲ್ಲಿ ಗೃಹಬಳಕೆ ಎಲ್‌ಪಿಜಿ ಗ್ಯಾಸ್ ಸಿಲಿಂಡರ್‌ಗಳು ಸಮರ್ಪಕವಾಗಿ ಸಂಗ್ರಹದಲ್ಲಿದ್ದು ಸರಬರಾಜು ಮಾಡಲಾಗುತ್ತಿದೆ. ಸಾರ್ವಜನಿಕರು ಯಾವುದೇ ಆತಂಕಕ್ಕೆ ಒಳಗಾಗದೇ ಅಗತ್ಯವಿರುವ ಪ್ರಮಾಣದಲ್ಲಿ ಮಾತ್ರ ಬುಕ್ ಮಾಡಿ ಪಡೆದುಕೊಳ್ಳುವಂತೆ ಜಿಲ್ಲಾಧಿಕಾರಿ ಶ್ರೀರೂಪ ಮನವಿ ಮಾಡಿದ್ದಾರೆ.

ಅಡುಗೆ ಅನಿಲವನ್ನು ಮಿತಬಳಕೆ ಪೂರೈಕೆಗಾಗಿ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಎಲ್‌ಪಿಜಿ ವಿತರಕರೊಂದಿಗೆ ಸಮಾಲೋಚನೆ ನಡೆಸಲಾಗಿದೆ. ಗೃಹಬಳಕೆ ಗ್ಯಾಸ್ ಸಿಲಿಂಡರ್‌ಗಳ ಸಮರ್ಪಕ ಸಂಗ್ರಹ ಮತ್ತು ಸರಬರಾಜು ಲಭ್ಯವಿರುವುದನ್ನು ದೃಢಪಡಿಸಿ ಎಂದಿನಂತೆ ಎಲ್‌ಪಿಜಿ ವಿತರಕರು ಗ್ರಾಹಕರ ಮನೆ ಬಾಗಿಲಿಗೆ ಸರಬರಾಜು ಮಾಡಲಿದ್ದಾರೆ. ಈ ಬಗ್ಗೆ ಜಿಲ್ಲೆಯ ಎಲ್ಲಾ ಎಲ್‌ಪಿಜಿ ವಿತರಕರಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.

ಸಾರ್ವಜನಿಕರು ಯಾವುದೇ ರೀತಿಯ ಆತಂಕಕ್ಕೆ ಒಳಗಾಗದೆ ಅಗತ್ಯವಿರುವ ಪ್ರಮಾಣದಲ್ಲಿ ಗ್ಯಾಸ್ ಸಿಲಿಂಡರ್ ಪಡೆಯಬಹುದು. ಎಲ್.ಪಿ.ಜಿ ವಿತರಣೆಯಲ್ಲಿ ಏನಾದರೂ ಕುಂದುಕೊರತೆಗಳು ಕಂಡುಬಂದಲ್ಲಿ ಈ ಕೆಳಗಿನ ದೂರವಾಣಿ ಸಂಖ್ಯೆಗಳಿಗೆ ಕರೆ ಮಾಡಿ ಪರಿಹಾರ ಕಂಡುಕೊಳ್ಳಬಹುದಾಗಿದೆ.

ಕಚೇರಿಯ ಹೆಸರು : ಜಿಲ್ಲಾಧಿಕಾರಿಗಳ ಕಚೇರಿ (ಆಹಾರ) ಚಾಮರಾಜನಗರ ಸೇಲ್ಸ್ ಆಫೀಸರ್ ಹೆಚ್‌ಪಿಸಿ ಆಫೀಸ್ ದೂರವಾಣಿ ಸಂಖ್ಯೆ: 08226–224660 ಮೊ. 9159466455, ಸೇಲ್ಸ್ ಆಫೀಸರ್ ಬಿಪಿಸಿ – ಕಚೇರಿ ಮೊ 9853735944, ಸೇಲ್ಸ್ ಆಫೀಸರ್ ಐಓಸಿ– ಕಚೇರಿ. ಮೊ. 9448289912, ಚಾಮರಾಜನಗರ ತಹಶೀಲ್ದಾರ್ ಕಚೇರಿ ಮೊ. 9743122301, ಗುಂಡ್ಲುಪೇಟೆ ತಹಶೀಲ್ದಾರ್ ಕಚೇರಿ ಮೊ.9945415179, ಯಳಂದೂರು ತಹಶೀಲ್ದಾರ್ ಕಚೇರಿ, ಮೊ. 9902039929, ಕೊಳ್ಳೇಗಾಲ ತಹಶೀಲ್ದಾರ್ ಕಚೇರಿ ಮೊ. 8453500797, ಹನೂರು ತಹಶೀಲ್ದಾರ್ ಕಚೇರಿ ಮೊ. 6360025850 ಅನ್ನು ಸಂಪರ್ಕಿಸಬಹುದಾಗಿದೆ.

ಯಾವುದೇ ಅನಧಿಕೃತ ಗ್ಯಾಸ್ ಸಿಲಿಂಡರ್ ಸಂಗ್ರಹಣೆ ಅಥವಾ ಅಕ್ರಮ ಮಾರಾಟ ಕಂಡುಬಂದಲ್ಲಿ ಅಗತ್ಯ ವಸ್ತುಗಳ ಕಾಯ್ದೆ–1955 ಹಾಗೂ ಸಂಬಂಧಿತ ನಿಯಂತ್ರಣ ಆದೇಶಗಳಡಿ ಕಾನೂನು ಕ್ರಮ ಕೈಗೊಳ್ಳಲಾಗುವುದು. ಗೃಹಬಳಕೆ ಅಡುಗೆ ಅನಿಲ ಸಿಲಿಂಡರ್‌ಗಳ ಸಮರ್ಪಕ ಹಾಗೂ ಸುಗಮ ಸರಬರಾಜು ನಿರ್ವಹಣೆಗೆ ಜಿಲ್ಲೆಯ ಸಾರ್ವಜನಿಕರು ಸಹಕರಿಸುವಂತೆ ಜಿಲ್ಲಾಧಿಕಾರಿ ಶ್ರೀರೂಪ ಪ್ರಕಟಣೆಯಲ್ಲಿ ಕೋರಿದ್ದಾರೆ.

ಬಲಗೈ ಸಮುದಾಯ ನಿರ್ಲಕ್ಷಿಸಿದರೆ ಸರ್ಕಾರ ಪತನ ಖಚಿತ

● ಮೈಸೂರಿನ ಉರಿಲಿಂಗಿಪೆದ್ದಿ ಮಠದ ಜ್ಞಾನಪ್ರಕಾಶ್ ಸ್ವಾಮೀಜಿ ಎಚ್ಚರಿಕೆ ● ಒಳಮೀಸಲಾತಿ ವರದಿಯ ಸಾಧಕ– ಬಾಧಕ ವಿಚಾರ ಸಂಕಿರಣ



ಚಾಮರಾಜನಗರ: ರಾಜ್ಯ ಸರ್ಕಾರ ಒಳ ಮೀಸಲಾತಿ ನೀಡುವಲ್ಲಿ ಬಲಗೈ ಸಮುದಾಯವನ್ನು ತಾತ್ಸಾರ ಮಾಡಿದ ಮಾರನೇ ದಿನವೇ ಸರ್ಕಾರ ಪತನಗೊಳ್ಳಲಿದೆ ಎಂದು ಮೈಸೂರಿನ ಉರಿಲಿಂಗಿಪೆದ್ದಿ ಮಠದ ಜ್ಞಾನ ಪ್ರಕಾಶ್ ಸ್ವಾಮೀಜಿ ಎಚ್ಚರಿಕೆ ನೀಡಿದರು.

ನಗರದ ಡಾ.ಬಿ.ಆರ್. ಅಂಬೇಡ್ಕರ್ ಸಮುದಾಯ ಭವನದಲ್ಲಿ ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಒಕ್ಕೂಟ, ಗಡಿ–ಕಟ್ಟೆ ಯಜಮಾನರು ಹಾಗೂ ಆದಿ ಕರ್ನಾಟಕ ಅಭಿವೃದ್ಧಿ ಸಂಘದ ಆಸ್ತಿ ಸಂರಕ್ಷಣಾ ಸಮಿತಿಯಿಂದ ನಡೆದ ನ್ಯಾ.ನಾಗಮೋಹನ ದಾಸ್‌ರವರ ಒಳಮೀಸ ಲಾತಿ ವರದಿಯ ಸಾಧಕ – ಬಾಧಕಗಳ ಕುರಿತು ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಶಕ್ತಿ ತುಂಬಿದ್ದೇ ಬಲಗೈ ಸಮುದಾಯ ಎಂಬುದನ್ನು ಅವರು ಮರೆತಿಲ್ಲ. ಚಾಮುಂಡೇಶ್ವರಿ ಕ್ಷೇತ್ರದ ಉಪಚುನಾವಣೆಯಲ್ಲಿ 257 ಮತಗಳ ಅಂತರದಲ್ಲಿ ಗೆಲ್ಲಲು ಬಲಗೈ ಸಮುದಾಯ ಕಾರಣ. ಇಲ್ಲದಿದ್ದರೆ ರಾಜಕೀಯ ಭವಿಷ್ಯವೇ ಮಾಸಿ ಹೋಗುತ್ತಿತ್ತು. ಅಂದು ಶ್ರೀನಿವಾಸಪ್ರಸಾದ್ ನಾಯಕತ್ವದಲ್ಲಿ ನಡೆದ ಚುನಾವಣೆಯನ್ನು ನೆನಪು ಮಾಡಿಕೊಳ್ಳಬೇಕು. ಈಗಾಗಲೇ ಸಿದ್ದರಾಮಯ್ಯರವರ ಪೆನ್ನು ಸ್ವಲ್ಪ ಹಿಂದೆ ಸರಿಸಿದೆ. ಮಾ. 25ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆಯುವ ಬಲಗೈ ಸಮುದಾಯದ ಶಕ್ತಿ ಪ್ರದರ್ಶನವು ಮತ್ತೊಂದು ಎಚ್ಚರಿಕೆ ಗಂಟೆಯಾಗಬೇಕು ಎಂದು ತಿಳಿಸಿದರು.

ಅಲ್ಲದೇ ವಿಶೇಷ ಸಂಪುಟ ಸಭೆಯಲ್ಲಿ ಸಿದ್ದರಾಮಯ್ಯ ಮತ್ತು ಅವರ ನೇತೃತ್ವದ ಸಚಿವರು ತೆಗೆದುಕೊಳ್ಳುವ ತೀರ್ಮಾನದಲ್ಲಿ ನಿಮ್ಮ ಸರ್ಕಾರ ಉಳಿಯಲಿದೆ ಎಂದು ಈಗಾಗಲೇ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಹೇಳಿ ದ್ದೇನೆ. ಇಷ್ಟಾಗಿಯು ಒಳ ಮೀಸಲಾತಿ ವಿಚಾರದಲ್ಲಿ ಬಲಗೈ ಸಮುದಾಯಕ್ಕೆ ಅನ್ಯಾಯವಾಗುವುದಕ್ಕೆ ಬಿಡುವುದಿಲ್ಲ. ಮೀಸಲಾತಿ ವಿಚಾರದಲ್ಲಿ ಬಲಗೈ ಮತ್ತು ಎಡಗೈ ಭಿನ್ನಾ ಮಾಡಿ, ನಮ್ಮಲ್ಲಿಯೇ ವೈಮನಸ್ಸು ಉಂಟು ಮಾಡುವ ಕುತಂತ್ರ ನಡೆದಿದೆ. ಇದನ್ನು ಭೇದಿಸುವ ಶಕ್ತಿ ನಮ್ಮಲ್ಲಿದೆ. ನಾವು ಅಂಬೇಡ್ಕರ್, ಬುದ್ಧನ ಅನುಯಾಯಿಗಳು. ಹೀಗಾಗಿ ನಮ್ಮ ಹೋರಾಟ ನಿರಂತರವಾಗಿರಲಿದೆ ಎಂದರು.

ನಂತರ ಶಾಸಕ ಎ.ಆರ್. ಕೃಷ್ಣಮೂರ್ತಿ ಮಾತನಾಡಿ, ಒಳ ಮೀಸಲಾತಿ ಜಾರಿಗೊಳಿಸುವ ಬಿಲ್ ಅನ್ನು ಸದನದಲ್ಲಿ ವಿರೋಧಿಸಿದೆ. ಆದರೆ, ಧ್ವನಿ ಮತಕ್ಕೆ ಹಾಕಿ ವಿಧಾನಸಭೆಯಲ್ಲಿ ಚರ್ಚೆ ಇಲ್ಲದೇ ಪಾಸ್ ಆಯಿತು. ಆದರೆ, ಮೇಲ್ಮನೆಯಲ್ಲಿ ಇದು ಚರ್ಚೆ ನಡೆದು, ಕೆಲವು ಮಾರ್ಪಾಡು ಮಾಡಲು ಸಮಾಜ ಕಲ್ಯಾಣ ಇಲಾಖೆಯ ಸಚಿವರು ಒಪ್ಪಿಗೆ ಸೂಚಿಸಿ ದರು. ಇದಕ್ಕೆ ಪ್ರಮುಖ ಕಾರಣರು ನಮ್ಮ ಸಮುದಾಯದ ಅಧಿಕಾರಿ ಡಿ.ಚಂದ್ರಶೇಖರಯ್ಯ ಎಂದರೆ ತಪ್ಪಾಗಲಾದು. ಛಲವಾದಿ ನಾರಾಯಣ ಸ್ವಾಮಿ ಅವರಿಗೆ ಎಲ್ಲಾ ಪೂರಕವಾದ ಮಾಹಿತಿಯನ್ನು ನೀಡಿದ್ದರು. ಇಂಥ ಅಧಿಕಾರಿಗಳು ನಮ್ಮ ಸಮಾಜದ ಆಸ್ತಿಯಾಗಿದ್ದಾರೆ ಎಂದರು.

> ಮಾದಿಗ ಸಮಾಜದ ಸಚಿವರು ರಾಜೀನಾಮೆ ನೀಡಲು ಸಿದ್ದ ಎನ್ನುತ್ತಿದ್ದಾರೆ. ಆದರೆ, ನಮ್ಮ ಸಮಾಜದ ಮೂವರು ಸಚಿವರು ಸಹ ರಾಜೀನಾಮೆ ಪತ್ರವನ್ನು ಬರೆದು ಸಿದ್ದಪಡಿಸಿಕೊಂಡಿದ್ದಾರೆ. ಒಳ ಮೀಸಲಾತಿಯಲ್ಲಿ ಬಲಗೈ ಸಮುದಾಯಕ್ಕೆ ನ್ಯಾಯ ಸಿಗದಿದ್ದ ದಿನವೇ ರಾಜೀನಾಮೆ ನೀಡುತ್ತಾರೆ.
> –ಎ.ಆರ್. ಕೃಷ್ಣಮೂರ್ತಿ, ಶಾಸಕರು.

ಕಾರ್ಯಕ್ರಮದಲ್ಲಿ ರಾಜ್ಯ ಎಸ್‌ಸಿ, ಎಸ್‌ಟಿ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಡಿ. ಚಂದ್ರಶೇಖರಯ್ಯ, ದಲಿತ ಮಹಾಸಭಾದ ರಾಜ್ಯ ಉಪಾಧ್ಯಕ್ಷ ವೆಂಕಟರಮಣಸ್ವಾಮಿ, ಅಂಬೇಡ್ಕರ್ ವಿಚಾರವಾದಿ ಡಾ.ಪಿ. ದೇವರಾಜು, ಛಲವಾದಿ ಗುರುಪೀಠ ಬಸವರಾಜನಾಗಿ ಸ್ವಾಮೀಜಿ, ನಗರಸಭಾ ಮಾಜಿ ಸದಸ್ಯ ಆರ್.ಪಿ. ನಂಜುಂಡಸ್ವಾಮಿ, ತಾಪಂ ಮಾಜಿ ಅಧ್ಯಕ್ಷ ಆರ್. ಮಹದೇವ್, ಜಿಪಂ ಮಾಜಿ ಅಧ್ಯಕ್ಷ ಅಯ್ಯನಪುರ ಶಿವ ಕುಮಾರ್, ಮುಖಂಡರಾದ ಮಹದೇವಯ್ಯ, ನಲ್ಲೂರು ಮಹದೇವಸ್ವಾಮಿ, ರೇವಣ್ಣ, ಪ್ರಸನ್ನ ಕುಮಾರ್, ರವಿಕುಮಾರ್, ವೀರಣ್ಣ, ರಂಗಸ್ವಾಮಿ, ನಾಗರಾಜು, ಪಾಪಣ್ಣ, ಇತರರು ಇದ್ದರು.

ಗೋಪಾಲಸ್ವಾಮಿ ಬೆಟ್ಟದಲ್ಲಿ ವೈಭವದ ಬ್ರಹ್ಮ ರಥೋತ್ಸವ



ಗುಂಡ್ಲುಪೇಟೆ : ಮಾ–15 ತಾಲೂಕಿನಲ್ಲಿರುವ ಶ್ರೀ ಹಿಮವದ್ ಗೋಪಾಲ ಸ್ವಾಮಿ ಬೆಟ್ಟದಲ್ಲಿ ರುಕ್ಮಿಣಿ ಸತ್ಯಭಾಮ ಸಮೇತ ವೇಣುಗೋಪಾಲಸ್ವಾಮಿ ಬ್ರಹ್ಮ ರಥೋತ್ಸವ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಸಂಪನ್ನಗೊಂಡಿತು.

ರಥೋತ್ಸವದ ಹಿನ್ನೆಲೆಯಲ್ಲಿ ದೇವಸ್ಥಾನವನ್ನು ಬಣ್ಣ ಬಣ್ಣದ ಹೂಗಳು ಹಾಗೂ ಫಲ ಪುಷ್ಪಗಳಿಂದ ಮತ್ತು ತರಕಾರಿ ಹಣ್ಣುಗಳಿಂದ ವಿಶೇಷವಾಗಿ ಅಲಂಕಾರ ಮಾಡಲಾಗಿತ್ತು.

ರಥೋತ್ಸವದ ಹಿನ್ನೆಲೆಯಲ್ಲಿ ಕೊಳಲನ್ನು ನುಡಿಸುತ್ತಿರುವ ಭಂಗಿಯಲ್ಲಿರುವ ಶ್ರೀ ವೇಣುಗೋಪಾಲ ಸ್ವಾಮಿಗೆ ವಿವಿಧ ಹೂಗಳಿಂದ ಅಲಂಕಾರ ಮಾಡಿ ಪ್ರಧಾನ ಅರ್ಚಕ ಕೆ ವಿ.ಗೋಪಾಲಕೃಷ್ಣ ಭಟ್ ಅವರ ಪೌರೋಹಿತ್ಯದಲ್ಲಿ ಪೂಜೆ ಸಲ್ಲಿಸಲಾಯಿತು.

ನಂತರ ಮಧ್ಯಾಹ್ನ 12.30 ಸಮಯಕ್ಕೆ ಬೆಟ್ಟದಲ್ಲಿ ಸಿಗುವ ಹಂಬುಗಳಿಂದ ಮತ್ತು ಬಿದಿರಿನ ಕಡ್ಡಿಗಳಿಂದ ತಯಾರಿಸಲಾಗಿದ್ದ ರಥಕ್ಕೆ ಉತ್ಸವ ಮೂರ್ತಿಯನ್ನು ಕುಳ್ಳಿರಿಸಿ ದೇವಸ್ಥಾನದ ಪ್ರಾಂಗಣವನ್ನು ಗೋವಿಂದ ಗೋಪಾಲ ನಾಮಸ್ಮರಣೆಯೊಂದಿಗೆ ರಥವನ್ನು ಎಳೆದು ಸ್ವಸ್ಥಾನವನ್ನು ತಲುಪಿಸಲಾಯಿತು.

ಈ ರಥೋತ್ಸವಕ್ಕೆ ಶಾಸಕ ಎಚ್.ಎಂ. ಗಣೇಶ್‌ಪ್ರಸಾದ್ ಮತ್ತು ತಹಸೀಲ್ದಾರ್ ಎಸ್.ತನ್ಮಯ್ ಚಾಲನೆ ನೀಡಿದರು. ರಥೋತ್ಸವದ ಪ್ರಯುಕ್ತ ಕೆಎಸ್‌ಆರ್‌ಟಿಸಿ ವತಿಯಿಂದ ವಿಶೇಷ ಬಸ್‌ಗಳ ಸೌಲಭ್ಯವನ್ನು ಕಲ್ಪಿಸಲಾಗಿತ್ತು. ರಥೋತ್ಸವದಲ್ಲಿ ದೇವಸ್ಥಾನದ ಮಾಜಿ ಧರ್ಮದರ್ಶಿ ಜಿ.ಸಿ. ನಾಗರಾಜು ಮತ್ತು ಕುಟುಂಬಸ್ಥರು ಸೇರಿದಂತೆ ಸುತ್ತಮುತ್ತಲ ಗ್ರಾಮಸ್ಥರು ನಾಡಿನ ಸಹಸ್ರಾರು ಭಕ್ತರು ಭಾಗವಹಿಸಿದ್ದರು.

30 ಮಂದಿ ಶಿಕ್ಷಕಿಯರಿಗೆ ಮಾತೆ ಸಾವಿತ್ರಿಭಾಯಿ ಫುಲೆ ಉತ್ತಮ ಶಿಕ್ಷಕ ಪ್ರಶಸ್ತಿ



ಚಾಮರಾಜನಗರದ ಜೆ.ಎಚ್.ಪಾಟೀಲ್ ಸಭಾಂಗಣದಲ್ಲಿ ನಡೆದ ಕರ್ನಾಟಕ ರಾಜ್ಯ ಚಾಮರಾಜನಗರ ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಹಾಗೂ ಜಿಲ್ಲಾ ಘಟಕದ ವತಿಯಿಂದ ಮಹಿಳಾ ದಿನಾಚರಣೆ ಹಾಗೂ ಸಾವಿತ್ರಿಬಾಯಿ ಪುಲೆ ಜಯಂತಿ ಅಂಗವಾಗಿ 30 ಜನ ಶಿಕ್ಷಕಿಯರಿಗೆ ಮಾತೆ ಸಾವಿತ್ರಿಬಾಯಿ ಪುಲೆ ಉತ್ತಮ ಶಿಕ್ಷಕ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು

ಚಾಮರಾಜನಗರ, ಮಾ.15– ನಗರದ ಜೆ.ಎಚ್.ಪಾಟೇಲ್ ಸಭಾಂಗಣದಲ್ಲಿ ನಡೆದ ಕರ್ನಾಟಕ ರಾಜ್ಯ ಚಾಮರಾಜ ನಗರ ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಹಾಗೂ ಜಿಲ್ಲಾ ಘಟಕದ ವತಿಯಿಂದ ಮಹಿಳಾ ದಿನಾಚರಣೆ ಹಾಗೂ ಸಾವಿತ್ರಿಬಾಯಿ ಪುಲೆ ಜಯಂತಿ ಅಂಗವಾಗಿ 30 ಜನ ಶಿಕ್ಷಕಿಯರಿಗೆ ಮಾತೆ ಸಾವಿತ್ರಿಬಾಯಿ ಪುಲೆ ಉತ್ತಮ ಶಿಕ್ಷಕ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ಕಾರ್ಯಕ್ರಮವನ್ನು ಶಾಸಕ ಸಿ.ಪುಟ್ಟರಂಗಶೆಟ್ಟಿ ಉದ್ಘಾಟಿಸಿ ಮಾತನಾಡಿ, ಮಹಿಳೆಯರು ಇಂದು ಸಮಾಜದಲ್ಲಿ ಉನ್ನತ ಸ್ಥಾನದಲ್ಲಿ ಇದ್ದರೆ ಸಾವಿತ್ರಿಬಾಯಿ ಪುಲೆ ಡಾ. ಬಿ.ಆರ್.ಅಂಬೇಡ್ಕರ್ ಅವರಂಥವರು ಪ್ರೇರಣೆ ಅಂದಿನ ಕಟ್ಟಿದ ಪರಿಸ್ಥಿತಿಯಲ್ಲೇ ಸಾವಿತ್ರಿಬಾಯಿಪುಲಿ ಅವರು ಶಿಕ್ಷಣ ನೀಡಲು ಮುಂದಾಗಿದ್ದರು ಇಂದು ಸಾವಿರಾರು ಶಿಕ್ಷಿಯರಿದ್ದು ಗುಣಮಟ್ಟದ ಶಿಕ್ಷಣ ಮಕ್ಕಳಿಗೆ ದೊರೆಯಲು ತಾವು ಬದ್ಧತೆಯಿಂದ ಪರಿಣಾಮಕಾರಿಯಾಗಿ ಬೋಧನೆ ನೀಡಬೇಕು ಎಂದು ಶಿಕ್ಷಕರಿಗೆ ತಿಳಿಸಿದರು ಈ ನಿಟ್ಟಿನಲ್ಲಿ ಸಂಘ ಶಿಕ್ಷಕಿಯರಿಗೆ ಸಾವಿತ್ರಿಬಾಯಿ ಪುಲೆ ಹೆಸರಿನಲ್ಲಿ ಪ್ರಶಸ್ತಿ ನೀಡುತ್ತಿರುವುದು ಮೆಚ್ಚುಗೆಯಾಗಿದೆ ಎಂದು ತಿಳಿಸಿದರು.

ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ. ಅಶ್ವಿನಿ ಅವರು ಮಾತನಾಡಿ, ಮಹಿಳೆ ಅಬಲೆಯಲ್ಲ ಮಹಿಳೆ ಎಂದರೆ ಒಂದು ಶಕ್ತಿ ಮಹಿಳೆ ಒಂದು ಕುಟುಂಬವನ್ನು ಮುನ್ನೆಡೆಸಬಲ್ಲಳು ಅಷ್ಟೇ ಅಲ್ಲ ಇಂದು ದೇಶವನ್ನು ಕಟ್ಟಿ ಮುನ್ನಡೆಸಬಲ್ಲಳು, ಪ್ರಾಥಮಿಕ ಶಿಕ್ಷಣ ಗಟ್ಟಿಯಾದರೆ ಮಾತ್ರ ಶಿಕ್ಷಣದ ಗಟ್ಟಿತನ ಉಳಿಯುವುದು ಎಂದು ತಿಳಿಸಿದರು.

ಶಿಕ್ಷಕರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹದೇವಸ್ವಾಮಿ ಪ್ರಸ್ತಾವಿಕ ಮಾತನಾಡಿದರು.

ಕಾರ್ಯಕ್ರಮದಲ್ಲಿ ಎ.ಪಿ.ಎಂ.ಸಿ ಮಾಜಿ ಅಧ್ಯಕ್ಷ ಬಿ.ಕೆ ರವಿಕುಮಾರ್, ಕರ್ನಾಟಕ ರಾಜ್ಯ ಸರ್ಕಾರಿ ನೌಕರ ಸಂಘದ ಜಿಲ್ಲಾಧ್ಯಕ್ಷರಾದ ಡಾ ರೇಣುಕಾ ದೇವಿ, ಕಾರ್ಯದರ್ಶಿ ಭರತ್ ಭೂಷಣ್, ಖಜಾಂಚಿ ಶಿವಕುಮಾರಯ್ಯ, ಹಿರಿಯ ಉಪಾಧ್ಯಕ್ಷ ಎಂ.ಡಿ ಮಹದೇವಯ್ಯ, ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ಸಿ ಕೆ ರಾಮಸ್ವಾಮಿ, ಕಾರ್ಯದರ್ಶಿ ಸುಧಾ ಎನ್, ಪದಾಧಿಕಾರಿಗಳಾದ ಬಿ ಕೃಷ್ಣಮೂರ್ತಿ, ಸವಿತಾ ರಾಣಿ, ಎಸ್‌ಜಿ ರಾಜು, ಧನಂಜಯ, ಶಿವಕುಮಾರ್, ಸಮಿವುಲ್ಲಾ, ರಾಜು, ಶಬಾನಾ, ಅಂಜುಮ್, ಸಾವಿತ್ರಿಬಾಯಿ ಪುಲೆ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಭವಾನಿದೇವಿ, ಕಾರ್ಯದರ್ಶಿ ಸುಶೀಲಾ ಸಿಎಂ, ಮುಖ್ಯ ಶಿಕ್ಷಕರ ಸಂಘದ ಅಧ್ಯಕ್ಷ ಮಹದೇವಮೂರ್ತಿ, ಕಾರ್ಯದರ್ಶಿ ಶಿವನಂಜಯ್ಯ, ಸೋಮಶೇಖರ್, ಶ್ವೇತ, ಮಮತ, ನಂಜುಂಡಸ್ವಾಮಿ, ಲತಾ, ಸೇರಿದಂತೆ ಇತರರು ಹಾಜರಿದ್ದರು.

ಸಕಲರಿಗೂ ಲೇಸು ಬಯಸುವ

ಮಾನವೀಯ ಮೌಲ್ಯ ಜಗತ್ತಿಗೆ ಸಾರಿದ ಶ್ರೀರೇಣುಕಾಚಾರ್ಯರು

ಮಾಡ್ರಹಳ್ಳಿ ಪಟ್ಟದ ಮಠದ ಶ್ರೀಶಾಂತಮಲ್ಲಿಕಾರ್ಜುನ ಸ್ವಾಮೀಜಿ



ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ತಿ.ನರಸೀಪುರ, ಮಾ.15– ಮಾನವ ಧರ್ಮಕ್ಕೆ ಜಯವಾಗಲಿ, ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಎಂಬ ಉದ್ಘೋಷವನ್ನು ಆದಿ ಜಗದ್ಗುರು ಶ್ರೀರೇಣುಕಾಚಾರ್ಯರು ಮಾಡಿ, ಮನುಕುಲದ ಒಳಿತನ್ನು ಬಯಸಿದ್ದರು ಎಂದು ಮಾಡ್ರಹಳ್ಳಿ ಪಟ್ಟದ ಮಠದ ಶ್ರೀಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ತಿಳಿಸಿದರು.

ಪಟ್ಟಣದ ವಾಸವಿ ಮಹಲ್‌ನಲ್ಲಿ ವೀರಶೈವ ಸಮಾಜ ಸೇವಾ ಸಮಿತಿಯಿಂದ ಹಮ್ಮಿಕೊಂಡಿದ್ದ ಶ್ರೀ ಆದಿ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ಮತ್ತು ಗೌರವ ಗುರುರಕ್ಷೆ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ವೀರಶೈವ ಧರ್ಮ ಸಂಸ್ಥಾಪಕ ಜಗದ್ಗುರು ರೇಣುಕಾಚಾರ್ಯರು ಸಮಾಜದಲ್ಲಿ ಸಮಾನತೆ ಕಾಣಬೇಕು. ಮೇಲು, ಕೀಳು ಎಂಬ ಭಾವನೆ ತೊಲಗಿ, ಎಲ್ಲರೂ ಮಾನವತ್ವವನ್ನು ಹೊಂದಿ ಮನುಷ್ಯರಾಗಿ ಬಾಳುವಂತೆ ವಿಶ್ವಕ್ಕೆ ಸಾರಿದರು. ಮನುಷ್ಯ ಯಾವುದೇ ಧರ್ಮದಲ್ಲಿ ಹುಟ್ಟಿದ್ದರೂ ವಿಶ್ವ ಮಾನವ ಧರ್ಮ ಪರಿಪಾಲನೆ ಮಾಡಬೇಕು. ಜಗದ್ಗುರು ರೇಣುಕಾಚಾರ್ಯರು ಸದಾ ಮಾನವ ಧರ್ಮಕ್ಕೆ ಜಯವಾಗಲಿ ಎಂದು ಹೇಳಿದ್ದಾರೆ. ಅವರ ತತ್ವಾದರ್ಶಗಳನ್ನು ಪಾಲಿಸುವುದು ನಮ್ಮ ಧರ್ಮವಾಗಬೇಕು. ಎಲ್ಲಾ ಮಹಾತ್ಮರ ನಡೆ ನುಡಿಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ರೇಣುಕಾಚಾರ್ಯರು ಕೇವಲ ಒಂದು ಧರ್ಮಕ್ಕೆ ಸೀಮಿತವಾಗದೆ, ಸಕಲರಿಗೂ ಲೇಸು ಬಯಸುವ ಮಾನವೀಯ ಮೌಲ್ಯಗಳನ್ನು ಜಗತ್ತಿಗೆ ಸಾರಿದ್ದಾರೆ. ದಯೆ, ಕರುಣೆ, ಅಹಿಂಸೆ ಮತ್ತು ಸತ್ಯದ ಹಾದಿಯಲ್ಲಿ ನಡೆಯುವುದೇ ನಾವು ಅವರಿಗೆ ಸಲ್ಲಿಸುವ ನಿಜವಾದ ಗೌರವ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ವೀರಶೈವ ಸಾರ್ವಜನಿಕ ಸೇವಾ ಸಂಸ್ಥೆ ಅಧ್ಯಕ್ಷ ಬಿ.ಎಸ್.ಸುಧಾಕರ್, ಪೋಷಕರು ಮಕ್ಕಳಿಗೆ ಕೇವಲ ಶಿಕ್ಷಣ ಕೊಡಿಸಿದರೆ ಸಾಲದು ಶಿಕ್ಷಣದ ಜೊತೆಗೆ ಉತ್ತಮ ಸಂಸ್ಕಾರ ಕಲಿಸುವುದು ಮುಖ್ಯ. ಸಂಸ್ಕಾರ ಕಲಿಯದೇ ಮಕ್ಕಳು ಎಷ್ಟೇ ಉನ್ನತ ವ್ಯಾಸಾಂಗ ಮಾಡಿದರೂ ಅದು ವ್ಯರ್ಥವಾಗುತ್ತದೆ. ಗುರು ಹಿರಿಯರಿಗೆ ಗೌರವ ಕೊಡುವುದನ್ನು ಪೋಷಕರು ಮಕ್ಕಳಿಗೆ ಕಲಿಸಬೇಕು. ಮಕ್ಕಳಲ್ಲಿ ಸಂಬಂಧಗಳಿಗೆ ಬೆಲೆ ಇಲ್ಲದಂತಾಗಿದೆ. ಸಂಬಂಧಗಳು ನಶಿಸಿ ಹೋಗುತ್ತಿವೆ. ಕೇವಲ ಸ್ನೇಹ ಮಾತ್ರ ಅವರಲ್ಲಿ ಉಳಿದಿದೆ. ಹಾಗಾಗಿ ಪೋಷಕರು ಎಚ್ಚೆತ್ತುಕೊಳ್ಳಬೇಕು. ನಶಿಸಿ ಹೋಗುತ್ತಿರುವ ಸಂಬಂಧಗಳನ್ನು ಉಳಿಸಲು ಮಕ್ಕಳನ್ನು ಧಾರ್ಮಿಕ ಕಾರ್ಯಕ್ರಮಗಳಿಗೆ ಹೋಗುವಂತೆ ಪ್ರೇರೇಪಿಸಬೇಕು. ಆ ಮೂಲಕ ಅವರಲ್ಲಿ ಧಾರ್ಮಿಕ ಭಾವನೆ ಮೂಡಿಸಬೇಕೆಂದು ತಿಳಿಸಿದರು.

ಈ ವೇಳೆ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಉತ್ತಮ ಸಾಧನೆ ಮಾಡಿದ ವರ್ಷ, ಶುಭಶ್ರೀ, ನಿಶ್ಚಲ್, ಭರತ್, ಸತೀಶ್, ಲಾವಣ್ಯ, ನಾಗರಾಜು, ಪ್ರೀತಂ, ಐಶ್ವರ್ಯ ಸೇರಿದಂತೆ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಬಿಜೆಪಿ ಅಧ್ಯಕ್ಷ ಡಾ.ಕೆ.ರ್.ನಾಗರಾಜ್ ಅಮ್ಮತೇಶ್, ನಿವೃತ್ತ ಪ್ರಾಂಶುಪಾಲ ಎಸ್. ನಂದೀಶ್, ಲೆಕ್ಕಪರಿಶೋಧಕ ಆರ್.ಎನ್. ಶಿವಣ್ಣ, ನಂಜನಗೂಡು ವೀರಶೈವ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಅಧ್ಯಕ್ಷ ಎಂ.ಸಿ.ಬಸವಣ್ಣ, ಜಯಶಂಕರಸ್ವಾಮಿ, ಬಿಜೆಪಿ ಕಾರ್ಯದರ್ಶಿ ನಾಗೇಂದ್ರ ಕುಮಾರ್, ಡಾ.ಎಸ್.ಮಲ್ಲಿಕಾರ್ಜುನ ಸ್ವಾಮಿ, ಜ್ಯೋತಿ, ಶ್ರೀಕಂಠಸ್ವಾಮಿ, ನಂದಿನಿ ಗಣೇಶ್ ಕುಮಾರ್, ವೀರಶೈವ ಸಮಾಜ ಸೇವಾ ಸಮಿತಿ ಅಧ್ಯಕ್ಷ ಟಿ.ಎಸ್. ಶಾಂತರಾಜು, ಉಪಾಧ್ಯಕ್ಷ ಎನ್.ಶಿವಪ್ರಸಾದ್, ಕಾರ್ಯದರ್ಶಿ ನ್ಯಾಯಬೆಲೆ ಅಂಗಡಿ ವೀರೇಶ್, ಸಹ ಕಾರ್ಯದರ್ಶಿ ಎಂ.ವೀರೇಶ್, ಖಜಾಂಚಿ ಆರ್.ಸಿದ್ದಲಿಂಗಸ್ವಾಮಿ, ಸಂಚಾಲಕ ಬಿ.ನಂದೀಶ್, ನಿರ್ದೇಶಕರಾದ ಎಂ.ಸಿ.ಬಸವರಾಜು, ತೋಟದಪ್ಪ ಸಿದ್ದಲಿಂಗಸ್ವಾಮಿ, ಫ್ಯಾನ್ಸಿ ಮೋಹನ್, ಕೆ.ಜೆ.ನಾಗೇಶ್, ಅಂಗಡಿ ಶೇಖರ್, ನೂತನ್, ಪುರಸಭಾ ಮಾಜಿ ಸದಸ್ಯ ಎಸ್ ಕೆ.ಕಿರಣ, ತಾಲೂಕು ವೀರಶೈವ ಅಧ್ಯಕ್ಷ ಎಸ್.ಎಂ.ಆರ್ ಪ್ರಕಾಶ್ ಹಾಗೂ ವೀರಶೈವ ಸಮಾಜದ ಮುಖಂಡರಿದ್ದರು.

ರೇಣುಕಾಚಾರ್ಯರು ಅಂದಿನ ಕಾಲದಲ್ಲೇ ಮಹಿಳೆಯರಿಗೆ ಸಮಾನ ಗೌರವ ನೀಡಿದ್ದರು. ಲಿಂಗಧಾರಣೆ ಮಾಡಿದವರೆಲ್ಲರೂ ಸಮಾನರು ಎಂಬ ತತ್ವದ ಮೂಲಕ ಸಾಮಾಜಿಕ ಮತ್ತು ಧಾರ್ಮಿಕ ಕ್ರಾಂತಿ ನಡೆಸಿದ್ದರು. ಲಿಂಗಧರಿಸಿ ಲಿಂಗ ಪೂಜಿಸಿ ಲಿಂಗವೇ ನಾವಾಗುವ ಮಹತ್ತರ ಘಟ್ಟವನ್ನೇ ವೀರಶೈವ ಧರ್ಮದಲ್ಲಿ ಕಾಣಬಹುದು. ಈ ಧರ್ಮದಲ್ಲಿದ್ದ ಒಳ್ಳೆಯ ಗುಣಗಳನ್ನು ಅರಿತು ಬ್ರಾಹ್ಮಣ ಕುಲದಲ್ಲಿ ಜನಿಸಿದ ಬಸವಣ್ಣನವರು ವೀರಶೈವ ಧರ್ಮ ಸ್ವೀಕರಿಸಿದರು.

–ಶ್ರೀಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ, ಮುದುಕುತೊರೆ ತೋಪಿನಮಠ.

ರಾಷ್ಟ್ರೀಯ ಲೋಕ್ ಅದಾಲತ್: 1276 ಪ್ರಕರಣ ಇತ್ಯರ್ಥ



ಹುಣಸೂರು, ಮಾ.15– ನಗರದ ನ್ಯಾಯಾಲಯದ ಆವರಣದಲ್ಲಿ ನಡೆದ ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ ವ್ಯಾಜ್ಯ ಪೂರ್ವ ಮತ್ತು ಬಾಕಿ ಉಳಿದ 12630 ಪ್ರಕರಣಗಳ ಪೈಕಿ 1276 ಪ್ರಕರಣಗಳು ಇತ್ಯರ್ಥಗೊಂಡವು.

ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ 36 ಚೆಕ್ ಬೌನ್ಸ್ ಪ್ರಕರಣಗಳು (86,83,851 ರೂ.), 10 ಹಣ ವಸೂಲಿ ಪ್ರಕರಣಗಳು (40,63,320 ರೂ.), 15 ಆಸ್ತಿ ದಾವೆಗಳು, 40 ಜನನ–ಮರಣ ಪ್ರಕರಣಗಳು, 1 ಮೋಟಾರ್ ವಾಹನ ಕಾಯ್ದೆ (12 ಲಕ್ಷ), ಸಿವಿಲ್ ಮತ್ತು ಕ್ರಿಮಿನಲ್ ಹಾಗೂ ವ್ಯಾಜ್ಯ ಪೂರ್ವ ಪ್ರಕರಣಗಳು ಸೇರಿದಂತೆ 1276 ಪ್ರಕರಣಗಳು 4.67 ಕೋಟಿಗೆ ಇತ್ಯರ್ಥವಾಯಿತು.

ಮಾ.14ಕ್ಕೆ 8ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ 2182, ಪ್ರಧಾನ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಲಯದಲ್ಲಿ 2331, ಹೆಚ್ಚುವರಿ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ 1421, ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ 3773, ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ 2922 ಪ್ರಕರಣಗಳು ಸೇರಿ ಒಟ್ಟು 12630 ಪ್ರಕರಣಗಳು ಬಾಕಿ ಇದ್ದು, ಈ ಪೈಕಿ 4379 ಪ್ರಕರಣಗಳನ್ನು ರಾಷ್ಟ್ರೀಯ ಲೋಕ ಅದಾಲತ್‌ಗೆ ಕೈಗೆತ್ತಿಕೊಂಡು 1276 ಪ್ರಕರಣಗಳನ್ನು ರಾಜಿ ಮೂಲಕ ಇತ್ಯರ್ಥಗೊಳಿಸಲಾಯಿತು.

ಲೋಕ ಅದಾಲತ್‌ನಲ್ಲಿ 8ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಟಿ.ಗೋವಿಂದಯ್ಯ, ಹೆಚ್ಚುವರಿ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರಾದ ಭಾಗ್ಯಮ್ಮ, ಪ್ರಧಾನ ಸಿವಿಲ್ ನ್ಯಾಯಾಧೀಶ ಹಾಗೂ ತಾಲೂಕು ಕಾನೂನು ಸೇವಾ ಸಮಿತಿ ಸದಸ್ಯ ಕಾರ್ಯದರ್ಶಿ ಆಯಿಷಾಬಿ .ಪಿ. ವಜೀದ್, ಹೆಚ್ಚುವರಿ ಸಿವಿಲ್ ನ್ಯಾಯಾಧೀಶರಾದ ನಮ್ರತಾ, ವಕೀಲರ ಸಂಘದ ಅಧ್ಯಕ್ಷ ಶಿವಣ್ಣೇಗೌಡ, ಉಪಾಧ್ಯಕ್ಷ ಹರೀಶ್ ಕುಮಾರ್, ಕಾರ್ಯದರ್ಶಿ ಸಂದೀಪ್ ಕುಮಾರ್, ವಕೀಲರು, ಕಕ್ಷಿದಾರರು ಉಪಸ್ಥಿತರಿದ್ದರು.

ಶೈವ ತತ್ವ ಬಲಪಡಿಸಲು ಶ್ರಮಿಸಿದ ರೇಣುಕಾಚಾರ್ಯರು



ಪಿರಿಯಾಪಟ್ಟಣದಲ್ಲಿ ರೇಣುಕಾಚಾರ್ಯ ಜಯಂತಿ ನಡೆಯಿತು.

ಪಿರಿಯಾಪಟ್ಟಣ, ಮಾ.15– ಜಗದ್ಗುರು ರೇಣುಕಾಚಾರ್ಯರು ವೀರಶೈವ ಧರ್ಮದ ಮಹಾನ್ ಗುರುಗಳು. ಅವರ ತತ್ವ ಬದುಕಿನ ಚರಿತ್ರೆ ಮತ್ತು ಧಾರ್ಮಿಕ ಸಾಧನೆಗಳು ಭಾರತೀಯ ಸಾಮಾಜಿಕ ಮತ್ತು ಧಾರ್ಮಿಕ ಚರಿತ್ರೆಯಲ್ಲಿ ಮಹತ್ವಪೂರ್ಣ ಸ್ಥಾನ ಪಡೆದಿವೆ ಎಂದು ಶ್ರೀರಾಮ ಪ್ರೌಢಶಾಲೆ ಮುಖ್ಯ ಶಿಕ್ಷಕ ಕಿಶೋರ್ ಆರಾಧ್ಯ ಅಭಿಪ್ರಾಯಪಟ್ಟರು.

ಪಟ್ಟಣದ ತಾಲೂಕು ಕಚೇರಿಯಲ್ಲಿ ಆಯೋಜಿಸಿದ್ದ ಗುರು ಶ್ರೀರೇಣುಕಾಚಾರ್ಯ ಜಯಂತಿಯಲ್ಲಿ ಮಾತನಾಡಿದ ಅವರು, ರೇಣುಕಾಚಾರ್ಯರ ಬಾಲ್ಯದಲ್ಲೇ ಭಕ್ತಿಯಿಂದ ಪರಿಪೂರ್ಣರಾಗಿದ್ದರು. ಋಷಿಗಳ ಜೊತೆ ನಿರಂತರ ಜ್ಞಾನ ಸಾಧನೆ ಮಾಡಿ ಶೈವ ತತ್ವಗಳನ್ನು ಆಳವಾಗಿ ಅಧ್ಯಯನ ಮಾಡಿದರು. ಲಿಂಗಾಯತ ಧರ್ಮದ ಮೂಲ ಸಿದ್ಧಾಂತಗಳನ್ನು ಪ್ರತಿಪಾದಿಸಲು ಮತ್ತು ಶೈವ ಪರಂಪರೆ ಬಲಪಡಿಸಲು ಅವರು ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದರು. ಲಿಂಗಾಯತ ಧರ್ಮ ಸ್ಥಾಪನೆ ಮಾಡುವ ಮೂಲಕ ಶೈವ ತತ್ವವನ್ನು ಜನಸಾಮಾನ್ಯರಿಗೆ ತಲುಪಿಸಲು ಹಾಗೂ ಅದನ್ನು ದೈನಂದಿನ ಜೀವನದ ಭಾಗವನ್ನಾಗಿ ಮಾಡಲು ಶ್ರಮಿಸಿದರು.

ರೇಣುಕಾಚಾರ್ಯರು 'ಇಷ್ಟಲಿಂಗ' ಧಾರಣೆ ಮೂಲಕ ಭಗವಂತನನ್ನು ವೈಯಕ್ತಿಕ ಅನುಭವದ ಮೂಲಕ ಅರಿತುಕೊಳ್ಳಬೇಕೆಂಬ ತತ್ವವನ್ನು ಪ್ರಚಾರ ಮಾಡಿದರು. ಅಧ್ಯಾತ್ಮದ ಜೊತೆ ಜೊತೆಗೆ ಶಿವನ ಆರಾಧನೆ ಮಾಡುವ ಮೂಲಕ ಕರ್ಮಕಾಂಡಗಳನ್ನು ತೊರೆದು ಶುದ್ಧ ಮನಸ್ಸಿನಿಂದ ಪೂಜಿಸುವ ತತ್ವವನ್ನು ಅಭಿವೃದ್ಧಿಗೊಳಿಸಿದರು ಎಂದರು.

ರೇಣುಕಾಚಾರ್ಯರು ವಚನಗಳ ಮೂಲಕ ತಮ್ಮ ತತ್ವಗಳನ್ನು ಜನರಿಗೆ ತಿಳಿಸಿಕೊಟ್ಟರು. ಅವರ ಶ್ರಮ, ಭಕ್ತಿ, ನೈತಿಕತೆ ಮತ್ತು ಸಮಾನತೆ ಎಂಬ ತತ್ವಗಳು ಇಂದು ಸಮಾಜದ ಸಮಾನತೆ, ಧಾರ್ಮಿಕ ಮತ್ತು ಆಧ್ಯಾತ್ಮಿಕ ಪ್ರಗತಿಗೆ ದಾರಿ ದೀಪದಂತಿವೆ. ಹೀಗಾಗಿ ಅವರ ತತ್ವಾದರ್ಶಗಳನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಪುರಸಭೆ ಮಾಜಿ ಸದಸ್ಯ ಮಂಜುನಾಥ ಮಾತನಾಡಿದರು. ಸಮಾರಂಭದಲ್ಲಿ ತಾಲೂಕು ವೀರಶೈವ ಸಮಾಜದ ಅಧ್ಯಕ್ಷ ಪರಮೇಶ್, ಸರ್ಕಾರಿ ನೌಕರ ಸಂಘದ ಅಧ್ಯಕ್ಷ ಕೃಷ್ಣೇಗೌಡ, ಶಿರಸ್ತೇದಾರ್ ಶಕೀಲಾ, ಪುರಸಭಾ ಮುಖ್ಯಾಧಿಕಾರಿ ಮಧು, ತಾಪಂ ಅಧಿಕಾರಿ ರಂಗನಾಥ್, ಅಭಿ, ಸಮಾಜ ಕಲ್ಯಾಣ ಇಲಾಖೆ ಚಂದ್ರಶೇಖರ್, ರೈತ ಸಂಘದ ಸ್ವಾಮಿ, ಶ್ರೀಕಂಠ ಆರಾಧ್ಯ, ಪುಟ್ಟಯ್ಯ, ಸತೀಶ್ ಆರಾಧ್ಯ ಸೇರಿದಂತೆ ಇನ್ನಿತರರಿದ್ದರು.

ಗರಳಪುರಿ ಉತ್ಸವ ನನ್ನ ಕನಸಿನ ಕೂಸು

ಯೋಗ ಜಾಗೃತಿ ಪೋಸ್ಟರ್ ಬಿಡುಗಡೆಗೊಳಿಸಿದ ಶಾಸಕ ದರ್ಶನ್ ಧ್ರುವನಾರಾಯಣ್

ನಂಜನಗೂಡು, ಮಾ.15– ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಎಲ್ಲರನ್ನೂ ಬೆಸೆಯುವ ನಿಟ್ಟಿನಲ್ಲಿ ಗರಳಪುರಿ ಉತ್ಸವವನ್ನು ಇದೇ ಮೊದಲ ಬಾರಿಗೆ ಹಮ್ಮಿಕೊಳ್ಳಲಾಗಿದ್ದು, ಇದು ನನ್ನ ಕನಸಿನ ಕೂಸು ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ತಿಳಿಸಿದರು.



ಪೋಸ್ಟರ್ ಅನ್ನು ಶಾಸಕ ದರ್ಶನ್ ಧ್ರುವನಾರಾಯಣ್ ಬಿಡುಗಡೆಗೊಳಿಸಿದರು.

ನಗರದ ಹೌಸಿಂಗ್ ಬೋರ್ಡ್ ಕಾಲೋನಿಯಲ್ಲಿರುವ ಶ್ರೀಪತಂಜಲಿ ಯೋಗ ಶಿಕ್ಷಣ ಸಮಿತಿಯ ಯೋಗ ಮಹಾಮನೆಯಲ್ಲಿ ಭಾನುವಾರ 'ಯೋಗ ಜಾಗೃತಿ' ಕಾರ್ಯಕ್ರಮದ ಪೋಸ್ಟರ್ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಶ್ರೀಕ್ಷೇತ್ರ ಕಲೆ ಹಾಗೂ ಸಾಂಸ್ಕೃತಿಕ ಕ್ಷೇತ್ರಕ್ಕೆ ತನ್ನದೇ ಆದ ಕೊಡುಗೆ ನೀಡಿರುವ ನಂಜನಗೂಡಿನಲ್ಲಿ ಮತ್ತೆ ಸಾಂಸ್ಕೃತಿಕ ವೈಭವ ಮರುಕಳಿಸುವ ಜೊತೆಗೆ ಶ್ರೀಕಂಠೇಶ್ವರಸ್ವಾಮಿ ಗೌತಮ ಪಂಚ ಮಹಾರಥೋತ್ಸವಕ್ಕೆ ಮತ್ತಷ್ಟು ಮೆರುಗು ನೀಡುವ ನಿಟ್ಟಿನಲ್ಲಿ ನಗರದಲ್ಲಿ ಇದೇ ಮೊದಲ ಬಾರಿಗೆ ಗರಳಪುರಿ ಉತ್ಸವ ಹಮ್ಮಿಕೊಳ್ಳಲಾಗಿದೆ. ಮಾ.22 ರಿಂದ 29ರವರೆಗೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ನಂಜನಗೂಡಿನ ಜನತೆ ಇದರ ಭಾಗವಾಗಬೇಕೆಂಬುದು ನನ್ನ ಆಶಯ ಎಂದರು.

ಮಾ.22ರಂದು ಶ್ರೀಕಂಠೇಶ್ವರಸ್ವಾಮಿ ದೇವಾಲಯದ ಆವರಣದಲ್ಲಿ ಯೋಗ ಜಾಗೃತಿ ಕಾರ್ಯಕ್ರಮದ ಮೂಲಕ ಗರಳಪುರಿ ಉತ್ಸವಕ್ಕೆ ವಿಧ್ಯುಕ್ತ ಚಾಲನೆ ನೀಡಲಾಗುವುದು. ಎಲ್ಲರೂ ಪಕ್ಷಾತೀತವಾಗಿ, ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಭಾಗವಹಿಸುವ ಮೂಲಕ ಉತ್ಸವದ ಯಶಸ್ವಿಗೆ ಮುಂದಾಗಬೇಕು. ಆ ಮೂಲಕ ಮುಂದಿನ ದಿನಗಳಲ್ಲಿ ಈ ಉತ್ಸವಕ್ಕೆ ಮತ್ತಷ್ಟು ರಂಗು ನೀಡಲು ಪ್ರೇರಣೆ ಸಿಕ್ಕಂತಾಗುತ್ತದೆ. ಸ್ಥಳೀಯ ಕಲಾವಿದರಿಗೂ ಒಂದು ವೇದಿಕೆ ಕಲ್ಪಿಸಿಕೊಟ್ಟಂತಾಗುತ್ತದೆ ಎಂದರು.

ಇಂದಿನ ಯಾಂತ್ರಿಕ ಹಾಗೂ ಒತ್ತಡದ ಜೀವನದಲ್ಲಿ ನೆಮ್ಮದಿ, ಸಮಾಧಾನ, ಆರೋಗ್ಯಕ್ಕಾಗಿ ಯೋಗ ಅತ್ಯಂತ ಸಹಕಾರಿಯಾಗಿದೆ. ಈ ದಿಸೆಯಲ್ಲಿ ಯೋಗ ಮಹಾಮನೆಯ ಪ್ರಕಾಶ್ ಜಿ.ಉಡಿಗಾಲ ಅವರು ಕಳೆದ 3 ದಶಕಗಳಿಂದ ಉಚಿತವಾಗಿ ಯೋಗ ಶಿಕ್ಷಣ ನೀಡುವ ಜೊತೆಗೆ ಸಾಮುದಾಯಿಕವಾಗಿ ಎಲ್ಲರನ್ನೂ ಒಗ್ಗೂಡಿಸಿ ಸೇವಾ ಕಾರ್ಯಗಳನ್ನು ಮಾಡುತ್ತಾ ಉತ್ತಮ ಸಮಾಜ ನಿರ್ಮಾಣದಲ್ಲಿ ತೊಡಗಿರುವುದು ಅತೀವ ಸಂತಸ ತಂದಿದೆ. ಅವರ ಎಲ್ಲಾ ಕಾರ್ಯ ಯೋಜನೆಗಳಿಗೆ ನಾವು ಕೂಡ ಬೆಂಬಲಿಸುವ ಗಿ ನಂತ ಅವರ ಸೇವೆ ಮತ್ತಷ್ಟು ವಿಸ್ತರಿಸಲು ಅಗತ್ಯ ನೆರವು ನೀಡುವುದಾಗಿ ಭರವಸೆ ನೀಡಿದರು.

ಶ್ರೀಪತಂಜಲಿ ಯೋಗ ಶಿಕ್ಷಣ ಸಮಿತಿ ಕಾರ್ಯದರ್ಶಿ ಎನ್.ಆರ್.ಗಣೇಶ್ ಮೂರ್ತಿ ಮಾತನಾಡಿ, ಕಳೆದ 18 ವರ್ಷಗಳಿಂದ ಯೋಗ ಮಹಾಮನೆ ತೆರೆದು ಉಚಿತವಾಗಿ ಯೋಗ, ಧ್ಯಾನ, ಮಕ್ಕಳ ಶಿಬಿರವನ್ನು ಹಮ್ಮಿಕೊಳ್ಳಲಾಗುತ್ತಾ ಬರಲಾಗಿದೆ. ಯೋಗಬಂಧುಗಳ ಸಹಕಾರದಿಂದ ಸಮಿತಿಯ ಎಲ್ಲಾ ಪರೋಪಕಾರ್ಯಗಳು ನಿರಂತರವಾಗಿ ನಡೆಯುತ್ತಿವೆ ಎಂದರು.

ಈ ವೇಳೆ ಯೋಗ ಮಹಾಮನೆ ಪ್ರಧಾನ ಯೋಗ ಶಿಕ್ಷಕ ಪ್ರಕಾಶ್ ಜಿ.ಉಡಿಗಾಲ, ಶ್ರೀಪತಂಜಲಿ ಯೋಗ ಶಿಕ್ಷಣ ಸಮಿತಿ ಅಧ್ಯಕ್ಷ ಆರ್.ವಿ.ರೇವಣ್ಣ, ನಂಜನಗೂಡು ಯೋಗ ಫೌಂಡೇಶನ್ ಗೌರವಾಧ್ಯಕ್ಷ ಹಂಡುವಿನಹಳ್ಳಿ ಹೆಚ್.ಎಸ್.ರಾಜು, ಅಧ್ಯಕ್ಷ ಡಿಗ್ಗೇನಹಳ್ಳಿ ಪ್ರಕಾಶ್, ಕಸಾಪ ತಾಲೂಕು ಅಧ್ಯಕ್ಷೆ ಲತಾ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್, ಪುರಸಭಾ ಮಾಜಿ ಅಧ್ಯಕ್ಷ ಶ್ರೀಧರ್, ಮಾಜಿ ಸದಸ್ಯರಾದ ಗಾಯತ್ರಿ, ಅನುಸೂಯ, ಮಹೇಶ್ ಉಪಸ್ಥಿತರಿದ್ದರು.

ನಂಜನಗೂಡಿನಲ್ಲಿ ರಾಜ್ಯ ಮಟ್ಟದ ದೇಹದಾರ್ಢ್ಯ ಸ್ಪರ್ಧೆ

ದಾವಣಗೆರೆ ಮಂಜುನಾಥ್‌ಗೆ 'ವಜ್ರದೇಹಿ' ಪ್ರಶಸ್ತಿ

ನಂಜನಗೂಡು, ಮಾ.15– ನಗರದ ಜೂನಿಯರ್ ಕಾಲೇಜು ಮೈದಾನದಲ್ಲಿ ಭಾನುವಾರ ನಂಜನಗೂಡು ಸ್ಪೋರ್ಟ್ಸ್ ಫೌಂಡೇಷನ್ ಆಯೋಜಿಸಿದ್ದ ರಾಜ್ಯ ಮಟ್ಟದ ದೇಹದಾರ್ಢ್ಯ ಸ್ಪರ್ಧೆಯಲ್ಲಿ ದಾವಣಗೆರೆಯ ಮಂಜುನಾಥ್ ಅವರು 'ವಜ್ರದೇಹಿ' ಪ್ರಶಸ್ತಿ ಹಾಗೂ ಆರ್.ಧ್ರುವನಾರಾಯಣ್ ಕಪ್ ಜೊತೆಗೆ 55,555 ರೂ. ನಗದು ಪುರಸ್ಕಾರ ಪಡೆದರು.

2ನೇ ಸ್ಥಾನ ಪಡೆದ ಅಮಾನ್ ಆರ್.ಶೇಟ್ ಜಗದೀಶ್ ಅಣ್ಣಯ್ಯಗೌಡ ಸ್ಮಾರಕ ಕಪ್ ಜೊತೆಗೆ 33,333, 3ನೇ ಸ್ಥಾನ ಪಡೆದ ಬೆಳಗಾವಿಯ ಪ್ರಶಾಂತ್ ಜಯರಾಮರೆಡ್ಡಿ ಸ್ಮಾರಕ ಕಪ್ ಜೊತೆಗೆ 22,222 ರೂ. ರಾಯಚೂರಿನ ರಿಷಭ್ ಪಡೆದರು. ಬೆಸ್ಟ್ ಪೋಜರ್ ಪ್ರಶಸ್ತಿ ಪಡೆದರು.

55 ಕೆಜಿ ವಿಭಾಗದಲ್ಲಿ ಉತ್ತರ ಕನ್ನಡದ ಸಂತೋಷ್ ಶಿಂಧೆ, 60 ಕೆಜಿ ವಿಭಾಗದಲ್ಲಿ ಮೈಸೂರಿನ ಭರತ್, 65 ಕೆಜಿ ವಿಭಾಗದಲ್ಲಿ ಕಿರಣ್ ರಾಯಚೂರ್, 70 ಕೆಜಿ ವಿಭಾಗದಲ್ಲಿ ದಕ್ಷಿಣ ಕನ್ನಡದ ಶಶಾಂಕ್, 75 ಕೆಜಿ ವಿಭಾಗದಲ್ಲಿ ಪ್ರತಾಪ್ ಕಲ್ಲುಂಡ್ರಿಕರ್, 80 ಕೆಜಿ ವಿಭಾಗದಲ್ಲಿ ಬೆಳಗಾವಿಯ ಪ್ರಶಾಂತ್ ಕನ್ನೂಕರ್, 85 ಕೆಜಿ ವಿಭಾಗದಲ್ಲಿ ಉತ್ತರ ಕನ್ನಡದ ಅಮಾನ್ ಆರ್.ಶೇಟ್, 85 ಪ್ಲಸ್ ವಿಭಾಗದಲ್ಲಿ ದಾವಣಗೆರೆಯ ಮಂಜುನಾಥ್ ಪ್ರಥಮ ಸ್ಥಾನ ಗಳಿಸಿದರು. ಉಡುಪಿಯ 69 ವರ್ಷದ ನಿವೃತ್ತ ನೇವಿ ಅಧಿಕಾರಿ ಬಾಬು ಪೂಜಾರಿ ಉತ್ತಮ ಪ್ರದರ್ಶನ ನೀಡುವ ಮೂಲಕ ಪ್ರೇಕ್ಷಕರ ಮೆಚ್ಚುಗೆ ಗಳಿಸಿದರು.



ಸ್ಪರ್ಧೆ ವಿಜೇತರಾದ ದಾವಣಗೆರೆಯ ಮಂಜುನಾಥ್ ವಜ್ರದೇಹಿ ಪ್ರಶಸ್ತಿ ಹಾಗೂ ಆರ್.ಧ್ರುವನಾರಾಯಣ್ ಕಪ್ ಪಡೆದರು.

ಬಹುಮಾನ ವಿತರಿಸಿ ಮಾತನಾಡಿದ ಶಾಸಕ ದರ್ಶನ್ ಧ್ರುವನಾರಾಯಣ್, ನಗರದಲ್ಲಿ ಸತತ 21 ವರ್ಷಗಳಿಂದ ನಂಜನಗೂಡು ಸ್ಪೋರ್ಟ್ಸ್ ಫೌಂಡೇಷನ್ ರಾಜ್ಯ ಮಟ್ಟದ ದೇಹದಾರ್ಢ್ಯ ಸ್ಪರ್ಧೆಯನ್ನು ಉತ್ತಮವಾಗಿ ಆಯೋಜಿಸುತ್ತಿರುವುದು ಶ್ಲಾಘನೀಯ. ಯುವಕರು ಹೆಚ್ಚು ದೇಹ ದಾರ್ಢ್ಯ ಕ್ರೀಡೆಯಲ್ಲಿ ತೊಡಗುತ್ತಿರುವುದು ಉತ್ತಮ ಬೆಳವಣಿಗೆ. ನಂಜನಗೂಡಿನ ಜನ ಕ್ರೀಡಾ ಪ್ರೇಮಿಗಳು. ನಗರ ರಾಜ್ಯ ಮಟ್ಟದ ಫುಟ್‌ಬಾಲ್, ಖೋಖೋ, ಕ್ರಿಕೆಟ್, ಕಬ್ಬಡಿ, ನಾಡಕುಸ್ತಿ ಪಟುಗಳಿಗೆ ಹೆಸರುವಾಸಿಯಾಗಿದೆ. ದೇಹದಾರ್ಢ್ಯ ಮೊದಲು ಉತ್ತಮ ದೇಹದಾರ್ಢ್ಯ ಹೊಂದಲು ರಾಸಾಯನಿಕಗಳ ಮೊರೆ ಹೋಗದೆ ಪೌಷ್ಟಿಕ ಆಹಾರ ಸೇವಿಸುವ ಮೂಲಕ ಆರೋಗ್ಯಕರ ಜೀವನ ನಡೆಸಬೇಕು. ನಗರದ ಕ್ರೀಡಾಳುಗಳಿಗೆ ಕ್ರೀಡಾ ಸ್ಪರ್ಧೆಗಳಿಗೆ ಪ್ರೋತ್ಸಾಹ ನೀಡಬೇಕು. ಯುವಕರನ್ನು ಕ್ರೀಡೆಗಳತ್ತ ಸೆಳೆಯಲು ಹೆಚ್ಚಿನ ಪ್ರೋತ್ಸಾಹ ನೀಡಲಾಗುವುದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಕೇಶವಮೂರ್ತಿ, ರಾಜ್ಯ ಬಾಡಿ ಬಿಲ್ಡಿಂಗ್ ಅಸೋಸಿಯೇಷನ್ ಅಧ್ಯಕ್ಷ ಅಜಿತ್ ಸಿದ್ದಣ್ಣನವರ್, ನಂಜನಗೂಡು ಸ್ಪೋರ್ಟ್ಸ್ ಫೌಂಡೇಷನ್ ಕಾರ್ಯದರ್ಶಿ ಬಿ.ಉಮಾ ಮಹೇಶ್, ಮುಕುಂದ ಪಟೇಲ್, ಯು.ಎನ್.ಪದ್ಮನಾಭರಾವ್, ಜಿಪಂ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ಯುವ ಬ್ರಿಗೇಡ್ ರಾಜ್ಯ ಸಂಚಾಲಕ ಎಸ್.ಚಂದ್ರಶೇಖರ್, ಕೃಷ್ಣಪ್ಪ, ಆನಂದ ರಾಮನ್, ಸಿ.ಎಂ.ಶಂಕರ್, ನಂದ ಕುಮಾರ್, ಡಾ.ಶ್ರೀಕಾಂತ್, ಇ.ಮಹದೇವ ಕುಮಾರ್, ನಂದೀಶ್ ಪ್ರೀತಮ್, ಇಂದ್ರನ್ ಬಾಬು, ನಟೇಶ್, ಉಮಾಶಂಕರ್, ಶ್ರೀನಾಥ್ ಉಪಸ್ಥಿತರಿದ್ದರು.

ಮಾರ್ಚಹಳ್ಳಿಯಲ್ಲಿ ಅಭಿವೃದ್ಧಿ ಕಾಮಗಾರಿಗೆ ಚಾಲನೆ

ಕೆ.ಆರ್.ನಗರ: ಹಲವು ದಶಕಗಳಿಂದ ಅಭಿವೃದ್ಧಿ ಕಾಣದ ಗ್ರಾಮಗಳಿಗೆ ಅನುದಾನ ನೀಡಲಾಗಿದ್ದು, ಕಾಮಗಾರಿಗಳಿಗೆ ಚಾಲನೆ ನೀಡಲಾಗುತ್ತಿದೆ ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.

ತಾಲೂಕಿನ ಮಾರ್ಚಹಳ್ಳಿ ಗ್ರಾಮದಲ್ಲಿ 4 ಗ್ರಾಮ ದೇವತೆಗಳ ದೇವಾಲಯಗಳ ಜೀರ್ಣೋದ್ಧಾರ ಮತ್ತು ಸಿಸಿ ರಸ್ತೆ, ಬಾಕ್ಸ್ ಚರಂಡಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಇಂತಹ ಹಲವು ಗ್ರಾಮಗಳಿಗೆ ಅಗತ್ಯ ಅನುದಾನ ಹಂಚಿಕೆ ಮಾಡಿ ಗ್ರಾಮಗಳಲ್ಲಿ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಲಾಗಿದೆ ಎಂದರು.

ಮಾರ್ಚಹಳ್ಳಿಯಲ್ಲಿ 750 ಮತದಾರರಿದ್ದು, ಮತದಾನ ಮಾಡಲು ಪಕ್ಕದ ಗ್ರಾಮಕ್ಕೆ ಹೋಗುವುದನ್ನು ತಪ್ಪಿಸಿ ಗ್ರಾಮದಲ್ಲೇ ಮತಗಟ್ಟೆ ಕೇಂದ್ರ ತೆರೆಯಬೇಕೆಂದು ಗ್ರಾಮಸ್ಥರು ಬೇಡಿಕೆ ಸಲ್ಲಿಸಿದ್ದು, ಮುಂಬರುವ ಚುನಾವಣೆಯಲ್ಲಿ ಗ್ರಾಮದಲ್ಲಿ ಮತಗಟ್ಟೆ ಕೇಂದ್ರ ತೆರೆಯಲು ಕ್ರಮ ವಹಿಸುವುದಾಗಿ ಭರವಸೆ ನೀಡಿದರು.



ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಡಿ.ರವಿಶಂಕರ್ ಚಾಲನೆ ನೀಡಿದರು.

ಪಡಿತರದಾರರು ಆಹಾರ ಪದಾರ್ಥಗಳನ್ನು ಪಡೆಯಲು ಪಕ್ಕದ ವಡ್ಡರಹಳ್ಳಿ ಗ್ರಾಮಕ್ಕೆ ತೆರಳುತ್ತಿರುವುದು ನನ್ನ ಗಮನಕ್ಕೆ ಬಂದ ಕೂಡಲೇ ಗ್ರಾಮದಲ್ಲಿ ಪಡಿತರ ವಿತರಣೆ ಉಪಕೇಂದ್ರ ತೆರೆದಿದ್ದು, ಪಡಿತರ ಚೀಟಿದಾರರಿಗೆ ಆಹಾರ ವಿತರಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸುವುದಾಗಿ ತಿಳಿಸಿದರು.

ಈ ವೇಳೆ ಜಿಪಂ ಮಾಜಿ ಸದಸ್ಯ ಶಿವಾಮ, ಪಿಎಸಿಸಿಎಸ್ ನಿರ್ದೇಶಕರಾದ ವಿಜಯ ಕುಮಾರ್, ರಮೇಶ್, ತಾಪಂ ಮಾಜಿ ಸದಸ್ಯ ನಾಗೇಗೌಡ, ಕಾಂಗ್ರೆಸ್ ಮುಖಂಡ ಬಿ.ಎಂ.ಗಿರೀಶ್, ಲೋಕೇಶ್, ರಾಜಶೇಖರ್, ಪಾರ್ವತಮ್ಮ, ಸಿದ್ದೇಗೌಡ, ಚಂದನ್, ಬಸವರಾಜು, ಮತ್ತಿತರರಿದ್ದರು.

ರೈತ ಪರ್ವ ಸಂಘ ನಾಮಫಲಕ ಉದ್ಘಾಟನೆ



ಮೈಸೂರು ತಾಲೂಕಿನ ಕೆಂಚಲಗೂಡು ಗ್ರಾಮದಲ್ಲಿ ರೈತ ಪರ್ವ ಸಂಘದ ಗ್ರಾಮ ಘಟಕ ನಾಮಫಲಕವನ್ನು ಸಂಘಟನೆ ರಾಜ್ಯಾಧ್ಯಕ್ಷ ಟಿ.ವಿ.ಅರುಣ್ ಕುಮಾರ್ ಭಾನುವಾರ ಉದ್ಘಾಟಿಸಿದರು. ಈ ವೇಳೆ ರಾಜ್ಯ ಕಾರ್ಯದರ್ಶಿ ಚಾಮರಾಜು, ಕಾರ್ಯಾಧ್ಯಕ್ಷ ಶ್ರೀಧರ್ ನಾಯಕ್, ನವೀನ್ ಕುಮಾರ್, ಸಹ ಕಾರ್ಯದರ್ಶಿಗಳಾದ ರಾಜಣ್ಣ, ಮಂಜಣ್ಣ, ಕಾನೂನು ಸಲಹೆಗಾರ ಮಲ್ಲೇಶ್, ರಾಜ್ಯ ಸಂಚಾಲಕ ಮಂಚನಾಯಕ, ಜಿಲ್ಲಾ ಕಾರ್ಯಾಧ್ಯಕ್ಷ ಶಿವಯೋಗಿ, ತಾಲೂಕು ಕಾರ್ಯದರ್ಶಿ ಚಿಕ್ಕ ನಾಯಕ, ತಾಲೂಕು ಅಧ್ಯಕ್ಷ ಪಾಪೇಗೌಡ ಸೇರಿದಂತೆ ಇತರರಿದ್ದರು.

ಮಾದೇಗೌಡನಹುಂಡಿ ಪಿಎಸಿಎಸ್ ನಿರ್ದೇಶಕರ ಚುನಾವಣೆ

ಎನ್.ಅನಿಲ್ ಕುಮಾರ್ ಬಣದ ಸದಸ್ಯರ ಭರ್ಜರಿ ಜಯ

ತಿ.ನರಸೀಪುರ, ಮಾ.15– ತಾಲೂಕಿನ ಮಾದೇಗೌಡನಹುಂಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರ ಆಯ್ಕೆಗಾಗಿ ಭಾನುವಾರ ನಡೆದ ಚುನಾವಣೆಯಲ್ಲಿ ಎಪಿಎಂಸಿ ಮಾಜಿ ಅಧ್ಯಕ್ಷ ಎನ್.ಅನಿಲ್ ಕುಮಾರ್ ಬಣದ ಸದಸ್ಯರು ಭರ್ಜರಿ ಗೆಲುವು ಸಾಧಿಸಿದ್ದಾರೆ.

ಒಟ್ಟು 12 ಸದಸ್ಯ ಬಲದ ನಿರ್ದೇಶಕರ ಬಲದ ಸಹಕಾರ ಸಂಘದ ನಿರ್ದೇಶಕರ ಚುನಾವಣೆಯಲ್ಲಿ ಎಪಿಎಂಸಿ ಮಾಜಿ ಅಧ್ಯಕ್ಷ ಎನ್.ಅನಿಲ್ ಕುಮಾರ್ ಬಣದ ಸಾಲಗಾರರ ಕ್ಷೇತ್ರದಿಂದ ಸ್ಪರ್ಧಿಸಿದ್ದ 10 ಮಂದಿ ಹಾಗೂ ಸಾಲಗಾರರಲ್ಲದ ಕ್ಷೇತ್ರದಿಂದ ಸ್ಪರ್ಧಿಸಿದ್ದ ಓರ್ವ ನಿರ್ದೇಶಕರು ಭರ್ಜರಿ ಗೆಲುವು ಸಾಧಿಸುವ ಮೂಲಕ ಸಂಘದ ಅಧಿಕಾರವನ್ನು ಕ್ಲೀನ್‌ಸ್ವೀಪ್ ಮಾಡಿದರು.

ಮಾ.9ರಂದು ನಡೆದ ಚುನಾವಣೆಯಲ್ಲಿ ಸಾಲಗಾರರ ಕ್ಷೇತ್ರದಿಂದ ಆಯ್ಕೆ ಬಯಸಿ



ಮಾದೇಗೌಡನಹುಂಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಕಟ್ಟಡ



ನೂತನ ನಿರ್ದೇಶಕರು ಸಂಘವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವ ಜೊತೆಗೆ ಈ ಭಾಗದ ರೈತರಿಗೆ ಹೆಚ್ಚಿನ ಸಾಲ ಸೌಲಭ್ಯ ದೊರಕಿಸಿ ಕೊಡುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಿ, ತಾಲೂಕಿಗೆ ಸಂಘ ಮಾದರಿ ಮಾಡಲು ಸಂಘಟಿತ ಪ್ರಯತ್ನ ಮಾಡಬೇಕು. ಸಿಎಂ ಸಿದ್ದರಾಮಯ್ಯ ಎಂಎಲ್‌ಸಿ ಡಾ.ಯತೀಂದ್ರ ನಮ್ಮ ಕ್ಷೇತ್ರದವರೇ ಆಗಿರುವ ಹಿನ್ನೆಲೆಯಲ್ಲಿ ಸಂಘದ ನೂತನ ವರಿಷ್ಠರುಗಳು ವಾರು ಹೆಚ್ಚಿನ ಅನುದಾನ ತಂದು ಸಂಘವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವ ಪ್ರಾಮಾಣಿಕ ಪ್ರಯತ್ನ ಮಾಡಬೇಕಿದೆ.

– ಎನ್.ಅನಿಲ್ ಕುಮಾರ್, ಎಪಿಎಂಸಿ ಮಾಜಿ ಅಧ್ಯಕ್ಷ.

ಎನ್.ಅನಿಲ್ ಕುಮಾರ್, ಡಿ.ನಾಗರಾಜು, ಮಹದೇವಸ್ವಾಮಿ, ಹೆಚ್.ಸಿ.ರಾಜೇಶ್, ರಾಮೇಗೌಡ, ತಾಯಮ್ಮ, ಸುಶೀಲ, ನೀಲಸಿದ್ದಯ್ಯ, ಬಿ.ಪುಟ್ಟಸ್ವಾಮಿ, ಮಾದೇಗೌಡ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧವಾಗಿ ಆಯ್ಕೆಯಾಗಿದ್ದರು. ಉಳಿದ 1 ಸ್ಥಾನಕ್ಕಾಗಿ ಭಾನುವಾರ ಸಂಘದ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಸಾಲಗಾರರಲ್ಲದ ಕ್ಷೇತ್ರದಿಂದ ಅಂಕ್ಕೆ ಬಯಸಿ ಸಿ.ಎನ್.ಶಿವಣ್ಣ ಹಾಗೂ ಮಾಜಿ ಅಧ್ಯಕ್ಷ ಅಂಬರೀಶ ನಾಮಪತ್ರ ಸಲ್ಲಿಸಿದ್ದರು. ಬಳಿಕ ನಡೆದ ಚುನಾವಣೆಯಲ್ಲಿ ಸಿ.ಎನ್.ಶಿವಣ್ಣ 75 ಮತ ಪಡೆದು ಗೆಲುವು ಸಾಧಿಸಿದರೆ, ಅಂಬರೀಶ 21 ಮತ ಪಡೆದು ಸೋಲು ಅನುಭವಿಸಿದರು. ಸಹಕಾರ ಸಂಘದ ಒಂದು ಕ್ಷೇತ್ರದಲ್ಲಿ ಪ.ಪಂಗಡದ ಸದಸ್ಯರು ಇಲ್ಲದ ಕಾರಣ ಚುನಾವಣೆ ನಡೆಸದೇ ಖಾಲಿ ಬಿಡಲಾಗಿದೆ.

ಚುನಾವಣಾಧಿಕಾರಿ ಪಿಎಸಿಎಸ್ ರಿಟರ್ನಿಂಗ್ ಅಧಿಕಾರಿ ಬಿ.ರಾಜು ನೂತನ ನಿರ್ದೇಶಕರ ಆಯ್ಕೆಯನ್ನು ಘೋಷಿಸಿದರು. ಈ ವೇಳೆ ಸಂಘದ ಆವರಣದಲ್ಲಿ ನೆರೆದಿದ್ದ ನಿರ್ದೇಶಕರ ಬೆಂಬಲಿಗರು ಸಿಹಿ ಹಂಚಿ, ಪಟಾಕಿ ಸಿಡಿಸಿ ವಿಜಯೋತ್ಸವ ಆಚರಿಸಿದರು.


ಈ ವೇಳೆ ಮಾದೇಗೌಡನಹುಂಡಿ ಪ್ರೇಮಕುಮಾರ್, ಹೊಂಬೇಗೌಡ, ಮಲ್ಲೇಗೌಡ, ಚುಂಚೇಗೌಡ, ನಾಗೇಂದ್ರ, ಎಂ.ಕೆ.ರಾಜು, ಹುಣಗನಹಳ್ಳಿ ಗ್ರಾಪಂ ಸದಸ್ಯ ನಾರಾಯಣ, ಹೆಚ್.ಸಿ.ಶಂಕರ, ಹೆಚ್.ಎಸ್. ರಾಜೇಶ್, ರಾಮಕೃಷ್ಣ, ದೇವರಾಜು, ಹೆಚ್.ಸಿ.ಚಂದ್ರ, ಕುಮಾರ, ಪಟ್ಟೇಹುಂಡಿ ಗೋಪಾಲ್, ರಂಗಸಮುದ್ರ ಮಂಜು, ತುಂಬಲ ಬಾಬು, ರಂಗನಾಥಪುರ ಗಣೇಶ್, ಮಲ್ಲೇಶ್, ಶ್ರೀನಿವಾಸ್, ಸಹಕಾರ ಸಂಘದ ಕಾರ್ಯದರ್ಶಿ ರಾಜೇಶ್ ಸೇರಿದಂತೆ ಮತ್ತಿತರರಿದ್ದರು.

ವರಸಿಂಗೇಗೌಡ ನಿಧನ




ಹೆಚ್.ಡಿ.ಕೋಟೆ, ಮಾ.15– ತಾಲೂಕಿನ ಹೈರಿಗೆ ಗ್ರಾಮದ ನಿವಾಸಿ ವರಸಿಂಗೇಗೌಡ(73) ಭಾನುವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಮೃತರ ಜಮೀನಿನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕಾಳೇಗೌಡ



ಹೆಚ್.ಡಿ.ಕೋಟೆ, ಮಾ.15– ಪತ್ರಕರ್ತ ಎಡತೊರೆ ಮಹೇಶ್ ಅವರ ತಂದೆ ಕಾಳೇಗೌಡ(78) ಶನಿವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ ಅಂತ್ಯಕ್ರಿಯೆ ಭಾನುವಾರ ಸ್ವಗ್ರಾಮದ ಮೃತರ ಜಮೀನಿನಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಚೆನ್ನಪ್ಪ ನಾಯಕ



ಸರಗೂರು, ಮಾ.15– ಪಟ್ಟಣದ 9ನೇ ವಾರ್ಡ್ ನಿವಾಸಿ ಚೆನ್ನಪ್ಪನಾಯಕ (53) ಭಾನುವಾರ ಮಧ್ಯಾಹ್ನ ನಿಧನರಾದರು.

ಮೃತರು ತಾಯಿ, ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಯಕ ಸಮಾಜದ ರುದ್ರಭೂಮಿಯಲ್ಲಿ ಸೋಮವಾರ ಮಧ್ಯಾಹ್ನ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ಗ್ರೀನ್ ಪೀಸ್ ಸೇರಿ ವಿವಿಧ ಸಂಘಟನೆಗಳ ನೆರವಿನೊಂದಿಗೆ

ವಿಶೇಷ ಮಕ್ಕಳ ಸುಗಮ ಸಂಚಾರಕ್ಕೆ ಜೀಬ್ರಾ ಕ್ರಾಸಿಂಗ್



ವ್ಹೀಲ್‌ಚೇರ್‌ನಲ್ಲಿ ಬರುವ ಮಕ್ಕಳಿಗಾಗಿ ರಸ್ತೆ ಬದಿ ಪಿಂಕ್ ಕಲರ್ ಬಣ್ಣ ಬಳಿದಿರುವುದು.

ಬಸ್ಸಿನಿಂದ ಕೆಳಗಿಳಿಸುತ್ತಾರೆ

ನನ್ನ ಮಗಳಿಗೆ ಈಗ 10 ವರ್ಷ. ಬೆಂಗಳೂರಿನಲ್ಲಿ ವಾಸವಿದ್ದ ನಾವು ಮಗಳ ಚಿಕಿತ್ಸೆಗಾಗಿ ಮೈಸೂರಿನ ಬೋಗಾದಿಯ ನಿರ್ಮಿತಿ ಕೇಂದ್ರದ ಬಳಿ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದೇವೆ. ಬೆಂಗಳೂರಿನಲ್ಲಿದ್ದಾಗ ಎರಡು ವರ್ಷದ ಹಿಂದೆ ನನ್ನ ಮಗಳು 3ನೇ ಮಹಡಿಯಿಂದ ಆಕಸ್ಮಿಕವಾಗಿ ಕೆಳಗೆ ಬಿದ್ದು ಗಾಯಗೊಂಡಿದ್ದಾಳೆ. ಇದರಿಂದ ಎರಡೂ ಕೈ-ಕಾಲು ಸ್ವಾಧೀನ ಕಳೆದುಕೊಂಡಂತೆ ಆಗಿದ್ದು, ಆಯಿಷ್‌ನಲ್ಲಿ ಚಿಕಿತ್ಸೆ ಕೊಡಿಸಲಾಗುತ್ತಿದೆ. ಪ್ರತೀ ದಿನ ನಿರ್ಮಿತಿ ಕೇಂದ್ರದ ಬಳಿಯಿಂದ ಆಯಿಷ್‌ವರೆಗೂ ಸಾರಿಗೆ ಸಂಸ್ಥೆಯ ಬಸ್‌ನಲ್ಲಿ ಬರುತ್ತೇವೆ. ನನ್ನ ಮಗಳ ಸ್ಥಿತಿ ನೋಡಿ ಕೆಲವು ಬಸ್ ಚಾಲಕರು ನಮ್ಮನ್ನು ಅನೇಕ ಬಾರಿ ಬಸ್ಸಿಗೆ ಹತ್ತಿಸಿಕೊಂಡಿಲ್ಲ. ಕೆಲವು ಸಮಯ ಬಸ್‌ನಲ್ಲಿ ಬಂದರೆ ಆಯಿಷ್ ಬಳಿ ಸಿಗ್ನಲ್ ಸಿಗುತ್ತದೆ. ತರಾತುರಿಯಲ್ಲಿ ಇಳಿಯುವಂತೆ ಬೆದರಿಸುತ್ತಾರೆ. ಇದರಿಂದ ನಾವು ಮನೆಯಿಂದಲೇ ನಡೆದುಕೊಂಡು ಬರುವ ಪರಿಸ್ಥಿತಿ ಇದೆ. ಆಯಿಷ್ ಸಿಗ್ನಲ್ ಬಳಿ ರಸ್ತೆ ದಾಟಲು ಜೀಬ್ರಾ ಕ್ರಾಸ್ ಇಲ್ಲ. ವಾಹನಗಳ ನಡುವೆ ವಿಶೇಷ ಮಕ್ಕಳನ್ನು ರಸ್ತೆ ದಾಟಿಸುವುದು ದುಸ್ಸಾಹಸವಾಗಿದೆ. ಈ ಹಿನ್ನೆಲೆಯಲ್ಲಿ ಆ ಸಿಗ್ನಲ್‌ನಲ್ಲಿ ಪೊಲೀಸರನ್ನು ನಿಯೋಜಿಸಬೇಕು. ವಿಶೇಷ ಮಕ್ಕಳನ್ನು ಕರೆತರುವ ಪೋಷಕರಿಗೆ ಸಾರಿಗೆ ಬಸ್‌ಗಳಲ್ಲಿ ಹತ್ತಿಸಿಕೊಳ್ಳುವಂತೆ ಕ್ರಮ ಕೈಗೊಳ್ಳಬೇಕು. ಇಂದು ಆಯಿಷ್ ಬಳಿ ಜೀಬ್ರಾ ಕ್ರಾಸ್ ಹಾಗೂ ನಡೆದಾಡಲು ಪಾಥ್ ಗುರುತಿಸುವುದು ಸಂತೋಷ ತಂದಿದೆ.

— ರತ್ನ, ವಿಶೇಷ ಮಗುವಿನ ತಾಯಿ

ಮೈಸೂರು, ಮಾ.15(ಎಂಟಿವೈ)– ಮೈಸೂರಿನ ಆಯಿಷ್ ಸಂಸ್ಥೆಗೆ ಚಿಕಿತ್ಸೆಗೆ ಬರುವ ವಿಶೇಷ ಮಕ್ಕಳ ಸುಗಮ ಸಂಚಾರಕ್ಕೆ ಗ್ರೀನ್ ಫೀಸ್ ಇಂಡಿಯಾ ಸ್ವಯಂಸೇವಕರು, ಮೈಸೂರು ಸ್ಕೂಲ್ ಆಫ್ ಆರ್ಕಿಟೆಕ್ಚರ್ ವಿದ್ಯಾರ್ಥಿಗಳು ಹಾಗೂ ವಿವಿಧ ಸಂಸ್ಥೆಗಳ ನೆರವಿನೊಂದಿಗೆ ಆಯಿಷ್ ಮುಂಭಾಗದ ಗೇಟ್ ಬಳಿ ಜೀಬ್ರಾ ಕ್ರಾಸಿಂಗ್, ವೀಲ್‌ಚೇರ್ ಸಂಚರಿಸಲು ಅವಕಾಶ ಮಾಡಿಕೊಡುವ ನಿಟ್ಟಿನಲ್ಲಿ ರಸ್ತೆಗೆ ಬಣ್ಣ ಬಳಿಯುವ ಮೂಲಕ ಗಮನ ಸೆಳೆದರು.

ಆಯಿಷ್ ಸಂಸ್ಥೆಗೆ ಪ್ರತಿದಿನ 400ರಿಂದ 500 ವಿಶೇಷ ಮಕ್ಕಳು ಪೋಷಕರೊಂದಿಗೆ ಆಗಮಿಸಲಿದ್ದಾರೆ. ಕೆಲವರು ವೀಲ್‌ಚೇರ್‌ನಲ್ಲಿ ಮಕ್ಕಳನ್ನು ಕರೆತರುತ್ತಾರೆ. ಆದರೆ, ಬೋಗಾದಿ ರಸ್ತೆಯ ಆಯಿಷ್ ಜಂಕ್ಷನ್‌ನಿಂದ ಎಸ್‌ಜೆಸಿಇ ಕಾಲೇಜು ರಸ್ತೆ ಮೂಲಕ ಆಯಿಷ್ ಸಂಸ್ಥೆಗೆ ಹೋಗಲು ಮಕ್ಕಳು ಹಾಗೂ ಪೋಷಕರಿಗೆ ತೀವ್ರತರನಾದ ತೊಂದರೆಯಾಗುತ್ತಿರುವುದನ್ನು ಗಮನಿಸಿದ ಗ್ರೀನ್ ಫೀಸ್ ಇಂಡಿಯಾ ಸಂಸ್ಥೆ, ಮೈಸೂರು ಸ್ಕೂಲ್ ಆಫ್ ಆರ್ಕಿಟೆಕ್ಚರ್, ಆರ್‌ಐ, ಎಸ್‌ಜೆಸಿಇ, ಎಂಜಿಪಿ, ಸ್ಥಳೀಯ ನಾಗರೀಕರ ಬೆಂಬಲ ಪಡೆದು ಇತ್ತೀಚೆಗೆ 'ಮೈಸೂರು ರೈಸಿಂಗ್' ಅಭಿಯಾನದ ಮೂಲಕ ಆಯಿಷ್ ಮುಂದೆ ಸರ್ವೆ ನಡೆಸಿ ಜನಾಭಿಪ್ರಾಯ ಸಂಗ್ರಹಿಸಲಾಗಿತ್ತು. ಈ ವೇಳೆ ಆಯಿಷ್‌ಗೆ ಬರುವ ವಿಶೇಷ ಮಕ್ಕಳಿಗೆ ನೆರವಾಗುವ ನಿಟ್ಟಿನಲ್ಲಿ ವಿಶೇಷ ಕ್ರಮ ಕೈಗೊಳ್ಳಲು ಸಾರ್ವಜನಿಕರು ಮುಕ್ತವಾಗಿ ಜನಾಭಿಪ್ರಾಯ ಸಲ್ಲಿಸಿದ್ದರು.

ವಿಶೇಷ ಡಿಸೈನ್: ಸಾರ್ವಜನಿಕರ ಅಭಿಪ್ರಾಯವನ್ನು ಸಂಗ್ರಹಿಸಿದ ಬಳಿಕ ಪೊಲೀಸ್, ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳೊಂದಿಗೆ ಚರ್ಚಿಸಿ ಆಯಿಷ್ ಬಳಿ ವಿಶೇಷ ಮಕ್ಕಳಿಗೆ ನೆರವಾಗುವ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಕ್ರಮ ಮತ್ತು ಜೀಬ್ರಾ ಕ್ರಾಸಿಂಗ್ ವಿಶೇಷ ಡಿಸೈನ್ ಸಿದ್ಧಪಡಿಸಲಾಗಿತ್ತು. ಇಂದು ಬೆಳಗ್ಗೆ 50ಕ್ಕೂ ಹೆಚ್ಚು ಮಂದಿ ಸ್ವಯಂಸೇವಕರು ಮತ್ತು ವಿದ್ಯಾರ್ಥಿಗಳು ಆಯಿಷ್ ಮುಂಭಾಗ ಆಕರ್ಷಕ ವಿನ್ಯಾಸದಲ್ಲಿ ಜೀಬ್ರಾ ಕ್ರಾಸಿಂಗ್ ಬರೆದು, ಪಾದಚಾರಿ ಮತ್ತು ವ್ಹೀಲ್ ಚೇರ್ ಸಂಚರಿಸುವವರಿಗಾಗಿ ಪ್ರತ್ಯೇಕವಾಗಿ ಪಥ ಗುರುತಿಸಲು ಬಣ್ಣ ಬಳಿಯುವ ಮೂಲಕ ವಾಹನ ಸವಾರರಲ್ಲಿ ಜಾಗೃತಿ ಮೂಡಿಸಲಾಯಿತು.

ಜನರ ಸಹಕಾರ: ಗ್ರೀನ್ ಪೀಸ್ ಇಂಡಿಯಾ ಸಂಸ್ಥೆಯ ದೀಪಕ್ ಶ್ರೀನಿವಾಸನ್ ಇಂದು ಬೆಳಗ್ಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಆಯಿಷ್ ಬಳಿ ವಿಶೇಷ ಮಕ್ಕಳು ರಸ್ತೆ ದಾಟಲು ಇದುವರೆಗೂ ಜೀಬ್ರಾ ಕ್ರಾಸ್ ಇರಲಿಲ್ಲ. ಗ್ರೀನ್ ಪೀಸ್ ಇಂಡಿಯಾ ಸಂಸ್ಥೆ ಮೈಸೂರು ಸ್ಕೂಲ್ ಆಫ್ ಆರ್ಕಿಟೆಕ್ಚರ್ ಹಾಗೂ ಇನ್ನಿತರ ಸಂಸ್ಥೆಗಳ ಸಹಕಾರದೊಂದಿಗೆ ಸ್ಟ್ರೀಟ್ ಆಡಿಟ್ ನಡೆಸಿ ಮೈಸೂರಿನ ಅಭಿವೃದ್ಧಿ ಬಗ್ಗೆ ಸಾರ್ವಜನಿಕರ ಅಭಿಪ್ರಾಯ ಸಂಗ್ರಹಿಸಲಾಯಿತು. ಈ ವೇಳೆ ಬಹುತೇಕರು ಅಭಿವೃದ್ಧಿಗಿಂತ ಮೊದಲು ಪಾದಚಾರಿ ಮಾರ್ಗದ ಒತ್ತುವರಿ ತೆರವುಗೊಳಿಸಿ ಪಾದಚಾರಿಗಳ ಸಂಚಾರಕ್ಕೆ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದ್ದರು. ಅಲ್ಲದೇ ಆಯಿಷ್ ಬಳಿ ವಿಶೇಷ ಮಕ್ಕಳ ಸುಗಮ ಸಂಚಾರಕ್ಕೆ ತುರ್ತು ಕ್ರಮ ಕೈಗೊಳ್ಳುವಂತೆ ಸಲಹೆ ನೀಡಿದ್ದರು. ಈ ಹಿನ್ನೆಲೆಯಲ್ಲಿ ವಿಶೇಷ ವಿನ್ಯಾಸದಲ್ಲಿ ಜೀಬ್ರಾ ಕ್ರಾಸ್, ವ್ಹೀಲ್ ಚೇರ್‌ನಲ್ಲಿ ಬರುವವರಿಗೆ ಪ್ರತ್ಯೇಕ ಪಥ, ಪಾದಚಾರಿಗಳ ಸಂಚಾರಕ್ಕೆ ಪಥ ಗುರುತಿಸುವ ನಿಟ್ಟಿನಲ್ಲಿ ಇಂದು ರಸ್ತೆಗೆ ಬಣ್ಣ ಬಳಿಯಲಾಗಿದೆ ಎಂದು ತಿಳಿಸಿದರು.

ಹಲವು ಸಲಹೆ ನೀಡಲಾಗಿದೆ: ಮೈಸೂರು ಸ್ಕೂಲ್ ಆಫ್ ಆರ್ಕಿಟೆಕ್ಚರ್ ಡೀನ್ ಮತ್ತು ಡೈರೆಕ್ಟರ್ ಡಾ. ಎಚ್.ಎಸ್.ಚಂಪಾ ಮಾತನಾಡಿ, ಆಯಿಷ್ ಮುಂಭಾಗದ ರಸ್ತೆ ಹೆಚ್ಚು ವಾಹನ ಸಂಚರಿಸುವ ರಸ್ತೆಯಾಗಿದೆ. ಪ್ರತೀ ದಿನ ಬೆಳಗ್ಗೆ 7.30ರಿಂದ 11.30ರವರೆಗೆ 1 ನಿಮಿಷಕ್ಕೆ 100ಕ್ಕೂ ಹೆಚ್ಚು ವಾಹನ ಸಂಚರಿಸುತ್ತವೆ. ಆಯಿಷ್ ಸಂಸ್ಥೆಯಲ್ಲಿ 500ಕ್ಕೂ ಹೆಚ್ಚು ಪುಟ್ಟಪುಟ್ಟ ವಿಶೇಷ ಮಕ್ಕಳು ಚಿಕಿತ್ಸೆ ಮತ್ತು ತರಬೇತಿಗೆಂದು ಪೋಷಕರೊಂದಿಗೆ ಪ್ರತೀ ದಿನ ಬರುತ್ತಾರೆ. ಆ ಮಕ್ಕಳು ವಾಹನದ ದಟ್ಟಣೆಯಿಂದ ಕೂಡಿರುವ ಆಯಿಷ್ ಸಮೀಪದ ಬೋಗಾದಿ ರಸ್ತೆಯ ಜೆಂಕ್ಷನ್ ದಾಟಲು ಹಾಗೂ ಆಯಿಷ್ ಸಂಸ್ಥೆಯ ಒಳಗೆ ಹೋಗಲು ಪರದಾಡುವಂತಾಗಿದೆ. ಈ ಹಿನ್ನೆಲೆಯಲ್ಲಿ ಮೈಸೂರು ಪೊಲೀಸರಿಗೆ ಹಲವು ಸಲಹೆ ನೀಡಲಾಗಿದ್ದು, ಆಯಿಷ್ ಬಳಿ ಬೋಗಾದಿ ರಸ್ತೆಯ ವೃತ್ತದಲ್ಲಿ ಪಾದಚಾರಿಗಳು ರಸ್ತೆ ದಾಟಲು ನಾಲ್ಕೂ ರಸ್ತೆಗಳಲ್ಲೂ ಏಕ ಕಾಲಕ್ಕೆ 20 ಸೆಕೆಂಡ್ ಕಾಲಾವಕಾಶ ನೀಡುವಂತೆ ಕೋರಲಾಗಿದೆ ಎಂದರು.

ಇಂದು ಆಯಿಷ್ ಗೇಟ್ ಬಳಿ ಎರಡೂ ಬದಿಯಲ್ಲೂ ವ್ಹೀಲ್ ಚೇರ್ ಚಿಹ್ನೆ, ಮಕ್ಕಳ ಚಿಹ್ನೆ ಇರುವ ಜೀಬ್ರಾ ಕ್ರಾಸ್ ಚಿತ್ರಿಸಲಾಗಿದೆ. ಅಲ್ಲದೇ ವ್ಹೀಲ್ ಚೇರ್‌ನಲ್ಲಿ ಬರುವ ಮಕ್ಕಳು ಆಯಿಷ್‌ನಿಂದ ಬೋಗಾದಿ ರಸ್ತೆ ದಾಟಲು ರಸ್ತೆ ಬದಿ ಪಿಂಕ್ ಬಣ್ಣದಲ್ಲಿ ಪಥ ಗುರುತಿಸಲಾಗಿದೆ. ಅಲ್ಲದೇ ಆಯಿಷ್ ಮುಂಭಾಗದ ಪಥದಲ್ಲಿ ಫಾಸ್ಟ್‌ಫುಡ್ ಮತ್ತು ಪೆಟ್ಟಿಗೆ ಅಂಗಡಿಗಳ ಮಾಲೀಕರು ಪೂರ್ಣ ಪ್ರಮಾಣದಲ್ಲಿ ಫುಟ್‌ಪಾತ್ ಅತಿಕ್ರಮಣ ತಡೆಗಟ್ಟಲು ಪಾದಚಾರಿಗಳು ಸಂಚರಿಸಲು ಆಕಾಶ ತಿಳಿನೀಲಿ ಬಣ್ಣ ಬಳಿಯಲಾಗಿದೆ. ಅಲ್ಲದೇ ಜೀಬ್ರಾ ಕ್ರಾಸ್‌ಗೂ ಮುನ್ನ ತುಸು ದೂರದಲ್ಲಿ ವೇಗವಾಗಿ ಬರುವ ವಾಹನಗಳ ಸವಾರರು ವೇಗ ತಗ್ಗಿಸಲು ಬಣ್ಣ ಬಳಿಯಲಾಗಿದೆ ಎಂದು ತಿಳಿಸಿದರು.

ಎಂಜಿಪಿ ಅಧ್ಯಕ್ಷ ರಾಯ್ ಜೋಸೆಫ್ ಮಾತನಾಡಿ, ಗ್ರೀನ್ ಪೀಸ್ ಇಂಡಿಯಾ ಸಂಸ್ಥೆ ಇಂದು ಆಯಿಷ್ ಮುಂದೆ ಜೀಬ್ರಾ ಕ್ರಾಸಿಂಗ್ ಸೇರಿದಂತೆ ವಿಶೇಷ ಮಕ್ಕಳು ಸುರಕ್ಷಿತವಾಗಿ ರಸ್ತೆ ದಾಟಲು ಅವಕಾಶ ಮಾಡಿಕೊಟ್ಟಿರುವುದಕ್ಕೆ ಎಂಜಿಪಿ ಸ್ವಾಗತಿಸುತ್ತದೆ ಎಂದು ತಿಳಿಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಘಜನಿ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೈಸ್ ಆಫ್ ಅಶೋಕ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಓ ರೋಮಿಯೋ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಆಕಾಶ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಸಂಪತ್ತಿಗೆ ಸವಾಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಕಾಂಚನಾ–2 (ತೆ)	4 ಪ್ರದರ್ಶನಗಳು
ಸಂಗಂ	
ಹಯಗ್ರೀವ (ಕ)	4 ಪ್ರದರ್ಶನಗಳು
ಲಿಡೋ	
ಭಾರತ ಮಹಾಸಾಯುಲಕು ವಿಘ್ನಪತಿ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಸಂಪತ್ತಿಗೆ ಸವಾಲ್ (ಕ)	4 ಪ್ರದರ್ಶನಗಳು

ತ್ರಿವಳಿ ಕೊಲೆಗಾರರಿಗೆ ಜೀವಾವಧಿ ಶಿಕ್ಷೆ

ಬೆಂಗಳೂರು: ಸುಮಾರು 17 ವರ್ಷಗಳ ಹಿಂದೆ ಬೆಂಗಳೂರನ್ನು ಬೆಚ್ಚಿಬೀಳಿಸಿದ್ದ ತ್ರಿವಳಿ ಕೊಲೆ ಪ್ರಕರಣದಲ್ಲಿ ಮಹತ್ವದ ತೀರ್ಪು ಹೊರಬಿದ್ದಿದೆ. ಈ ಪ್ರಕರಣದಲ್ಲಿ ನಾಲ್ವರು ವಲಸೆ ಕಾರ್ಮಿಕರನ್ನು ದೋಷಿಗಳೆಂದು ಘೋಷಿಸಿರುವ ರಾಜ್ಯ ಹೈಕೋರ್ಟ್, ಅವರಿಗೆ ಜೀವಾವಧಿ ಶಿಕ್ಷೆ ವಿಧಿಸಿದೆ. ಬೆಂಗಳೂರಿನ 65ನೇ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯವು ಮೊದಲು ನೀಡಿದ್ದ ಖುಲಾಸೆ ತೀರ್ಪನ್ನು ಪ್ರಶ್ನಿಸಿ, ಪ್ರಾಸಿಕ್ಯೂಷನ್ ಸಲ್ಲಿಸಿದ್ದ ಮೇಲ್ಮನವಿಯನ್ನು ಪರಿಗಣಿಸಿದ ಬಳಿಕ ನ್ಯಾಯಮೂರ್ತಿ ಹೆಚ್.ಪಿ.ಸಂದೇಶ್ ನೇತೃತ್ವದ ವಿಭಾಗೀಯ ಪೀಠ ಈ ಮಹತ್ವದ ತೀರ್ಪು ನೀಡಿದೆ.

ಈ ಪ್ರಕರಣವು 2009ರಲ್ಲಿ ಬೆಂಗಳೂರಿನ ಆರ್‌ಟಿ ನಗರದಲ್ಲಿ ನಿವೃತ್ತ ಪ್ರಾಧ್ಯಾಪಕರಾಗಿದ್ದ ಪುರುಷೋತ್ತಮ ಲಾಲ್ ಸಚ್‌ದೇವ್, ಅವರ ಪತ್ನಿ ರೀಟಾ ಹಾಗೂ ಅವರ ಅಂಗವಿಕಲ ಪುತ್ರ ದೀಪಕ್ ಸಚ್‌ದೇವ್ ಅಲಿಯಾಸ್ ಮುನ್ನಾ ಅವರನ್ನು ಕ್ರೂರವಾಗಿ ಹತ್ಯೆ ಮಾಡಲಾಗಿತ್ತು. ಆ ಘಟನೆ ಬೆಂಗಳೂರಿನ ಜನತೆಯನ್ನು ಬೆಚ್ಚಿಬೀಳಿಸಿತ್ತು. ಈ ನಿಗೂಢ ಪ್ರಕರಣದ ತನಿಖೆ ದೀರ್ಘಕಾಲ ಮುಂದುವರಿದಿತ್ತು.

ಆರೋಪಿಗಳನ್ನು ಪತ್ತೆಹಚ್ಚುವ ಸಲುವಾಗಿ ಹಲವು ರಾಜ್ಯಗಳಲ್ಲಿ ತನಿಖೆ ನಡೆಸಲಾಗಿತ್ತು. ತನಿಖೆಯ ಭಾಗವಾಗಿ ಅಧಿಕಾರಿಗಳು ಸುಮಾರು 2,000 ಕಿಲೋಮೀಟರ್ ದೂರದ ನಕ್ಸಲ್ ಪ್ರಭಾವಿತ ಪ್ರದೇಶಗಳವರೆಗೂ ತೆರಳಿ ಮಾಹಿತಿ ಸಂಗ್ರಹಿಸಿದ್ದರು. ಸುಮಾರು ಒಂದೂವರೆ ವರ್ಷಗಳ ಕಾಲ ನಡೆದ ದೀರ್ಘ ತನಿಖೆಯ ಬಳಿಕ ಆರೋಪಿಗಳನ್ನು ಬಂಧಿಸಲಾಗಿತ್ತು.

ಬಿಸಿಎಂ ಹಾಸ್ಟೆಲ್ ಮ್ಯಾನೇಜರ್ ಆತ್ಮಹತ್ಯೆ

ಹಾಸನ: ಬಿಸಿಎಂ ಹಾಸ್ಟೆಲ್ ಮ್ಯಾನೇಜರ್ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿರುವ ಘಟನೆ ಜಿಲ್ಲೆಯ ಚನ್ನರಾಯಪಟ್ಟಣದಲ್ಲಿ ನಡೆದಿದೆ.

ನಗರದ ನಿವಾಸಿ ಲೋಕೇಶ್(45), ದಾಸರಕೊಪ್ಪಲು ನಿವಾಸದಲ್ಲಿ ಶನಿವಾರ ರಾತ್ರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಹಾಸನದ ಗುಡ್ಡೇನಹಳ್ಳಿಯಲ್ಲಿ ಎರಡು ಹಾಸ್ಟೆಲ್‌ಗಳ ವಾರ್ಡನ್ ಆಗಿದ್ದ ಲೋಕೇಶ್, ಕೆಲ ದಿನಗಳ ಹಿಂದೆ ಮ್ಯಾನೇಜರ್ ಆಗಿ ಬಡ್ತಿ ಹೊಂದಿದ್ದರು. ಸದ್ಯ ಚನ್ನರಾಯಪಟ್ಟಣದ ಬಿಸಿಎಂ ಹಾಸ್ಟೆಲ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಹಾಸನ ಪೆನ್‌ಷನ್ ಮೊಹಲ್ಲಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎಪಿಎಂಸಿ ತರಕಾರಿ ದಲ್ಲಾಳರ ಸಂಘಕ್ಕೆ ಅಧ್ಯಕ್ಷರಾಗಿ ನಾಗರಾಜ್ ಉಪಾಧ್ಯಕ್ಷರಾಗಿ ಮಹದೇವಸ್ವಾಮಿ, ಕಾರ್ಯದರ್ಶಿಯಾಗಿ ಪರಮೇಶ್



ಮೈಸೂರು, ಮಾ.15– ಮೈಸೂರಿನ ವ್ಯವಸಾಯೋತ್ಪನ್ನ ಮಾರುಕಟ್ಟೆ ತರಕಾರಿ ದಲ್ಲಾಳರ ಸಂಘದ ಅಧ್ಯಕ್ಷರಾಗಿ ಆಯರಹಳ್ಳಿ ಎ.ಎಸ್. ನಾಗರಾಜ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಬಂಡಿಪಾಳ್ಯ ಎಪಿಎಂಸಿ ಆವರಣದಲ್ಲಿ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಈ ಆಯ್ಕೆ ನಡೆದಿದ್ದು, ಉಪಾಧ್ಯಕ್ಷರಾಗಿ ಬಿ.ಕೆ.ಮಹದೇವಸ್ವಾಮಿ ಆಯ್ಕೆಯಾಗಿದ್ದಾರೆ.

ಗೌರವಾಧ್ಯಕ್ಷರಾಗಿ ಬಿ.ಸೋಮಶೇಖರ್ ಆರಾಧ್ಯ, ಕಾರ್ಯದರ್ಶಿಯಾಗಿ ಜಿ.ಪರಮೇಶ್, ಸಹ ಕಾರ್ಯದರ್ಶಿಯಾಗಿ ನಂಜಪ್ಪ ಶೆಟ್ಟಿ (ದೀಪು) ಮತ್ತು ಖಜಾಂಚಿಯಾಗಿ ಶಾಂತವೀರೇಂದ್ರಸ್ವಾಮಿ ಆಯ್ಕೆಯಾಗಿದ್ದಾರೆ. ನಿರ್ದೇಶಕರಾಗಿ ವೈಎಸ್.ಬಸವರಾಜು, ಅಬ್ದುಲ್ ರಹೀಮ್, ಆರ್.ಸಿ.ಚಂದ್ರನ್, ಬಿ.ಉಮಾಪತಿ ರಾವ್, ಬಿ.ಎನ್.ಸತೀಶ್, ಸುಂದರ್‌ರಾಜ್, ಎ.ಜೆ.ಚೇತನ್, ಸಿ.ಟಿ.ಮಂಜುನಾಥ್, ಮಹದೇವ ಸ್ವಾಮಿ (ಓಸಿ), ಸಿದ್ದಯ್ಯ (ಮೂಗಪ್ಪ) ಅವಿರೋಧವಾಗಿ ಆಯ್ಕೆಯಾಗಿದ್ದು, ಸಂಘದ ಸದಸ್ಯರು ಮತ್ತು ಅಭಿಮಾನಿಗಳು ಅಭಿನಂದಿಸಿದ್ದಾರೆ.

16 ವರ್ಷಗಳಿಂದ ಹುಡುಕುತ್ತಿದ್ದ ಕಳ್ಳಿ ಬಂಧನ; ಪರಾರಿ

ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸಿ ಸಖಿ ಕೇಂದ್ರದಿಂದ ಎಸ್ಕೇಪ್!

ರಾಮನಗರ: ಪೊಲೀಸ್ ಕಸ್ಟಡಿಯಲ್ಲಿದ್ದ ಕುಖ್ಯಾತ ಕಳ್ಳಿ ಬೆಂಗಳೂರು ದಕ್ಷಿಣ ಜಿಲ್ಲೆಯ ರಾಮನಗರದ ಜಿಲ್ಲಾಸ್ಪತ್ರೆಯ ಸಖಿ ಕೇಂದ್ರ'ದಿಂದ ಪರಾರಿಯಾಗಿರುವ ಘಟನೆ ನಡೆದಿದೆ.

ಕಳೆದ 16 ವರ್ಷಗಳಿಂದ ಪೊಲೀಸರಿಗೆ ಬೇಕಾಗಿದ್ದ ತಮಿಳುನಾಡು ಮೂಲದ ಮಾಲಾ (40)ಳನ್ನು ಇತ್ತೀಚೆಗೆ ಆಕೆಯ ಇಬ್ಬರು ಸಹಚರರೊಂದಿಗೆ ಮಾಗಡಿ ಪೊಲೀಸರು ಬಂಧಿಸಿದ್ದರು. ಸೂರ್ಯಾಸ್ತದ ನಂತರ ಮಹಿಳಾ ಆರೋಪಿಗಳನ್ನು ಪೊಲೀಸ್ ಠಾಣೆಯಲ್ಲಿ ಬಂಧಿಸಲು ಸಾಧ್ಯವಾಗದ ಕಾರಣ, ಆಕೆಯನ್ನು ರಾಮನಗರ ಜಿಲ್ಲಾ ಆಸ್ಪತ್ರೆಯ ಸಖಿ ಕೇಂದ್ರಕ್ಕೆ ಸ್ಥಳಾಂತರಿಸಲಾಯಿತು. ಶುಕ್ರವಾರ ಮಧ್ಯರಾತ್ರಿ 12.30ರ ಸುಮಾರಿಗೆ ಆಕೆ ತಪ್ಪಿಸಿಕೊಂಡಿದ್ದಾಳೆ.

ಮಾಲಾ ಪರಾರಿಯಾಗುವಾಗ ಇಬ್ಬರು ಮಹಿಳಾ ಪೊಲೀಸ್ ಸಿಬ್ಬಂದಿ ಆಸ್ಪತ್ರೆಯಲ್ಲಿ ಕಾವಲು ಕಾಯುತ್ತಿದ್ದರು. ಆಕೆ ಓಡಿಹೋಗಿದ್ದಾಳೆಂದು ಅರಿತುಕೊಂಡ ಪೊಲೀಸರು ಬಸ್ ನಿಲ್ದಾಣಗಳು, ರೈಲ್ವೆ ನಿಲ್ದಾಣ ಮತ್ತು ಇತರ ಸ್ಥಳಗಳಲ್ಲಿ ಆಕೆಗಾಗಿ ಹುಡುಕಾಟ ನಡೆಸಿದರೂ ಆಕೆ ಪತ್ತೆಯಾಗಿಲ್ಲ.

ನೊಂದವರಿಗೆ, ಬಡವರಿಗೆ ನ್ಯಾಯ ಒದಗಿಸುವುದು ವಕೀಲರ ವೃತ್ತಿ ಧರ್ಮ

ಕಾನೂನು ವಿದ್ಯಾರ್ಥಿಗಳು, ವಕೀಲರಿಗೆ ನಿವೃತ್ತ ನ್ಯಾಯ ಮೂರ್ತಿಗಳಿಂದ ಕಾನೂನಿನ ಪಾಠ



ಮೈಸೂರು ವಿವಿ ಮಾನಸಗಂಗೋತ್ರಿ ಸೆನೆಟ್ ಭವನದಲ್ಲಿ 'ತರಗತಿ ಕೊಠಡಿಯಿಂದ ಕೋರ್ಟ್ ಹಾಲ್: ಸಾಮಾಜಿಕ ನ್ಯಾಯಕ್ಕಾಗಿ ಕಾನೂನು ವಿದ್ಯಾರ್ಥಿಗಳು' ಕುರಿತ ಕಾರ್ಯಾಗಾರ ನಡೆಯಿತು.

ಮೈಸೂರು, ಮಾ.15(ಎಂಕೆ)– ನೊಂದವರಿಗೆ, ಬಡವರಿಗೆ ನ್ಯಾಯ ಒದಗಿಸುವುದು ವಕೀಲರ ವೃತ್ತಿ ಧರ್ಮವಾಗಿದ್ದು, ಕಕ್ಷಿದಾರರ ಮುಖದಲ್ಲಿ ನಗು ಮೂಡುವಂತೆ ಮಾಡಿದರೆ ವೃತ್ತಿ ಬದುಕು ಸಾರ್ಥಕವಾಗಲಿದೆ ಎಂದು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರು ಹಾಗೂ ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿಗಳಾದ ವಿ.ರಾಮ ಸುಬ್ರಮಣಿಯನ್, ಕಾನೂನು ವಿದ್ಯಾರ್ಥಿಗಳು ಮತ್ತು ವಕೀಲರಿಗೆ ತಿಳಿಸಿದರು.

ಮೈಸೂರು ವಿವಿ ಮಾನಸಗಂಗೋತ್ರಿ ಸೆನೆಟ್ ಭವನದಲ್ಲಿ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕೆನರಾ ಬ್ಯಾಂಕ್ ಹಾಗೂ ಪಂಜಾಬ್ ನ್ಯಾಷನಲ್ ಬ್ಯಾಂಕ್ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ 'ತರಗತಿ ಕೊಠಡಿಯಿಂದ ಕೋರ್ಟ್ ಹಾಲ್: ಸಾಮಾಜಿಕ ನ್ಯಾಯಕ್ಕಾಗಿ ಕಾನೂನು ವಿದ್ಯಾರ್ಥಿಗಳು' ಕುರಿತ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ವಕೀಲ ವೃತ್ತಿಯಲ್ಲಿ ಹೆಚ್ಚಿನ ಆದಾಯಕ್ಕಿಂತ ಗುರಿ ಸಾಧನೆ ಮುಖ್ಯ ಎಂದರು.

ವಕೀಲರಿಗೆ ಹಣಕ್ಕಿಂತ, ತಮ್ಮ ಕಕ್ಷಿದಾರರಿಗೆ ನ್ಯಾಯ ದೊರಕಿಸಿಕೊಟ್ಟು, ಅವರ ಮುಖದಲ್ಲಿ ಕಾಣುವ ನಗು ಆತ್ಮ ತೃಪ್ತಿಯನ್ನು ನೀಡಲಿದೆ. ಅದೇ ರೀತಿ ಭಾರತದಲ್ಲಿ 1987 ರಲ್ಲಿ ಕಾನೂನು ಸೇವೆಗಳ ಪ್ರಾಧಿಕಾರದ ಮೂಲಕ ಉಚಿತ ಕಾನೂನು ಸೇವೆಗಳನ್ನು ನೀಡಲಾಗುತ್ತಿದೆ. ಬಡವರು, ನೊಂದವರಿಗೆ ಉಚಿತ ಕಾನೂನಿನ ಸೇವೆ ನೀಡಲಾಗುತ್ತಿದೆ ಎಂದು ತಿಳಿಸಿದರು.

ಹೈಕೋರ್ಟ್ ನ್ಯಾಯಮೂರ್ತಿಗಳಾದ ಅನು ಶಿವರಾಮನ್ ಮಾತನಾಡಿ, ಕಾರ್ಯಾಗಾರದ ಜೊತೆಗೆ ಲೀಗಲ್ ಎಡ್ ಕ್ಯಾಂಪ್ ಕ್ಲಿನಿಕ್‌ಗಳನ್ನು ಆಯೋಜಿಸುವ ಬಗ್ಗೆ ಅರಿವು ಮೂಡಿಸಬೇಕು. ಮೈಸೂರು ವ್ಯಾಪ್ತಿಯ 13 ಕಾನೂನು ಕಾಲೇಜುಗಳ ಸಹಯೋಗದಿಂದ 29 ಹಳ್ಳಿಗಳಲ್ಲಿ ಲೀಗಲ್ ಎಡ್ ಕ್ಯಾಂಪ್‌ಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಭವಿಷ್ಯದ ವಕೀಲರಾಗುವ ಕಾನೂನು ವಿದ್ಯಾರ್ಥಿಗಳಿಗೆ ಈ ಕಾರ್ಯಾಗಾರವು ಅತ್ಯಂತ ಅಮೂಲ್ಯವಾಗಿದೆ ಎಂದು ಹೇಳಿದರು.

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಶಶಿಧರ್ ಶೆಟ್ಟಿ ಮಾತನಾಡಿ, ಬಡವ-ಶ್ರೀಮಂತ ಎಂಬ ಭೇದ ಭಾವದ ಮೇಲೆ ನ್ಯಾಯ ವಿಳಂಬವಾಗಬಾರದು. ಪ್ರತಿಯೊಬ್ಬರಿಗೂ ನ್ಯಾಯ ಸಕಾಲದಲ್ಲಿ ದೊರೆಯಬೇಕು. ಈ ನಿಟ್ಟಿನಲ್ಲಿ ಕಾನೂನು ಸೇವೆಗಳ ಪ್ರಾಧಿಕಾರ ಕಾರ್ಯೋನ್ಮುಖವಾಗಿದೆ. ರಾಜ್ಯದಲ್ಲಿ 155 ಕಾನೂನು ಕಾಲೇಜುಗಳಿದ್ದು, ಅಗತ್ಯ ತರಬೇತಿ ಮೂಲಕ ಕಾನೂನು ಮಹತ್ವ ತಿಳಿಸಿಕೊಡಲಾಗುತ್ತಿದೆ ಎಂದರು.

ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಮಾತನಾಡಿ, ಕಾನೂನು ಅಧ್ಯಯನ ಒಂದು ವೃತ್ತಿಯಾಗಿದ್ದು, ತುಳಿತಕ್ಕೆ ಒಳಗಾದವರಿಗೆ ನ್ಯಾಯ ಒದಗಿಸುವುದು ವಕೀಲರ ಕರ್ತವ್ಯವಾಗಿದೆ. ಸಾರ್ವಜನಿಕರಿಗೆ ಕಾನೂನಿನ ಬಗ್ಗೆ ಅರಿವು ಮೂಡಿಸುವುದು ನಮ್ಮ-ನಿಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ತಿಳಿಸಿದರು.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಕೆ.ಕೆ.ಅಮರ್‌ನಾಥ್, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ.ಸಿ.ಬಸವರಾಜು, ಹೈಕೋರ್ಟ್ ವಕೀಲ ಶ್ರೀಧರ್ ಪ್ರಭು ಮತ್ತಿತರರು ಉಪಸ್ಥಿತರಿದ್ದರು.

ವಿಶ್ವ ರ್‍ಯಾಂಕಿಂಗ್ ಟೆನ್ನಿಸ್ ಟೂರ್ನಮೆಂಟ್

13 ವರ್ಷದ ಪದ್ಮಪ್ರಿಯಾ ರನ್ನರ್ ಅಪ್



ಹರಿಯಾಣದ ಗುರುಗ್ರಾಮದಲ್ಲಿ ನಡೆದ 18 ವರ್ಷದೊಳಗಿನ ಐಟಿಎಫ್ ಜೆ–60 ಜೂನಿಯರ್ಸ್ ವಿಶ್ವ ರ್‍ಯಾಂಕಿಂಗ್ ಟೆನಿಸ್ ಟೂರ್ನಮೆಂಟ್‌ನಲ್ಲಿ ಫೈನಲ್ ಪಂದ್ಯದಲ್ಲಿ ಚಾಂಪಿಯನ್ ಆದ ಸಿಗ್ಧಾ ಕಾಂಡಾ ಮತ್ತು ರನ್ನರ್ ಅಪ್ ಆದ ಪದ್ಮಪ್ರಿಯಾ (ಎಡತುದಿಯಲ್ಲಿರುವವರು) ಜೋಡಿ.

ಮೈಸೂರು,ಮಾ.15(ಎಂಟಿವೈ)–ಹರಿಯಾಣದ ಗುರುಗ್ರಾಮದಲ್ಲಿ ಮಾ.9ರಿಂದ 14ರವರೆಗೆ ನಡೆದ 18 ವರ್ಷದೊಳಗಿನ ಐಟಿಎಫ್ ಜೆ–60 ಜೂನಿಯರ್ಸ್ ವಿಶ್ವ ರ್‍ಯಾಂಕಿಂಗ್ ಟೆನಿಸ್ ಟೂರ್ನಮೆಂಟ್‌ನಲ್ಲಿ ಮೈಸೂರಿನ 13 ವರ್ಷದ ಟೆನ್ನಿಸ್ ಆಟಗಾರ್ತಿ ಪದ್ಮಪ್ರಿಯಾ ರಮೇಶ್‌ಕುಮಾರ್ ರನ್ನರ್–ಅಪ್ ಸ್ಥಾನ ಪಡೆದಿದ್ದಾರೆ.

18 ವರ್ಷದೊಳಗಿನ ಐಟಿಎಫ್ ಜೆ–60 ಜೂನಿಯರ್ಸ್ ವಿಶ್ವ ರ್‍ಯಾಂಕಿಂಗ್ ಟೆನಿಸ್ ಟೂರ್ನಮೆಂಟ್‌ನಲ್ಲಿ ಪದ್ಮ ಪ್ರಿಯಾ ಸೆಮಿಫೈನಲ್‌ನಲ್ಲಿ 1ನೇ ಶ್ರೇಯಾಂಕದ ಆಟಗಾರ್ತಿ ಪ್ರಿಷಾ ನಿಖಿಲ್ ಶಿಂಧೆ ಅವರನ್ನು ಸೋಲಿಸಿ, ಫೈನಲ್ ಪ್ರವೇಶಿಸಿದ್ದರು. ಶನಿವಾರ ನಡೆದ ಫೈನಲ್ ಪಂದ್ಯದಲ್ಲಿ 17ನೇ ವರ್ಷದ 2ನೇ ಶ್ರೇಯಾಂಕದ ಬೆಂಗಳೂರಿನ ಆಟಗಾರ್ತಿ ಸ್ನಿಗ್ಧಾ ಕಾಂಡಾ ವಿರುದ್ಧ 4–6, 4–6 ಸೆಟ್ ಅಂತರದಲ್ಲಿ ಸೋಲನುಭವಿಸಿ, ರನ್ನರ್ ಅಪ್ ಆದರೆ, ಸಿಗ್ಧಾ ಕಾಂಡಾ ಚಾಂಪಿಯನ್ ಆಗಿ ಹೊರಹೊಮ್ಮಿದರು.

ಇದಕ್ಕೂ ಮುನ್ನ ಸೆಮಿಫೈನಲ್‌ನಲ್ಲಿ ಪದ್ಮಪ್ರಿಯಾ 6–4, 6–1 ಅಂಕಗಳೊಂದಿಗೆ 1ನೇ ಶ್ರೇಯಾಂಕದ ಆಟಗಾರ್ತಿ ಪ್ರಿಷಾ ನಿಖಿಲ್ ಶಿಂಧೆ ಅವರನ್ನು ಸೋಲಿಸಿದರು. ಕ್ವಾರ್ಟರ್ ಫೈನಲ್‌ನಲ್ಲಿ ಪದ್ಮಪ್ರಿಯಾ 6–3, 6–4 ಅಂಕಗಳೊಂದಿಗೆ 6ನೇ ಶ್ರೇಯಾಂಕದ ಆಟಗಾರ್ತಿ ಸ್ವಸ್ತಿ ಸಿಂಗ್ ಅವರನ್ನು ಸೋಲಿಸಿದ್ದರು. ಎರಡನೇ ಸುತ್ತಿನಲ್ಲಿ ಪದ್ಮಪ್ರಿಯಾ 4ನೇ ಶ್ರೇಯಾಂಕಿತ ಆಟಗಾರ್ತಿ ಅಲೀನಾ ಫರೀದ್ ಅವರನ್ನು 6–1, 6–4 ಅಂಕಗಳಿಂದ ಸೋಲಿಸಿದ್ದರು.

ಭಾರತದಲ್ಲಿ ನಡೆಯುತ್ತಿರುವ ಐಟಿಎಫ್ ಜೆ60 ಜೂನಿಯರ್ಸ್ ವಿಶ್ವ ರ್‍ಯಾಂಕಿಂಗ್ ಟೆನಿಸ್ ಟೂರ್ನಮೆಂಟ್‌ನಲ್ಲಿ 13 ವರ್ಷದ ಭಾರತೀಯ ಬಾಲಕಿ ಫೈನಲ್ ತಲುಪಿದ್ದು ಇದೇ ಮೊದಲು ಎಂಬ ಹೆಗ್ಗಳಿಕೆಗೂ ಪದ್ಮಪ್ರಿಯಾ ಭಾಜನರಾಗಿದ್ದಾರೆ. ಹುಲಿ ಯೋಜನೆಯ ನಿರ್ದೇಶಕ ಡಾ.ಪಿ.ರಮೇಶ್‌ಕುಮಾರ್, ಚಾಮರಾಜನಗರ ವೃತ್ತದ ಸಿಸಿಎಫ್ ಡಾ.ಮಾಲತಿ ಪ್ರಿಯಾ ದಂಪತಿ ಪುತ್ರಿಯಾಗಿರುವ ಪದ್ಮಪ್ರಿಯಾ, ಮೈಸೂರಿನ ಕೂರ್ಗಳ್ಳಿಯ ಎಕ್ಸೆಲ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿನಿಯಾಗಿದ್ದು, ರಘುವೀರ್ ಟೆನಿಸ್ ಅಕಾಡೆಮಿಯ ರಘುವೀರ್ ಪೊನ್ನುಸ್ವಾಮಿ ಅವರಿಂದ ತರಬೇತಿ, ಮೈಸೂರಿನ ಎಕ್ಸ್‌ಟ್ರಾನ್ಸ್‌ನ ಸಾಗರ್ ಅವರಿಂದ ದೈಹಿಕ ಫಿಟ್‌ನೆಸ್ ತರಬೇತಿ ಪಡೆಯುತ್ತಿದ್ದಾರೆ.

ಸಾರ್ವಜನಿಕ ಪ್ರಕಟಣೆ

ಮೈಸೂರು ನಗರ, ಹೆಬ್ಬಾಳು 1ನೇ ಹಂತ, ಎಸ್.ಬಿ.ಐ. ಮುಖ್ಯ ರಸ್ತೆ, 5ನೇ ತಿರುವು, ಮನೆ ಸಂಖ್ಯೆ 197 ರಲ್ಲಿ ವಾಸವಾಗಿರುವ ಶ್ರೀ ಎಂ.ಎಸ್. ಪವನ್ ರವರ ಧರ್ಮಪತ್ನಿ ಶ್ರೀಮತಿ ಆರ್.ಅಶ್ವಿನಿ ಎಂಬ ಹೆಸರಿನ ನನ್ನ ಕಕ್ಷಿದಾರರು ಅನುಸೂಚಿ ಸ್ವತ್ತನ್ನು ಖರೀದಿಸಲು ಇಚ್ಛಿಸಿ ಸ್ವತ್ತಿನ ಮಾಲೀಕರಾದ ಬೆಂಗಳೂರು ಉತ್ತರ ಯಲಹಂಕ ನ್ಯೂ ಟೌನ್ ಮದರ್ ಡೈರಿ ಎದುರು ಎಸ್.ಎಫ್.ಎಸ್ 208 ನಂದಿಧಾಮ ಮನೆ ಸಂಖ್ಯೆ 165ರಲ್ಲಿ ವಾಸ ವಿರುವ ಶ್ರೀ.ಚಿಕ್ಕಣ್ಣ ರವರ ಮಗ ಶ್ರೀ ಚಿಕ್ಕಣ್ಣ ನಂದೀಶ್‌ರವರೊಂದಿಗೆ ಕ್ರಯದ ಒಪ್ಪಂದ ಮಾಡಿಕೊಂಡಿರುತ್ತಾರೆ.

ಅನುಸೂಚಿ ಸ್ವತ್ತಿನ ಸಂಬಂಧ ಯಾವುದೇ ವ್ಯಕ್ತಿ / ವ್ಯಕ್ತಿಗಳಿಗೆ ಯಾವುದೇ ರೀತಿಯ ಮಾಲೀಕತ್ವ, ಹಕ್ಕು, ಆಸಕ್ತಿ, ವಗೈರೆ ಇದ್ದಲ್ಲಿ ಅಥವಾ ಸದರಿ ಸ್ವತ್ತಿನ ಮಾರಾಟದ / ಕ್ರಯದ ಬಗ್ಗೆ ತಕರಾರು ಇದ್ದಲ್ಲ, ಅಂತಹ ತಕರಾರನ್ನು ಲಿಖಿತವಾಗಿ ಸೂಕ್ತ ದಾಖಲೆ ಸಹಿತ ಖುದ್ದಾಗಿ ನಮ್ಮ ಕಛೇರಿಗೆ ಈ ಪ್ರಕಟಣೆಯ ದಿನದಿಂದ ಹದಿನೈದು (15) ದಿನಗಳ ಒಳಗೆ ಸಲ್ಲಿಸತಕ್ಕದ್ದು. ಹಿತಾಸಕ್ತಿಯುಳ್ಳವರು ಸದರಿ ಅವಧಿಯಲ್ಲಿ ಯಾವುದೇ ರೀತಿಯ ಆಕ್ಷೇಪ ಅಥವಾ ತಕರಾರು ಸಲ್ಲಿಸದಿದ್ದಲ್ಲ, ಅನುಸೂಚಿ ಸ್ವತ್ತುಗಳ ಸಂಬಂಧ ಯಾವುದೇ ವ್ಯಕ್ತಿ / ವ್ಯಕ್ತಿಗಳಿಗೆ ಯಾವುದೇ ರೀತಿಯ ಹಿತಾಸಕ್ತಿ, ಹಕ್ಕು, ಅಥವಾ ಅಧಿಕಾರ ಇಲ್ಲವೆಂದು ಮತ್ತು ಸದರಿ ಭೂಮಾಲೀಕರೊಂದಿಗೆ ನಮ್ಮ ಕಕ್ಷಿದಾರರು ಮಾಡಿಕೊಂಡಿರುವ ಕ್ರಯದ ಒಪ್ಪಂದಕ್ಕೆ ಯಾವುದೇ ಆಕ್ಷೇಪಣೆ ಅಥವಾ ತಕರಾರು ಇರುವುದಿಲ್ಲವೆಂದು ಪರಿಗಣಿಸಲಾಗುವುದು.

ಅನುಸೂಚಿ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ತಿರುಮಕೂಡಲು ನರಸೀಪುರ ತಾಲ್ಲೂಕು, ಕಸಬಾ ಹೋಬಳಿ, ಇಂಡವಾಳು ಗ್ರಾಮದ ಜಮೀನು ಸರ್ವೆ ಸಂಖ್ಯೆ : 24/1 ರಲ್ಲಿ 14 ಗುಂಟೆ, 25/1 ರಲ್ಲಿ 5 ಗುಂಟೆ, 25/3 ರಲ್ಲಿ 20.08 ಗುಂಟೆ ಮತ್ತು 25/4 ರಲ್ಲಿ 1.17.08 ಎಕರೆ, ಒಟ್ಟು ವಿಸ್ತೀರ್ಣ 2.17 ಎಕರೆ [ಎರಡು ಎಕರೆ ಹದಿನೇಳು ಗುಂಟೆ] ಜಮೀನು ಈ ಮೇಲೆ ತಿಳಿಸಿದ ಕ್ರಯದ ವ್ಯವಹಾರಕ್ಕೆ ಒಳಪಟ್ಟಿರುತ್ತದೆ.

Sd/- H.P. Mahadevaswamy,
H.P.M. Law Associates, Advocates & Legal Consultants. Chambers at: Door No. 729, "Shiva Krupa", SH 88, Hinkal, Mysuru-570 030. Mob: 9886363973
Date: 16-3-2026